Swabhimani Sahakari
Pages : 44 / 20₹
Volume - 22
Issue - 01
January - 2025

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

2025 ಅಂತರರಾಷ್ಟ್ರೀಯ ಸಹಕಾರ ವರ್ಷ
ಧ್ಯೇಯ: "ಸಹಕಾರ ಸಂಸ್ಥೆಗಳ ಮೂಲಕ ಉತ್ತಮ ಜಗತ್ತನ್ನು ನಿರ್ಮಿಸಲು ಸಾಧ್ಯ"

ಸೌಹಾರ್ದ ಸಹಕಾರಿ
ರಜತ ಮಹೋತ್ಸವ 2025

ಜನವರಿ ೦೧, ೨೦೨೫
ಸೌಹಾರ್ದ ಸಹಕಾರಿ
ದಿನಾಚರಣೆ



**ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ನಿರಂತರ ಬೆಂಬಲ, ಪ್ರೋತ್ಸಾಹ, ಸಹಕಾರದಿಂದ ನಮ್ಮ ಸೌಹಾರ್ದ ಸಹಕಾರ ಚಳುವಳಿ ರಜತ ಮಹೋತ್ಸವ ಸಂಭ್ರಮಾಚರಣೆಯತ್ತ ಸಾಗಿದೆ ಎಂದು ತಿಳಿಸಲು ಸಂತೋಷವಾಗುತ್ತಿದೆ**

**ಹಾಗೂ ಜನವರಿ 1ರಂದು ರಾಜ್ಯದ ಎಲ್ಲೆಡೆ 2000ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳಲ್ಲಿ ಬೆಳಗ್ಗೆ 10 ರಿಂದ 11 ರವರೆಗೆ ಏಕಕಾಲದಲ್ಲಿ ನಮ್ಮ ಸೌಹಾರ್ದ ಸಹಕಾರಿ ಧ್ವಜಾರೋಹಣ ನೆರವೇರಿಸಿದ್ದು ಇಂಡಿಯಾ ಬುಕ್ ಆಫ್ ರೆಕಾರ್ಡ್‌ಗೆ ಸೇರ್ಪಡೆಯಾಗಿದೆ ಎಂದು ತಿಳಿಸಲು ಹೆಮ್ಮೆಯಾಗುತ್ತಿದೆ**

**ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರುಗಳು ಹಾಗೂ ವ್ಯವಸ್ಥಾಪಕ ನಿರ್ದೇಶಕರು**



ಜನವರಿ 14
ಮಕರ
ಸಂಕ್ರಾಂತಿ



ಜನವರಿ 12
ಸ್ವಾಮಿ ವಿವೇಕಾನಂದ
ಜಯಂತಿ

ಜನವರಿ 26
ಗಣರಾಜ್ಯೋತ್ಸವ
ದಿನಾಚರಣೆ



ಸೌಹಾರ್ದ ಸಹಕಾರಿಗಳ ಸಂಖ್ಯೆ: 6419

ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ: 1697



**ಜಿ. ನಂಜನಗೌಡ**

> ಆತ್ಮೀಯ ಸಹಕಾರಿ ಬಂಧುಗಳೆ, ಎಲ್ಲರಿಗೂ "ಸೌಹಾರ್ದ ಸಹಕಾರಿ ದಿನ" ಹಾಗೂ "ಮಕರ ಸಂಕ್ರಾಂತಿ"ಯ ಹಾರ್ದಿಕ ಶುಭಾಶಯಗಳು. ನೂತನ ವರ್ಷ 2025ಕ್ಕೆ ಪಾದಾರ್ಪಣೆ ಮಾಡಿದ್ದೇವೆ. ಈ ನೂತನ ವರ್ಷದ ಆಗಮನದಲ್ಲಿ ನಾವು ಹಮ್ಮಿಕೊಂಡಿರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸುವ ಮೂಲಕ ಸಹಕಾರಿಗಳ ಅಭಿವೃದ್ಧಿಗೆ ಪ್ರಯತ್ನಿಸೋಣ.

# ರಜತ ಮಹೋತ್ಸವದ ಅರ್ಥಪೂರ್ಣ ಆಚರಣೆಗೆ ವಿನಂತಿ

ಆತ್ಮೀಯ ಸಹಕಾರಿ ಬಂಧುಗಳೆ, ಎಲ್ಲರಿಗೂ "ಸೌಹಾರ್ದ ಸಹಕಾರಿ ದಿನ" ಹಾಗೂ "ಮಕರ ಸಂಕ್ರಾಂತಿ"ಯ ಹಾರ್ದಿಕ ಶುಭಾಶಯಗಳು. ನೂತನ ವರ್ಷ 2025ಕ್ಕೆ ಪಾದಾರ್ಪಣೆ ಮಾಡಿದ್ದೇವೆ. ಈ ನೂತನ ವರ್ಷದ ಆಗಮನದಲ್ಲಿ ನಾವು ಹಮ್ಮಿಕೊಂಡಿರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸುವ ಮೂಲಕ ಸಹಕಾರಿಗಳ ಅಭಿವೃದ್ಧಿಗೆ ಪ್ರಯತ್ನಿಸೋಣ.

ಆತ್ಮೀಯರೇ, ಸೌಹಾರ್ದ ಸಹಕಾರಿ ಕ್ಷೇತ್ರ ನಮ್ಮ ರಾಜ್ಯದಲ್ಲಿ ಪ್ರಾರಂಭವಾಗಿ ಜನವರಿ 1ಕ್ಕೆ 25ನೇ ವರ್ಷಕ್ಕೆ ಕಾಲಿಟ್ಟಿದ್ದೇವೆ. ಅನೇಕ ಸವಾಲುಗಳು ಹಾಗೂ ಅಡೆತಡೆಗಳ ನಡುವೆ ಸೌಹಾರ್ದ ಸಹಕಾರಿಗಳ ಸಾಧನೆಗಳು ರಾಜ್ಯ ಸರಕಾರದ, ಸಹಕಾರಿಗಳ ಹಾಗೂ ಸಾರ್ವಜನಿಕರ ಗಮನ ಸೆಳೆದಿದೆ. ಸಹಕಾರಿ ಕ್ಷೇತ್ರದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಂಡಿದೆ. ಸಂಯುಕ್ತ ಸಹಕಾರಿಯು ತನ್ನ 25 ವರ್ಷಗಳ ಇತಿ–ಹಾಸದಲ್ಲಿ ಬೃಹದಾಕಾರವಾಗಿ ಬೆಳೆದಿವೆ. ಇದು ನಾವೆಲ್ಲರು ಹೆಮ್ಮೆ ಪಡುವ ವಿಷಯ. ಈ ಸಾಧನೆಯಲ್ಲಿ ಪಾಲ್ಗೊಂಡ ಎಲ್ಲಾ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯು ಅಭಿನಂದಿಸುತ್ತದೆ. ಈ ರಜತ ಮಹೋತ್ಸವ ವರ್ಷವನ್ನು ಅತ್ಯಂತ ಸಂಭ್ರಮದಿಂದ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಸಂಭ್ರಮಿಸೋಣ. ನಮ್ಮ ಶಕ್ತಿ ಸಾಮರ್ಥ್ಯವನ್ನು ನಮ್ಮ ಸಾಧನೆಗಳನ್ನು ಜನರ ಮುಂದಿಡುವ ಸಂದರ್ಭ ಈ ರಜತ ಮಹೋತ್ಸವ ವರ್ಷ.

ಸೌಹಾರ್ದ ಸಹಕಾರಿಯ ಸಾಧನೆಯ ಮೈಲುಗಲ್ಲುಗಳನ್ನು ಪಟ್ಟಿಮಾಡಿ ಸಹಕಾರಿಗಳಿಗೆ ತಲುಪಿಸುವ ವರ್ಷ. ಸೌಹಾರ್ದ ಸಹಕಾರಿಗಳು ಎದುರಿಸಿದ ಸವಾಲುಗಳನ್ನು ಮೆಲಕು ಹಾಕಿ ಮುಂಬರುವ ವರ್ಷಗಳಲ್ಲಿ ನಮ್ಮ ನಡೆಯನ್ನು ತೀರ್ಮಾನಿಸುವ ಪರ್ವಕಾಲ ಇದಾಗಿದೆ. ಸೌಹಾರ್ದ ಸಹಕಾರಿ ಕ್ಷೇತ್ರದ ಈ ರಜತ ಮಹೋತ್ಸವವನ್ನು ರಾಜ್ಯದ ಎಲ್ಲಾ ಸಹಕಾರಿಗಳ ಜೊತೆಗೂಡಿ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಹಮ್ಮಿಕೊಳ್ಳುವಂತೆ ಹಲವು ಕಾರ್ಯಕ್ರಮಗಳನ್ನು ಸಿದ್ಧಪಡಿಸಿದೆ. ಇವುಗಳಲ್ಲದೆ ಸೌಹಾರ್ದ ಸಹಕಾರಿಗಳು ಪ್ರತ್ಯೇಕವಾಗಿಯೂ ಹಲವಾರು ಕಾರ್ಯಕ್ರಮಗಳನ್ನು ಸಂದರ್ಭೋಚಿತವಾಗಿ ಹಮ್ಮಿಕೊಳ್ಳಬಹುದಾಗಿದೆ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಈ ರಜತ ಮಹೋತ್ಸವ ಅವಿಸ್ಮರಣೀಯವಾಗಬೇಕು. ಸೌಹಾರ್ದ ಸಹಕಾರಿ ಕ್ಷೇತ್ರದ ನೆಲೆ ಭದ್ರವಾಗಬೇಕು. ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಇರುವ ನಕಾರಾತ್ಮಕ ವಿಷಯಗಳು ಸಕಾರಾತ್ಮಕವಾಗಿ ಪರಿವರ್ತಿತವಾಗಬೇಕು. ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗಬೇಕು. ಈ ಕ್ಷೇತ್ರದ ವಿಶ್ವಾಸಾರ್ಹತೆ ಹೆಚ್ಚಾಗಬೇಕು. ಅವಕಾಶವನ್ನು ಸರಿಯಾಗಿ ಉಪಯೋಗಿಸಿಕೊಂಡು ನಮ್ಮ ಅಸ್ತಿತ್ವವನ್ನು ಸ್ಥಿರಪಡಿಸಿಕೊಂಡು ಸಂಭ್ರಮಿಸಿ ಹೆಚ್ಚಿನ ಉತ್ಸಾಹದಿಂದ ಮುನ್ನಡೆಯೋಣ. ಸೌಹಾರ್ದ ಸಹಕಾರಿ ಕ್ಷೇತ್ರದ ಧ್ವಜವನ್ನು ಮುಗಿಲೆತ್ತರಕ್ಕೆ ಹಾರಿಸೋಣ.

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ.......... 2
ಸಂಪಾದಕೀಯ.......... 3
ಜ್ಞಾನ ಜ್ಯೋತಿ.......... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .......... 05–31
ಸೌಹಾರ್ದ ಸಹಕಾರಿಗಳ ಸಮಾಚಾರಗಳು .......... 32–36
ನಿಮ್ಮ ಪ್ರಶ್ನೆ – ನಮ್ಮ ಉತ್ತರ .......... 37–38
**ಲೇಖನಗಳು :**
ಸಕಾರಾತ್ಮಕ ದೃಷ್ಟಿಕೋನ .......... 39,41
ಸಹಕಾರ ಸಚಿವಾಲಯದ ನೂತನ ಪ್ರಯತ್ನಗಳ ಮೂಲಕ ಸಹಕಾರ ಚಳುವಳಿಯನ್ನು ಬಲಪಡಿಸುವುದು .......... 42–43

# ಸಂಪಾದಕೀಯ

## ಸೌಹಾರ್ದ ಸಹಕಾರಿ ಕ್ಷೇತ್ರದ ರಜತ ಮಹೋತ್ಸವದ ಯಶಸ್ಸು : ಸಹಕಾರಿಯು ಹಮ್ಮಿಕೊಳ್ಳುವ ಕಾರ್ಯಕ್ರಮಗಳ, ಸಹಕಾರಿಗಳ ಹಾಗೂ ಸಿಬ್ಬಂದಿಯವರಿಂದ ಮಾತ್ರ ಸಾಧ್ಯ.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ರಜತ ಮಹೋತ್ಸವ ವರ್ಷ ಆಚರಣೆ ಅತ್ಯಂತ ವಿಜ್ರಂಭಣೆಯಿಂದ ಪರಿಣಾಮಕಾರಿಯಾಗಿ ನಡೆಯಬೇಕು. ಸಾರ್ವಜನಿಕರ ಗಮನ ಸೆಳೆಯುವ, ಜನರ ವಿಶ್ವಾಸಾರ್ಹತೆ ಹೆಚ್ಚಿಸುವ ಸವಾಲುಗಳನ್ನು ಸ್ವೀಕರಿಸಿ ಕಾರ್ಯನಿರ್ವಹಿಸುವ ಅಗತ್ಯತೆ ಇರುವುದರಿಂದ ಸಹಕಾರಿಗಳು ಹಾಗೂ ಸಿಬ್ಬಂದಿಯವರು ತಮ್ಮ ಜವಾಬ್ದಾರಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದು ಅಗತ್ಯ. ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಹಾಗೂ ಮಾರ್ಗದರ್ಶನದಲ್ಲಿ ವರ್ಷಪೂರ್ಣ ಅತ್ಯಂತ ವೈಶಿಷ್ಟಪೂರ್ಣ ಕಾರ್ಯಕ್ರಮಗಳು ನಡೆಯುವಂತೆ ಕ್ರಮವಿಡುವುದು ಅಗತ್ಯ.

ಜನವರಿ 1 ರಂದು ಸೌಹಾರ್ದ ಸಹಕಾರಿ ದಿನ ಆಚರಣೆಯೊಂದಿಗೆ ರಜತ ಮಹೋತ್ಸವ ಕಾರ್ಯಕ್ರಮಗಳ ಆಚರಣೆಯನ್ನು ಪ್ರಾರಂಭಿಸಬೇಕು. ಸೌಹಾರ್ದ ಸಹಕಾರಿ ದಿನವನ್ನು ಎಲ್ಲ ಸಹಕಾರಿಗಳು ಪ್ರತಿವರ್ಷದಂತೆ ಯಥೋಚಿತವಾಗಿ ಆಚರಿಸುವುದು. ಸಹಕಾರಿಯ ಅಸ್ತಿತ್ವವನ್ನು ಪ್ರಚುರ ಪಡಿಸುವುದು. ಜೊತೆಗೆ ರಜತ ಮಹೋತ್ಸವದ ಕಾರ್ಯಕ್ರಮಗಳಿಗೆ ಚಾಲನೆ ನೀಡುವುದು ಅಗತ್ಯ. ರಜತ ಮಹೋತ್ಸವದ ಕಾರ್ಯಕ್ರಮಗಳನ್ನು ಹೇಗೆ ಪ್ರಾರಂಭಿಸಬೇಕು ಎಂಬ ಬಗ್ಗೆ ಸಭೆ ನಡೆಸಿ ಸೂಕ್ತ ತೀರ್ಮಾನ ಮಾಡಿ ಅದರಂತೆ ಕ್ರಮವಿಡಬೇಕು. ರಜತ ಮಹೋತ್ಸವ ಅಂಗವಾಗಿ ಸಂಯುಕ್ತ ಸಹಕಾರಿ ವರ್ಷವಿಡಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಸಹಕಾರಿಯು ಭಾಗವಹಿಸಬಹುದಾದ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಭಾಗವಹಿಸುವುದು ಮತ್ತು ತಮ್ಮ ಸಹಕಾರಿಯಿಂದಲೇ ಜರುಗಿಸಬಹುದಾದ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜರುಗಿಸುವುದು.

ಕಾರ್ಯಕ್ರಮದ ವಿಷಯ, ಆಶಯ, ಸ್ವರೂಪ, ಸ್ಥಳ, ಸಮಯ, ದಿನಾಂಕ, ಭಾಗವಹಿಸುವವರ ಸಂಖ್ಯೆ, ಸಂಪನ್ಮೂಲದ ಕ್ರೋಢೀಕರಣ, ಅಧ್ಯಯನ ಸಾಹಿತ್ಯ, ಆಮಂತ್ರಿಸಬಹುದಾದ ಗಣ್ಯರು, ಆಮಂತ್ರಿಸಬಹುದಾದ ಸಂಪನ್ಮೂಲ ವ್ಯಕ್ತಿಗಳು, ಆಮಂತ್ರಿಸಬಹುದಾದ ಜನಪ್ರತಿನಿಧಿಗಳು, ಕಾರ್ಯಕ್ರಮ ನಿರ್ವಹಣೆಗೆ ಬೇಕಾದ ಸ್ಥಳೀಯ ಪರಿಕರಗಳು, ಹೊರಗಡೆಯಿಂದ ತರಿಸಿಕೊಳ್ಳಬಹುದಾದ ವಸ್ತುಗಳು, ಸ್ಥಳೀಯ ಹಾಗೂ ಜಿಲ್ಲಾ ಮತ್ತು ರಾಜ್ಯದ ಸಂಘ ಸಂಸ್ಥೆಗಳ ಸಹಕಾರ ಪಡೆಯುವ ಬಗ್ಗೆ ತೀರ್ಮಾನಿಸುವುದು, ಇವೆಲ್ಲವುಗಳ ಬಗ್ಗೆ ಪೂರ್ವಭಾವಿ ಸಭೆ ನಡೆಸಿ ಎಲ್ಲ ಸಿದ್ಧತೆಗಳನ್ನು ಅಚ್ಚುಕಟ್ಟಾಗಿ ಮಾಡಿ ಕಾರ್ಯಕ್ರಮ ಜರುಗಿಸಿದಾಗ ಯಶಸ್ಸು ಸಾಧಿಸಲು ಸಾಧ್ಯವಾಗುತ್ತದೆ.

ಸೌಹಾರ್ದ ಸಹಕಾರಿಗಳು ಕಳೆದ 25 ವರ್ಷಗಳಲ್ಲಿ ಎದುರಿಸಿದ ಸವಾಲುಗಳು, ತಮ್ಮ ಅಸ್ತಿತ್ವದ ಬಗ್ಗೆ ನಡೆಸಿದ ನಿರಂತರ ಹೋರಾಟ, ಹೆಜ್ಜೆ ಹೆಜ್ಜೆಗೂ ಅನುಭವಿಸಿದ ತೊಂದರೆಗಳನ್ನು ಮೆಟ್ಟಿ ಈ ಕ್ಷೇತ್ರವನ್ನು ಬೆಳೆಸುತ್ತಿರುವ ಸಹಕಾರಿಗಳು ಹಾಗೂ ಸಿಬ್ಬಂದಿಯವರು ಅತ್ಯಂತ ಗರ್ವದಿಂದ ನಿಮ್ಮ ಸಾಧನೆಗಳ ವೈಭವೀಕರಿಸುವುದು ಹಾಗೂ ರಜತ ಮಹೋತ್ಸವವನ್ನು ಅತ್ಯಂತ ವಿಜ್ರಂಭಣೆಯಿಂದ ಆಚರಿಸುವುದು ನಿಮಗೆ ಹಾಗೂ ನಿಮ್ಮ ಸಹಕಾರಿಗೆ ಹೆಮ್ಮೆ ಹಾಗೂ ಗೌರವದ ಪ್ರತೀಕ. ಮುಂಬರುವ ದಿನಗಳಲ್ಲಿ ಈ ಕ್ಷೇತ್ರವನ್ನು ಇನ್ನೂ ಹೆಚ್ಚು ಗುಣಾತ್ಮಕವಾಗಿ, ಪಾರದರ್ಶಕವಾಗಿ ಮತ್ತು ವೃತ್ತಿಪರತೆಯಿಂದ ನಡೆಸಲು ಬದ್ಧತೆಯನ್ನು ಸಾರುವುದು ಇಂದಿನ ಅವಶ್ಯಕತೆ.

ಸೌಹಾರ್ದ ಸಹಕಾರಿಗಳು ಈ ಮಹೋತ್ಸವದ ಆಚರಣೆಗೆ ಅವಶ್ಯಕ ಸಲಹೆ, ಮಾರ್ಗದರ್ಶನಗಳನ್ನು ಸಂಯುಕ್ತ ಸಹಕಾರಿಯಿಂದ ಪಡೆಯಬಹುದಾಗಿದೆ ಮತ್ತು ನಿಮ್ಮ ಸಲಹೆ ಹಾಗೂ ಮಾರ್ಗದರ್ಶನಗಳಿಗೆ ಸಂಯುಕ್ತ ಸಹಕಾರಿ ಸಂತೋಷದಿಂದ ಸ್ವಾಗತಿಸುತ್ತದೆ.



## ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

### "ಬ್ರಹ್ಮ ಜ್ಞಾನ"

ಬ್ರಹ್ಮಾನುಭವಿ ಗುರು, ಬ್ರಹ್ಮ ಜ್ಞಾನದ ಹಸಿವೆಯುಳ್ಳ ಶಿಷ್ಯ, ಅವರಿಬ್ಬರ ಮಧ್ಯೆ ಉಪದೇಶವೆನ್ನುವ ಪ್ರವಾಹ. ಬ್ರಹ್ಮ ಜ್ಞಾನ ಇದೊಂದು ಅಪರೂಪದ ವಿದ್ಯೆ. ಯಾವ ವಿದ್ಯೆಯಿಂದ ಮನುಷ್ಯ ನೂರು ವರ್ಷಗಳವರೆಗೆ ಶಾಂತನಾಗಿ ಬಾಳುತ್ತಾನೋ ಅಂತಹ ವಿದ್ಯೆ. ಈ ವಿದ್ಯೆ ಬಂಧನಗಳನ್ನು ಕಳಚುತ್ತದೆ. ಮನುಷ್ಯ ಹೊರೆಹೊತ್ತು, ಬಂಧನಕ್ಕೆ ಒಳಗಾಗಿ ಬಾಳಬಾರದು. ಹೊರೆ ಇಳಿಸಿ ಬಂಧಮುಕ್ತನಾಗಿ ಬಾಳಬೇಕು. ಅದು ಬ್ರಹ್ಮವಿದ್ಯೆ. ಈ ವಿದ್ಯೆಯನ್ನು ಎಲ್ಲರೂ ಬಯಸುತ್ತಾರೆ. ಮನುಷ್ಯ ಒಮ್ಮೆ ಬಂಧನಕ್ಕೆ ಒಳಗಾದರೆ ಅದರಿಂದ ಹೊರಬರುವುದು ಬಹಳ ಕಷ್ಟ. ಒಂದು ಸಣ್ಣ ಸಿಗರೇಟ್ ಮನುಷ್ಯನ ಮನಸ್ಸನ್ನು ಕಟ್ಟಿಹಾಕಿಬಿಡುತ್ತದೆ ಮನಸ್ಸನ್ನು ಬಂಧನಕ್ಕೆ ಗುರಿಮಾಡುತ್ತದೆ.

ಜಗತ್ತಿನಲ್ಲಿ ಹಕ್ಕಿಯ ಹಾಗಿರಬೇಕು. ಆನಂದದಿಂದ ಇರಬೇಕು. ಇದನ್ನೇ ಮುಕ್ತ ಜೀವನ ಎನ್ನುವರು. ಸಂತರು ಬದುಕುವದು ಇದೇ ರೀತಿ. "Gains and losses are inevitable in the life". ಸಾವು–ನೋವುಗಳು ಬದುಕಿನಲ್ಲಿ ಅನಿವಾರ್ಯ. ನಾವು ಮನಸ್ಸನ್ನು ಹಗುರವಾಗಿ–ರಿಕೊಳ್ಳಬೇಕು. ಹಾಗೆ ಬದುಕಬೇಕಾದರೆ ಬ್ರಹ್ಮಜ್ಞಾನ ಬೇಕು. ಜಗತ್ತಿನ ಮೂಲವಸ್ತುವನ್ನು ತಿಳಿಯಬೇಕು. ಬ್ರಹ್ಮಜ್ಞಾನದ ಸರಳ ಅರ್ಥ ಸತ್ಯದ ಜ್ಞಾನ. ಹಾಗಾದರೆ ಯಾವುದು ಸತ್ಯ ?

ಆಗ ಶಿಷ್ಯ ಪ್ರಶ್ನೆ ಕೇಳುತ್ತಾನೆ. "ಈ ಜಗತ್ತು ಹೇಗಿದೆ? ನಾವು ಬಾಳುವ ಈ ಜಗತ್ತಿನ ಜ್ಞಾನ ಬ್ರಹ್ಮಜ್ಞಾನವಲ್ಲವೇ? ಅದಕ್ಕೆ ಗುರು ಹೇಳಿದ, "ಶಿಷ್ಯನೇ ಸ್ವಲ್ಪ ಆಲೋಚಿಸು. ಏನು ಇದೆಯೋ ಅದನ್ನು ಹಾಗೆಯೇ ತಿಳಿಯಬೇಕು. KNOW AS IT IS. ಅದು ಇರುವುದೊಂದು ನಾವು ತಿಳಿಯಕೊಳ್ಳುವುದೊಂದು ಆಗಬಾರದು. ಸತ್ಯ ಜ್ಞಾನ ಎಂದರೆ ಎರಡು ಅರ್ಥ. 1. ಏನು ಮಾಡಿದರೂ ಅದು ಸತ್ಯ ಇರಬೇಕು. 2. ಯಾವಾಗಲೂ ಅದು ಸತ್ಯವೇ ಆಗಿರಬೇಕು.

ಜಗತ್ತಿನ ಬಗ್ಗೆ ಎಲ್ಲರೂ ತಮಗೆ ತಿಳಿದಂತೆ ಹೇಳುತ್ತಾರೆ. ಅದರ ವರ್ಣನೆ ಒಬ್ಬರಿಗೆ ಒಂದು ರೀತಿ, ಇನ್ನೊಬ್ಬರಿಗೆ ಇನ್ನೊಂದು ರೀತಿ, ವರ್ಣನೆ ಅವರವರ ದೃಷ್ಟಿಕೋನವನ್ನು ಅವಲಂಬಿಸಿದೆ. ಶ್ರೀಮಂತ, ಅಧಿಕಾರಿ, ಕೃಷಿಕ, ವ್ಯಾಪಾರಿ, ಸಂತ – ಇವರೆಲ್ಲರೂ ಕಾಣುವ ಜಗತ್ತು ಬೇರೆ ಬೇರೆ. ಓರ್ವ ಪಾಶ್ಚಿಮಾತ್ಯ, ಎಡ್ಗರ್ ಅಲೆನ್ ಪೋ ಹೇಳುವಂತೆ, "The world that I see is a dream in dream'. ನಾನು ನೋಡುವ ಈ ಜಗತ್ತು ನನ್ನ ಕನಸಿನ ಒಂದು ಕನಸು. ಪ್ರತಿಯೊಬ್ಬರದ್ದೊ ಒಂದೊಂದು ಕನಸು. ಅವರ ಕನಸಿದ್ದಂತೆ ಅವರವರ ಜಗತ್ತು. ಒಬ್ಬ ಸಣ್ಣ ಹುಡುಗನಿಗೆ ಕಾಣುವ ಜಗತ್ತು ಬೇರೆ; ವಯಸ್ಸಾದಂತೆ ಕಾಣುವ ಜಗತ್ತು ಬೇರೆ. ಅವರು ಕಾಣುವ ಜಗತ್ತು ಬೇರೆ. ವಯಸ್ಸಾದಂತೆ ಕಾಣುವ ಜಗತ್ತು ಬೇರೆ. ಅವರು ಕಾಣುವ ಜಗತ್ತು ಅವರ ಕನಸುಗಳನ್ನು ಅವಲಂಬಿಸಿದೆ. ಹುಡುಗನಿಗೆ ಜಗತ್ತು ಹಚ್ಚ ಹಸಿರು. ಆದರೆ ಮುದಕನಿಗೆ ಅದು ಬರಡು ಭೂಮಿ, ಮರುಭೂಮಿ.

ನಮ್ಮನ್ನು ನಾವು ಮರೆತು ಬದುಕಿನತ್ತ ನೋಡಿದರೆ ನೈಜ ದರ್ಶನ ಉಂಟಾಗುತ್ತದೆ. ಒಳ್ಳೆಯ ದೃಷ್ಟಿಯಿಂದ ನೋಡಿದರೆ ಒಳ್ಳೆಯದು ಕಾಣುತ್ತದೆ, ಕೆಟ್ಟ ದೃಷ್ಟಿಯಿಂದ ನೋಡಿದರೆ ಕೆಟ್ಟದ್ದು ಕಾಣುತ್ತದೆ. ಆದರೆ ಯಾವ ದೃಷ್ಟಿಯೂ ಪೂರ್ಣವಲ್ಲ. ಏಕೆಂದರೆ ನಮ್ಮ ದೃಷ್ಟಿ ಅಲ್ಪವಾಗಿರುತ್ತದೆ. ನಮ್ಮ ಜ್ಞಾನ ಅಲ್ಪವಾಗಿರುತ್ತದೆ. ನಮಗೆ ಕಾಣುವ ಜಗತ್ತೇ ನಮ್ಮ ಜಗತ್ತು. ಅದು ಸ್ವಲ್ಪ ಸತ್ಯ, ಸ್ವಲ್ಪ ಸುಳ್ಳು ನಮಗೆ ತಿಳಿಸಿರುವುದು ಸತ್ಯ ಎಂದು ತಿಳಿದರೆ ಅದು ಭ್ರಮೆ. ನಿಜ ಜಗತ್ತು ಭಿನ್ನವಾಗಿರುತ್ತದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 8952 | 997 | 1538 | 767 | 12254 |
| 2 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 6230 | 678 | 950 | 418 | 8276 |
| 3 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 2722 | 319 | 588 | 349 | 3978 |
| ಡಿಸೆಂಬರ್ 2024ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 265 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 353 | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 6684 | 1145 | 2023 | 715 | 10567 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 974 | 207 | 477 | 149 | 1807 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 5710 | 938 | 1546 | 566 | 8760 |
| ಡಿಸೆಂಬರ್–2024 ತಿಂಗಳಿನಲ್ಲಿ ಒಟ್ಟು 93 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ. | | | | | | |

# 39ನೇ ವಾರ್ಷಿಕ ರಾಷ್ಟ್ರೀಯ ಸಂಶೋಧನಾ ಸಮಾವೇಶ

## ಸಹಕಾರ ವ್ಯವಹಾರ ಮಾದರಿಯ ಸ್ಥಿತಿ ಸ್ಥಾಪಕತ್ವ ಹಾಗೂ ಸುಸ್ಥಿರ ಅಭಿವೃದ್ಧಿ ಸಮ್ಮೇಳನ

### ಸಹಕಾರ ಕ್ಷೇತ್ರ ಸ್ಥಿತಿ ಸ್ಥಾಪಕತ್ವ ಹಾಗೂ ಸುಸ್ಥಿರ ಅಭಿವೃದ್ಧಿಗಾಗಿ ಪರಿಣಾಮಕಾರಿ ಸಶಕ್ತ ನಾಯಕತ್ವ ಅಗತ್ಯ : ಶ್ರೀ ಹೆಚ್.ಕೆ ಪಾಟೀಲ, ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು



**ಗದಗ :** ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ವಿಶ್ವವಿದ್ಯಾಲಯ ಗದಗ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇಂಡಿಯಸ್ ಸೊಸೈಟಿ ಫಾರ್ ಸ್ಟರ್ಡಿಸ್ ಇನ್ ಕೋ–ಆಪರೇಟಿವ್ ಮನೆಜ್‌ಮೆಂಟ್, ಪೂನಾ, ವೈಕುಂಠ ಮೆಹತಾ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ ಪೂನಾಯವರುಗಳ ಸಂಯುಕ್ತ ಆಶ್ರಯದಲ್ಲಿ ದಿನಾಂಕ 03 ಮತ್ತು 04 ಜನವರಿ 2024 ರಂದು 2 ದಿನಗಳ ಕಾರ್ಯಕ್ರಮವನ್ನು ಏರ್ಪಡಿಸಿಲಾಗಿತ್ತು.

ದಿನಾಂಕ 03.01.2025 ರಂದು ಬೆಳಿಗ್ಗೆ 11.00ಕ್ಕೆ ಕೆ.ಎಸ್. ಆರ್.ಡಿ.ಪಿ.ಆರ್.ಯು ಸಭಾಂಗಣದಲ್ಲಿ ಸಂಶೋಧನಾ ಸಮಾವೇಶವನ್ನು ಸಚಿವರಾದ ಶ್ರೀ ಹೆಚ್. ಕೆ ಪಾಟೀಲ ರವರು ಸಸಿಗೆ ನೀರು ಉಣಿಸುವುದರ ಮೂಲಕ ಉದ್ಘಾಟಿಸಿದರು. ಉದ್ಘಾಟನಾ ಸಮಾರಂಭದಲ್ಲಿ ಕೆ.ಎಸ್. ಆರ್.ಡಿ.ಪಿ.ಆರ್.ಯು ಉಪಕುಲಪತಿಗಳಾದ ಶ್ರೀ ಸುರೇಶ್ ನಾಡಗೌಡರರವರು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್ ಪ್ರಸನ್ನಕುಮಾರರವರು, ಐಎಸ್‌ಎಸ್‌ಸಿ ಅಧ್ಯಕ್ಷರಾದ ಶ್ರೀ ಜಿ.ಹೆಚ್. ಅಮೀನ್‌ರವರು, ಚಾಣಕ್ಯ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಶ್ರೀ ಯಶವಂತ ಡೊಂಗ್ರೆಯವರು, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು, ಐಎಸ್‌ಎಸ್‌ಸಿ ಕಾರ್ಯದರ್ಶಿಗಳಾದ ಶ್ರೀ ಅನಿಲ್ ಕರಂಜಿಕರ್ ರವರು, ನಬಾರ್ಡ್ ಉಪನಿರ್ದೇಶಕರಾದ ಶ್ರೀ ಜಗದೀಶ ರವರು, ಕೆ.ಎಸ್.ಆರ್.ಡಿ.ಪಿ.ಆರ್.ಯು ಶ್ರೀ ಅಜೀಜ್ ಮುಲ್ಲಾರವರು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸಚಿವರಾದ ಶ್ರೀ ಹೆಚ್. ಕೆ. ಪಾಟೀಲರವರು ಸಹಕಾರ ಕ್ಷೇತ್ರದ ಸ್ಥಾಪಕತ್ವ ಹಾಗೂ ಸುಸ್ಥಿರ ಅಭಿವೃದ್ಧಿಗಾಗಿ ಸಹಕಾರ ವ್ಯವಹಾರ ಮಾದರಿ ಯೋಜನೆಗಳ ಉತ್ತಮ ನಿರ್ವಹಣೆಗಾಗಿ ಉತ್ತಮ ನಾಯಕತ್ವದ ನಿರ್ಮಾಣವಾಗಬೇಕು. ವಿಶ್ವವಿದ್ಯಾಲಯಗಳು ಉತ್ತಮ ವೃತ್ತಿಪರ ಸಹಕಾರಿಗಳನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು. ಸಹಕಾರ ಕ್ಷೇತ್ರದ ಆಡಳಿತ ವ್ಯವಸ್ಥೆಯನ್ನು ಉತ್ತಮಗೊಳಿಸಿಬೇಕು. ಈ ದೇಶದಲ್ಲಿ ಸಹಕಾರ ಸಂಸ್ಥೆಗಳು ಒಂದು ಉತ್ತಮ ಆರ್ಥಿಕ ಸಂಘಟನೆಗಳಾಗಿ ಹೊರಹೊಮ್ಮಿವೆ. ಇವುಗಳನ್ನು ಉತ್ತಮ ವ್ಯವಹಾರಿಕ ಮಾದರಿ ಸಂಘಟನೆಗಳಾಗಿ ಹೊರಹೊಮ್ಮವಂತೆ ಮಾಡಿದರೆ ನಮ್ಮ ದೇಶದ ಸಹಕಾರ ಚಳುವಳಿ ವಿಶ್ವಮಾದರಿ ಚಳುವಳಿಯಾಗುತ್ತದೆ ಎಂದು ತಿಳಿಸಿದರು.

ವಿಶ್ವಸಂಸ್ಥೆಯವರು ವರ್ಷ 2025ನ್ನು ಅಂತರರಾಷ್ಟ್ರೀಯ ಸಹಕಾರಿ ವರ್ಷ ಎಂದು ಪೋಷಿಸಿದ್ದಾರೆ. ಈ ಅಂತರರಾಷ್ಟ್ರೀಯ ಸಹಕಾರಿ ವರ್ಷ ಸಹಕಾರ ಚಳವಳಿಗೆ ಚಾಲನೆ ನೀಡಿದ ಗದಗ ಜಿಲ್ಲೆಯಿಂದಲೇ ಪ್ರಾರಂಭವಾಗಿರುವುದು ಸಂತೋಷ ಹಾಗೂ ಹೆಮ್ಮೆಯ ವಿಷಯ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಕೆ.ಎಸ್.ಆರ್.ಡಿ.ಪಿ.ಆರ್ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಶ್ರೀ ಸುರೇಶ ನಾಡಗೌಡರವು ಸ್ವಾಗತ ಮಾಡಿದರು. ಐಎಸ್‌ಎಸ್‌ಸಿಯ ಕಾರ್ಯದರ್ಶಿ ಶ್ರೀ ಅನೀಲ್ ಕಾರಂಜಿರ್‌ಯವರು ಪ್ರಾಸ್ತಾವಿಕ ನುಡಿಗಳನ್ನು ಹೇಳಿ ಅಂತರರಾಷ್ಟ್ರೀಯ ಲೋಗೋವನ್ನು ಎಲ್ಲರೂ ಧರಿಸಿಕೊಳ್ಳುವಂತೆ ವಿನಂತಿಸಿದರು. ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಬದಲಾವಣೆ ತಂದು ಹೊಸ ಚೈತನ್ಯ ಮೂಡಿಸಿದ ದಿ. ಪ್ರಧಾನಿ ಮನಮೋಹನ್ ಸಿಂಗ್‌ರವರ ಬಗ್ಗೆ ಮಾತನಾಡಿ ಅವರ ಆತ್ಮಕ್ಕೆ ಶಾಂತಿ ಕೋರುವಂತೆ ಒಂದು ನಿಮಿಷ ಮೌನ ಆಚರಿಸಿಲಾಯಿತು.

ನಂತರ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ನಂಜನಗೌಡ ಸಿಎ ರವರು ಸಂಯುಕ್ತ ಸಹಕಾರಿಯ ವ್ಯವಸ್ಥೆ ದೇಶದಲ್ಲಿ ಒಂದು ಮಾದರಿ ವ್ಯವಸ್ಥೆ ಸಂಯುಕ್ತ ಸಹಕಾರಿಯ ಶಾಸನಬದ್ಧ ಕಾರ್ಯನಿರ್ವಹಣೆಯ ಜೊತೆಗೆ ಶಿಕ್ಷಣ ತರಬೇತಿ ಹಾಗೂ ಪ್ರಚಾರ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಜರುಗಿಸುತ್ತ ರಾಜ್ಯದ ರಾಷ್ಟ್ರದ ಸಹಕಾರಿಗಳ ಗಮನ ಸೆಳೆದಿದೆ.

ಈ ಸಂಶೋಧನಾ ಸಮಾವೇಶದಲ್ಲಿ 18 ಜನರು ಸ್ವಂತ ಹಾಜರಾಗಿ 43 ಜನರು ಆನ್‌ಲೈನ್ ನಲ್ಲಿ ಒಟ್ಟಾರೆ 61 ಜನರು 61 ವಿಷಯಗಳ ಬಗ್ಗೆ ಪ್ರಸ್ತಾಪ ಮಾಡುವುದು ಉತ್ತಮ ಹಾಗೂ ಹೆಮ್ಮೆ ಪಡುವ ವಿಷಯ ಎಂದು ತಿಳಿಸಿ ಸಮಾವೇಶ ಯಶಸ್ವಿಯಾಗಲಿ ಸಹಕಾರ ಕ್ಷೇತ್ರಕ್ಕೆ ಹೊಸ ದಿಕ್ಕನ್ನು ತೋರಿಸುವಂತಾಗಲಿ ಎಂದು ತಿಳಿಸಿದರು.

ಐಎಸ್‌ಎಸ್‌ಸಿ ಅಧ್ಯಕ್ಷರಾದ ಶ್ರೀ ಜಿ.ಹೆಚ್. ಅಮಿನ್ ರವರು ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತ ಸಮಾಜದ ಅಭಿವೃದ್ಧಿಗೆ ಸಹಕಾರಿ ಚಳುವಳಿಯ ಅಗತ್ಯತೆಯನ್ನು ಅರಿತು ವಿಶ್ವಸಂಸ್ಥೆಯವರು 2ನೇ ಬಾರಿಗೆ ಅಂತರಾಷ್ಟ್ರೀಯ ಸಹಕಾರ ವರ್ಷವನ್ನಾಗಿ 2025ನ್ನು ಘೋಷಣೆಮಾಡಿದ್ದಾರೆ. ಸಹಕಾರ ಕ್ಷೇತ್ರದ ಪಾತ್ರ ಹಿರಿದಾದದ್ದು ಮತ್ತು ಮಹತ್ವದ್ದಾಗಿದೆ ಎಂದು.

ಸಂಯುಕ್ತ ಸಹಕಾಋಇಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ 2025ರ ಕ್ಯಾಲೆಂಡರ್, ಡೈರಿ, ಕೆ. ಎಸ್.ಆರ್.ಡಿ.ಪಿ.ಆರ್.ಯು ನ ಕ್ಯಾಲೆಂಡರ್‌ಗಳನ್ನು ಬಿಡುಗಡೆ ಮಾಡಲಾಯಿತು.

## ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು

## ಸಹಕಾರಿ ಧ್ವಜಾರೋಹಣ, ಇಂಡಿಯಾ ಬುಕ್ ಆಫ್ ರೆಕಾರ್ಡ್‌ಗೆ ಸೇರ್ಪಡೆ

### ಐದು ಮಿಲಿಯನ್ ಆರ್ಥಿಕತೆ ಸಾಧಿಸಲು ಸಹಕಾರಿ ಕ್ಷೇತ್ರ ಪೂರಕವಾಗಿ ಕಾರ್ಯನಿರ್ವಹಿಸಲು ಕರೆ : ಜಿ. ನಂಜನಗೌಡ ಸಿಎ



ಸೌಹಾರ್ದ ಸಹಕಾರಿ ದಿನ, ಸೌಹಾರ್ದ ಸಹಕಾರಿಯ ಆಂದೋಲನದ ರಜತ ಮಹೋತ್ಸವದ ಪ್ರಾರಂಭ ಮತ್ತು ಹೊಸ ಕ್ಯಾಲೆಂಡರ್ ವರ್ಷವನ್ನು ಸಂಯುಕ್ತ ಸಹಕಾರಿ ಹಾಗೂ ಕರ್ನಾಟಕದ 2000ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳಲ್ಲಿ ಬೆಳಿಗ್ಗೆ 10 ರಿಂದ 11 ರವರೆಗೆ ಏಕಕಾಲದಲ್ಲಿ ಆಚರಿಸಲಾಯಿತು.

ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ಸೌಹಾರ್ದ ಸಹಕಾರಿ ರಜತ ಮಹೋತ್ಸವದ ಅಂಗವಾಗಿ ಸಹಕಾರಿ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಸೌಹಾರ್ದ ಸಹಕಾರಿ ಆಂದೋಲನವು ತನ್ನ 24ನೇ ವರ್ಷದ ಪಯಣವನ್ನು ಪೂರ್ಣಗೊಳಿಸಿ ರಜತ ಮಹೋತ್ಸವದತ್ತ ಹೆಜ್ಜೆ ಹಾಕುತ್ತಿದೆ. ಅದೇ ಸಮಯದಲ್ಲಿ ಸೌಹಾರ್ದ ಅಧಿನಿಯಮವು 01.01.2001 ಅಸ್ತಿತ್ವಕ್ಕೆ ಬಂದ ನೆನಪಿಗಾಗಿ ಸೌಹಾರ್ದ ಸಹಕಾರಿ ದಿನವನ್ನು ಮತ್ತು ಹೊಸ ಕ್ಯಾಲೆಂಡರ್ ವರ್ಷ 2025 ರಂದು ಸಹ ಆಚರಿಸಲಾಗುತ್ತದೆ. ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿ ಚಳುವಳಿಯು "ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣ"ದ ದೃಷ್ಟಿಕೋನದಿಂದ ವೇಗವಾಗಿ ಬೆಳೆಯುತ್ತಿದೆ. ಪ್ರಸ್ತುತ ರಾಜ್ಯದಲ್ಲಿ 6419 ಸೌಹಾರ್ದ ಸಹಕಾರಿಗಳನ್ನು ಹೊಂದಿದ್ದು, ಇಂದಿನ ಆಚರಣೆ ಇಂಡಿಯಾ ಬುಕ್ ಆಫ್ ರೆಕಾರ್ಡ್‌ನಲ್ಲಿ ಸೇರಿದೆ ಎಂದು ಹೇಳಿದರು. ಕರ್ನಾಟಕದ ಎಲ್ಲಾ ಸೌಹಾರ್ದ ಸಹಕಾರಿ ಸಂಘಗಳು ಈ ನಿರ್ದಿಷ್ಟ ವರ್ಷದಲ್ಲಿ ಕರ್ನಾಟಕದಲ್ಲಿ ಪ್ರಬಲ ಸೌಹಾರ್ದ ಚಳುವಳಿಯ ಬೆಳವಣಿಗೆಗೆ ಶ್ರಮಿಸಲು ಬದ್ಧತೆಯಿಂದ ದಿನವನ್ನು ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಮಾತನಾಡಿ, ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿ ಆಂದೋಲನ ಉತ್ತಮವಾಗಿ ಬೆಳೆದು ಯುವಜನತೆಯಲ್ಲಿ ಸಹಕಾರಿ ಆಂದೋಲನದ ಬಗ್ಗೆ ವಿಶ್ವಾಸ ಮೂಡಿಸಿದೆ. ಇಂದಿನ ಸೌಹಾರ್ದ ಸಹಕಾರಿ ದಿನ, ರಜತ ಮಹೋತ್ಸವ ಆರಂಭದ ವರ್ಷದ ದಿನ ಮತ್ತು ಹೊಸ ಕ್ಯಾಲೆಂಡರ್ ವರ್ಷ 2025ರ ದಿನದ ಆಚರಣೆಯು ಕರ್ನಾಟಕದ ಎಲ್ಲಾ ಸೌಹಾರ್ದ ಸಹಕಾರಿ ಸಂಸ್ಥೆಗಳಲ್ಲಿ ಸಹಕಾರಿ ಧ್ವಜಾರೋಹಣದಲ್ಲಿ ದಾಖಲೆಯ ಆಚರಣೆಗಳನ್ನು ಮಾಡಿದೆ ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ಮಾನ್ಯ ತರಬೇತಿ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ್ ಸಹಕಾರಿ ಧ್ವಜಾರೋಹಣ ಕಾರ್ಯಕ್ರಮದ ವಂದನಾರ್ಪಣೆಯನ್ನು ಸಲ್ಲಿಸಿದರು.

ಇಂಡಿಯಾ ಬುಕ್ ಆಫ್ ರೆಕಾರ್ಡ್‌ನ ತೀರ್ಪುಗಾರರು "ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಸಹಕಾರಿ ಧ್ವಜಾರೋಹಣ ದಿನವು 1500ಕ್ಕೂ ಹೆಚ್ಚು ಸ್ಥಳಗಳಲ್ಲಿ ಸಹಕಾರಿ ಧ್ವಜವನ್ನು ಹಾರಿಸುವ ಮೂಲಕ ಬುಕ್ ಆಫ್ ರೆಕಾರ್ಡ್ಸ್‌ಗೆ ಸೇರಿದೆ" ಎಂದು ಘೋಷಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಅವರಿಗೆ ದಾಖಲೆ ಪತ್ರವನ್ನು ಹಸ್ತಾಂತರಿಸಿದರು.

ಸಂಯುಕ್ತ ಸಹಕಾರಿಯ ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ. ಶ್ರೀಧರ್ ರವರು ಕಾರ್ಯಕ್ರಮದ ವಂದನಾರ್ಪಣೆಯನ್ನು ಹಾಗೂ ಸಹ ಪ್ರಧಾನ ವ್ಯವಸ್ಥಾಪಕರಾದ ಶ್ರೀ ರಾಜಶೇಖರ್ ಹೆಚ್ ಅವರು ಗಣ್ಯರನ್ನು ಸ್ವಾಗತಿಸಿದರು.ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಸಿಬ್ಬಂದಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದ ನಿರ್ವಹಣೆಯನ್ನು ಸಂಯುಕ್ತ ಸಹಕಾರಿಯ ಅಧಿಕಾರಿ ಶ್ರೀ ರಾಜೇಶ ಇವರು ನಿರ್ವಹಿಸಿದರು.

---



**ಬೆಳಗಾವಿ** : ದಿನಾಂಕ 01.01.2025 ರಂದು ಪ್ರಾಂತೀಯ ಕಚೇರಿ ಬೆಳಗಾವಿಯಲ್ಲಿ ಧ್ವಜಾರೋಹಣ ಕಾರ್ಯಕ್ರಮವನ್ನು ದಾವಾ ಪಂಚಾಯತ ನ್ಯಾಯಾಲಯದ ಪೀಠಾಧಿಕಾರಿಗಳಾದ ಶ್ರೀಮತಿ ರಂಜನ ಟಿ ಪೋಳ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಉಪ ಪ್ರಧಾನ ವ್ಯವಸ್ಥಾಪಕಾರದ ಶ್ರೀ ನಾರಾಯಣ ಹೆಗಡೆ ಹಾಗೂ ಪ್ರಾಂತೀಯ ಕಛೇ–ರಿಯ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು



**ಮೈಸೂರು :** ದಿನಾಂಕ 01.01.2025 ರಂದು ಮೈಸೂರು ಪ್ರಾಂತೀಯ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಶಿಕ್ಷಣ ಸಲಹಾ ಸಮಿತಿ ಸದಸ್ಯರಾದ ಶ್ರೀಯುತ ಹೆಚ್. ವಿ ರಾಜೀವ್ ಇವರು ನಡೆಸಿಕೊಟ್ಟರು. ಈ ಧ್ವಜಾರೋಹಣ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಶ್ರೀ ಪರಶಿವಮೂರ್ತಿ, ನಿವೃತ್ತ ಅಪರ ನಿಬಂಧಕರು ಇವರು ಭಾಗವಹಿಸಿ ಸಹಕಾರಿಗಳಿಗೆ ಮಾರ್ಗದರ್ಶನ ನೀಡಿದರು. ಕಾರ್ಯಕ್ರಮದಲ್ಲಿ ಸ್ಥಳೀಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಉಪಾಧ್ಯಕ್ಷರು ನಿರ್ದೇಶಕರು, ಮುಖ್ಯ ಕಾರ್ಯನಿರ್ವಾಹಕರು ಹಾಗೂ ಪ್ರಾಂತೀಯ ಕಚೇರಿಯ ಸಿಬ್ಬಂದಿಗಳು ಸೇರಿದಂತೆ ಒಟ್ಟು 50 ಪ್ರತಿನಿಧಿಗಳು ಭಾಗವಹಿಸಿದ್ದರು



**ಕಲಬುರಗಿ :** ಪ್ರಾಂತೀಯ ಕಚೇರಿ ಕಲಬುರ್ಗಿಯಲ್ಲಿ ಸೌಹಾರ್ದ ಸಹಕಾರಿಯ 25ನೇ ಬೆಳ್ಳಿ ಹಬ್ಬದ ಪ್ರಯುಕ್ತ ಧ್ವಜಾರೋಹಣವನ್ನೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ನೆರವೇರಿಸಿದರು. ಈ ಸಂದರ್ಭದಲ್ಲಿ ಪ್ರಾಂತೀಯ ವ್ಯವಸ್ಥಾಪಕಾರದ ಶ್ರೀ ಸೂರ್ಯಕಾಂತ್ ರಾಕಲೆಯವರು, ಪ್ರಾಂತೀಯ ಕಚೇರಿಯ ಸಿಬ್ಬಂದಿಗಳು, ಸ್ಥಳೀಯ ಸಹಕಾರಿಯ ಪ್ರತಿನಿಧಿಗಳು ಉಪಸ್ಥಿತರಿದ್ದರು.

## ಸೌಹಾರ್ದ ಸಹಕಾರಿ ಕ್ಷೇತ್ರದ ರಜತ ಮಹೋತ್ಸವ ವರ್ಷ 2025ಕ್ಕೆ ಚಾಲನೆ : ಹಾಗೂ ಸೌಹಾರ್ದ ಸಹಕಾರಿ ದಿನಾಚರಣೆ ರಾಜ್ಯದಾದ್ಯಂತ ಸಪ್ತವರ್ಣದ ಸಹಕಾರಿ ಧ್ವಜಾರೋಹಣ ಕಾರ್ಯಕ್ರಮದ ಏರ್ಪಾಡು.

### ಇಂಡಿಯ ಬುಕ್ ಆಫ್ ರೆಕಾರ್ಡನಲ್ಲಿ ದಾಖಲೆಗಾಗಿ ಕ್ರಮ. ಸೌಹಾರ್ದ ಸಹಕಾರಿಗಳ ಆನ್‌ಲೈನ್ ಸಭೆ ದಾಖಲೆ ಹಾಜರಾತಿ

ಸೌಹಾರ್ದ ಸಹಕಾರಿ ಕ್ಷೇತ್ರ ಪ್ರಾರಂಭವಾಗಿ 1-1-2025ಕ್ಕೆ 25ನೇ ವರ್ಷ ಆರಂಭವಾಗುವ ನಿಮಿತ್ತವಾಗಿ ರಜತ ಮಹೋತ್ಸವ ಆಚರಣೆ ಹಾಗೂ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಅತ್ಯಂತ ಸಂಭ್ರಮದಿಂದ ಆಚರಿಸುವುದಕ್ಕಾಗಿ ರಾಜ್ಯದ ಎಲ್ಲ ಪ್ರಾಂತ ಕಚೇರಿಗಳ ಮೂಲಕ ಆನ್‌ಲೈನ್ ಸಭೆಗಳನ್ನು ದಿನಾಂಕ 30-12-2024 ರಂದು ಏರ್ಪಾಡಿಸಲಾಗಿತ್ತು.

ಪ್ರಾರಂಭದಲ್ಲಿ ಮೈಸೂರು ಪ್ರಾಂತೀಯ ವಿಭಾಗದಿಂದ ಸಭೆ ನಡೆಸಲಾಯಿತು. ಈ ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ವಹಿಸಿದ್ದರು. ಪ್ರಾಂತೀಯ ಅಧಿಕಾರಿ ಶ್ರೀ ಗುರುಪ್ರಸಾದರವರು ಸ್ವಾಗತಿಸಿದರು. ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಮಾನ್ಯ ಅಧ್ಯಕ್ಷರು ಸೌಹಾರ್ದ ಸಹಕಾರಿ ಸಂಸ್ಥೆಗಳು ಸರ್ವಸ್ಪರ್ಶಿಯಾಗುವಂತೆ ಸೌಹಾರ್ದ ಸಹಕಾರಿಗಳ ಅಸ್ತಿತ್ವವನ್ನು ಎಲ್ಲರೂ ಗುರುತಿಸುವಂತಾಗಲು ವಿಶ್ವಾಸಾರ್ಹತೆಯನ್ನು ಹೆಚ್ಚಿಸಿಕೊಳ್ಳುವಂತಾಗಲು ಮತ್ತು ಈ ಕಾರ್ಯಕ್ರಮವನ್ನು ಇಂಡಿಯ ಬುಕ್ ಆಫ್ ರಿಕಾರ್ಡನಲ್ಲಿ ದಾಖಲಿಸಲು ಕ್ರಮವಿಡುವ ಮೂಲಕ ಸೌಹಾರ್ದ ಸಹಕಾರಿಗಳ ಸಾಧನೆಗಳನ್ನು ಕಾರ್ಯಚಟುವಟಿಕೆಗಳು ವ್ಯಾಪಕವಾಗಿ ಪ್ರಚಾರ ಮಾಡಲಾಗುತ್ತಿದೆ. ಆದ್ದರಿಂದ ಎಲ್ಲರೂ ಜನವರಿ 1 ರಂದು ಸಹಕಾರ ಧ್ವಜವನ್ನು ಹಾರಿಸಲು ಕ್ರಮವಿಡುವುದಕ್ಕಾಗಿ ಈ ಸಭೆ ಎಂದು ತಿಳಿಸಿದರು.

ಸಭೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀಮತಿ ಭಾರತಿ ಜಿ. ಭಟ್‌ರವರು ಹಾಗೂ ಶ್ರೀ ಮಂಜುನಾಥ ಎಸ್.ಕೆ ರವರು ಭಾಗವಹಿಸಿ ಉಪಯುಕ್ತ ಸಲಹೆಗಳನ್ನು ನೀಡಿದರು. ಈ ಸಭೆಯಲ್ಲಿ 326 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು

ಕಲಬುರಗಿ ವಿಭಾಗದಲ್ಲಿ ನಡೆದ 228 ಪ್ರತಿನಿಧಿಗಳು ಭಾಗವಹಿಸಿದ್ದರು. ನಿರ್ದೇಶಕರುಗಳಾದ ಶ್ರೀ ಗುರುನಾಥ ಜಾಂತಿಕರರವರು, ಶ್ರೀಮತಿ ಶೈಲಜಾ ತಪಲಿಯವರು, ಶ್ರೀ ಶ್ರೀಧರರವರು, ಶ್ರೀ ತಿಮ್ಮಯ್ಯಶೆಟ್ಟಿಯವರು, ಶ್ರೀ ಹನುಮಂತಯ್ಯ ಶೆಟ್ಟಿರವರು ಮಾಜಿ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು. ಭಾಗವಹಿಸಿ ಉಪಯುಕ್ತ ಸಲಹೆಗಳನ್ನು ನೀಡಿದರು. ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡ ರವರು

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಬೆಳಗಾವಿ ವಿಭಾಗದ ಸಭೆಯಲ್ಲಿ 474 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರರು ವಹಿಸಿದ್ದರು. ಸಭೆಯಲ್ಲಿ ನಿರ್ದೇಶಕರುಗಳಾದ ಶ್ರೀ ಜಗದೀಶ ಕವಟಗಿಮಠರವರು ಶ್ರೀ ಜಿ.ಎನ್. ಪಾಟೀಲ್‌ರವರು, ಶ್ರೀ ಮಲ್ಲಿಕಾರ್ಜುನ ಹೊರಕೇರಿಯವರು, ಶ್ರೀ ಕೆ. ಶಿವಲಿಂಗಪ್ಪ ಶ್ರೀ ನಾಗರಾಜ ದೇಶಪಾಂಡೆಯವರು, ಶ್ರೀ ಮೋಹನ ನಾಯಕರವರು, ಶ್ರೀ ರಾಮನಗೌಡ ಪಾಟೀಲ್‌ರವರು, ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಶ ಇಂಡಿರವರುಗಳು ಭಾಗವಹಿಸಿ ಉಪಯುಕ್ತ ಸಲಹೆಗಳನ್ನು ನೀಡಿದರು.

ಬೆಂಗಳೂರು ವಿಭಾಗದ ಸಭೆಯಲ್ಲಿ ಸೌಹಾರ್ದ ಸಹಕಾರಿಗಳ 221 ಪ್ರತಿನಿಧಿಗಳು ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾ–ರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಂಜನಗೌಡರವರು ವಹಿಸಿದ್ದರು. ಸಭೆಯಲ್ಲಿ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರರವರು, ನಿರ್ದೇಶಕರುಗಳಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು, ಶ್ರೀ ಬಿ.ಎಸ್.ಗುಂಡೂರಾವರವರು, ಶ್ರೀ ಸಿ.ಪಿ.ವಿಜಯರವರು, ಶ್ರೀ ರಘುರಾಮರೆಡ್ಡಿ ಯವರು, ಶ್ರೀ ಪ್ರಭುದೇವರವರು ಭಾಗವಹಿಸಿ ಉತ್ತಮ ಸಲಹೆಗಳನ್ನು ನೀಡಿದರು.

4 ಆನ್‌ಲೈನ್ ಸಭೆಗಳಲ್ಲಿ ಮಾತನಾಡಿದ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಸೌಹಾರ್ದ ಸಹಕಾರಿ ಕ್ಷೇತ್ರ 1–1–2025ಕ್ಕೆ 24 ವರ್ಷಗಳು ಯಶಸ್ವಿಯಾಗಿ ಕಳೆದು 25ನೇ ವರ್ಷಕ್ಕೆ ಪಾದಾರ್ಪಣ ಮಾಡುತ್ತಿದೆ. ಬೆಳ್ಳಿ ಹಬ್ಬ ಆಚರಿಸಲು ಸಿದ್ಧವಾಗುತ್ತಿದೆ. ಈ ಅವಧಿಯಲ್ಲಿ 6400 ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ನೊಂದಣಿಯಾಗಿ 5000ಕ್ಕೂ ಹೆಚ್ಚು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಅನೇಕ ಸಾಧನೆಗಳನ್ನು ಮಾಡಿವೆ. ಎಲ್ಲ ಹಂತಗಳಲ್ಲೂ ಗುರುತಿಸಲಾಗುತ್ತಿದೆ. ಸ್ವಾಯತ್ತತೆ ಸ್ವಯಂ ನಿಯಂತ್ರಣ ಮತ್ತು ಸ್ವಯಂ ಆಡಳಿತದ ಧ್ಯೇಯದೊಂದಿಗೆ ನಾವುಗಳು ಕೆಲ ಮಾಡುತ್ತಿರುವುದರಿಂದ ನಮ್ಮ ಚೌಕಟ್ಟು ಮೀರಿ ಕಾರ್ಯನಿರ್ವಹಿಸಬಾರದು. ಸ್ವಯಂಶಿಸ್ತು ಹಾಗೂ ಬದ್ಧತೆಗಳಿಗೆ ಆದ್ಯತೆ ನೀಡಬೇಕು. ಈ ಸಂದರ್ಭದಲ್ಲಿ ರಾಜ್ಯದ ಸಹಕಾರಿಗಳಿಗೆ ಸೌಹಾರ್ದ ಸಹಕಾರಿಗಳ ಇರುವಿಕೆಯನ್ನು ಗೊತ್ತು ಮಾಡುವ ಸಾಧನೆಗಳ್ನು ಪ್ರಚಾರಮಾಡುವ ಬೆಳ್ಳಿ ಹಬ್ಬಗಳ ಕಾರ್ಯಕ್ರಮಗಳ ಪ್ರಾರಂಭದ ಜೊತೆಗೆ ಸೌಹಾರ್ದ ಸಹಕಾರಿ ದಿನವನ್ನು ಆಚರಿಸುವ ಸಂದರ್ಭದಲ್ಲಿ 7 ಬಣ್ಣಗಳ ಸಹಕಾರಿ ಧ್ವಜವನ್ನು ಎಲ್ಲ ಸೌಹಾರ್ದ ಸಹಕಾರಿಗಳು ತಮ್ಮ ಸಹಕಾರಿಯಲ್ಲಿ ಹಾರಿಸುವುದರ ಮೂಲಕ ಇದೊಂದು ಇಂಡಿಯಾ ಬುಕ್ ಆಫ್ ರೆಕಾರ್ಡ ನಲ್ಲಿ ದಾಖಲೆಯಾಗುವಂತೆ ಸಂಯುಕ್ತ ಸಹಕಾರಿಯು ಮಾಡುತ್ತಿರುವ ಕ್ರಮದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಸ್ಥಿರತೆ, ಧೃಡತೆ, ಹಾಗೂ ಸುಸ್ಥಿರ ಅಭಿವೃದ್ಧಿಯ ಕಾರ್ಯಕ್ರಮಗಳಲ್ಲಿ ಪಾಲುದಾರರಾಗಬೇಕೇಂದು ವಿನಂತಿ ಮಾಡಿದರು.

ನಾಲ್ಕು ಸಭೆಗಳಲ್ಲಿ ಭಾಗವಹಿಸಿದ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಇದೊಂದು ಉತ್ತಮ ಪ್ರಗತಿಪರ ಹೆಜ್ಜೆಯಾಗಿದೆ. ನಾವೆಲ್ಲರೂ ದಿನಾಂಕ 1–1–2025 ರಂದು ಬೆಳಿಗ್ಗೆ ಸಹಕಾರಿ ಧ್ವಜಹಾರಿಸುವ ಮೂಲಕ ರಜತಮಹೋತ್ಸವಕ್ಕೆ ಚಾಲನೆ ಹಾಗೂ ಸೌಹಾರ್ದ ಸಹಕಾರಿ ದಿನದ ಆಚರಣೆಯಲ್ಲಿ ಭಾಗವಹಿಸುತ್ತೇವೆ. ವರ್ಷಂಪ್ರತಿ ಹಾಗೂ ಪ್ರತಿ ಮಾಹೆಯಲ್ಲಿ ರಾಜ್ಯದಾದ್ಯಂತ ಆಚರಿಸಲ್ಪಡುವ ರಜತ ಮಹೋತ್ಸವದ ಕಾರ್ಯಕ್ರಮಗಳಿಗೆ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು.

ಅತ್ಯಂತ ತುರ್ತಾಗಿ ವ್ಯವಸ್ಥೆ ಮಾಡಿದ ಈ 4 ಸಭೆಗಳಲ್ಲಿ ರಾಜ್ಯದ 1254 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿ ಸೌಹಾರ್ದ ಸಹಕಾರಿ ದಿನಾಚರಣೆಗೆ ಹಾಗೂ ರಜತಮಹೋತ್ಸವ ಆಚರಣೆಗೆ ಚಾಲನೆಗೆ ಸಂಪೂರ್ಣ ಸಹಕಾರ ಹಾಗೂ ಬೆಂಬಲ ನೀಡುವುದಾಗಿ ತಿಳಿಸಿದರು.

**ಆನ್ ಲೈನ್ ಸಭೆಗಳಲ್ಲಿ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ನೀಡಿದ ಸಲಹೆಗಳು :**

1. ನಮ್ಮವರಲ್ಲದವರನ್ನು ತಲುಪುವ ಅವರನ್ನು ಸೌಹಾರ್ದ ಸಹಕಾರಿ ಕ್ಷೇತ್ರದ ವ್ಯಾಪ್ತಿಗೆ ಒಳಪಡಿಸುವ ಪ್ರಯತ್ನವಾಗಬೇಕು. ನಮ್ಮ ಇಮೇಜ್ ಹೆಚ್ಚಾಗುವ ಸಾಧ್ಯತೆ ಇರುತ್ತದೆ.
2. ಗ್ರಾಮೀಣ ಪ್ರದೇಶಗಳಿಗೆ ಕೆಲವು ಕಾರ್ಯಕ್ರಮಗಳನ್ನು ಕೊಡಬೇಕು.
3. ಕೌಶಲ್ಯ ಅಭಿವೃದ್ಧಿ ಹಾಗೂ ವೃತ್ತಿ ನೈಪುಣ್ಯತೆ ಹೆಚ್ಚಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.
4. ರಜತ ಮಹೋತ್ಸವ ಆಚರಣೆಗಾಗಿ ರಾಜ್ಯ ಮಟ್ಟದಲ್ಲಿ ಕೆಲವು ಕಾರ್ಯಕ್ರಮಗಳಿಗೆ ಬಹುಮಾನ ಘೋಷಿಸಬೇಕು
5. ಸೌಹಾರ್ದ ಸಹಕಾರಿ ನೌಕರರ ದಿನವನ್ನು ಆಚರಿಸಲು ಕ್ರಮವಿಡಬೇಕು. ನೌಕರ ವರ್ಗದವರಿಗೆ ಮಾನಸಿಕ ಸ್ಥೈರ್ಯ ತುಂಬುವ ಕ್ರಮಗಳು ಜರುಗಬೇಕು.
6. ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಹೆಚ್ಚಿನ ಜಾಗೃತಿಯನ್ನು ಉಂಟು ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.
7. ಸೌಹಾರ್ದ ಸಹಕಾರಿಗಳ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಿ.
8. ಸೌಹಾರ್ದ ಸಹಕಾರಿಗಳ ಗುಣಮಟ್ಟ ಸುಧಾರಣೆಗೆ ಕ್ರಮವಿಡಬೇಕು.
9. ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳು ಇನ್ನು ಮುಂದೆ ಹುಟ್ಟದಂತೆ ಕ್ರಮವಿಡಬೇಕು.
10. ವರ್ಷಾಂತ್ಯದಲ್ಲಿ ಒಂದು ಬೃಹತ ಸಮಾವೇಶವನ್ನು ಹಮ್ಮಿಕೊಳ್ಳಬೇಕು. ಸಾಧನೆಗಳ ವಿಚಾರ ವಿನಿಮಯವಾಗಬೇಕು. ಮುಂಬರುವ ದಿನಗಳ ಕ್ರೀಯಾ ಯೋಜನೆಗಳ ಅನಾವರಣವಾಗಬೇಕು.

# ಶ್ರೀ ಅಜಯ ನಾಗಭೂಷಣ ಐ.ಎ.ಎಸ್. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಕರ್ನಾಟಕ ಸರಕಾರ ಇವರು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ.

## ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಶ್ಲಾಘನೆ : ಸಿಬ್ಬಂದಿಯವರು ಉತ್ತಮ ವೃತ್ತಿ ಸಂಸ್ಕೃತಿಯನ್ನು ಬೆಳೆಸಿಕೊಳ್ಳಲು ಸಲಹೆ : ಶ್ರೀ ಅಜಯ ನಾಗಭೂಷಣ ಐ.ಎ.ಎಸ್, ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಕರ್ನಾಟಕ ಸರಕಾರ.






**ಬೆಂಗಳೂರು** : ಸಹಕಾರ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಅಜಯ ನಾಗಭೂಷಣ ಐ.ಎ.ಎಸ್.ರವರು ದಿನಾಂಕ 03–12–2024 ರಂದು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ ನೀಡಿ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿದರು.

ಶ್ರೀಯುತರ ಜೊತೆಯಲ್ಲಿ ಸಹಕಾರ ಸಂಘಗಳ ನಿಬಂಧಕರಾದ ಶ್ರೀ ಟಿ.ಎಮ್.ಹೆಚ್. ಕುಮಾರ ಐ.ಎ.ಎಸ್. ಮತ್ತು ಅಪರ ನಿಬಂಧಕರು ಹಾಗೂ ಸರಕಾರದ ಜಂಟಿ ಕಾರ್ಯದರ್ಶಿಗಳಾದ ಶ್ರೀ ದಿವಾಕರರವರು, ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ಕಲಪ್ಪ ಓಬಣ್ಣಗೋಳ, ಬೆಂಗಳೂರು ಪ್ರಾಂತೀಯ ಜಂಟಿ ನಿಬಂಧಕರಾದ ಶ್ರೀ ಅಶ್ವತ್ಥನಾರಾಯಣರವರು, ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಶಶಿಧರವರು, ಸಂಯುಕ್ತ ಸಹಕಾರಿಯ ದಾವಾ ಪಂಚಾಯಿತಿ ನ್ಯಾಯಾಲಯದ ಪೀಠಾಧಿಕಾರಿ ಶ್ರೀಮತಿ ಗಗನರವರು ಹಾಗೂ ಸಹಾಯಕ ನಿಬಂಧಕರಾದ ಶ್ರೀ ಪ್ರೇಮಾನಂದರವರುಗಳು ಉಪಸ್ಥಿತರಿದ್ದರು.

ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರು ಶ್ರೀಯುತರನ್ನು ಸ್ವಾಗತಿಸಿ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳನ್ನು ಪಿ.ಪಿ.ಟಿ. ಮೂಲಕ ವಿವರಿಸಿದರು.

ಪಿ.ಪಿ.ಟಿ. ಮೂಲಕ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿ–ಕೆಗಳನ್ನು ಪರಿಶೀಲಿಸಿದ ಪ್ರಧಾನ ಕಾರ್ಯದರ್ಶಿಗಳು ನಿಮ್ಮ ಸಂಸ್ಥೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಕಾರ್ಯಚಟುವಟಿಕೆಗಳು ತೃಪ್ತಿಕರವಾಗಿವೆ. ಸಿಬ್ಬಂದಿಯವರು ಉತ್ತಮ ವೃತ್ತಿ ಸಂಸ್ಕೃತಿಯನ್ನು ರೂಢಿಸಿಕೊಳ್ಳಲು ಸಲಹೆ ನೀಡಿದರು.

**ಶ್ರೀಯುತರು ನೀಡಿದ ಸಲಹೆಗಳು :**

1. ಲಾಭದಲ್ಲಿರುವ ಸೌಹಾರ್ದ ಸಹಕಾರಿ ಸಂಘಗಳನ್ನು ಗುರುತಿಸುವುದರ ಜೊತೆಗೆ ನಷ್ಟದಲ್ಲಿರುವ ಸಹಕಾರ ಸಂಘಗಳನ್ನು ಗುರುತಿಸಿ ಅವುಗಳು ಲಾಭದಲ್ಲಿ ಬರುವಂತೆ ಅಗತ್ಯ ಕ್ರಮಗಳಿಗೆ ಸಲಹೆ ನೀಡುವುದು.
2. ಭದ್ರತೆ ರಹಿತ ಸಾಲಗಳನ್ನು ಭದ್ರತಾ ಸಾಲಗಳನ್ನಾಗಿ ಪರಿವರ್ತಿಸಲು ಕ್ರಮವಿಡುವಂತೆ ಮಾರ್ಗದರ್ಶನ ಮಾಡಿ.
3. ಸೌಹಾರ್ದ ಸಹಕಾರಿಗಳು ಕಾನೂನು ಚೌಕಟ್ಟಿನಲ್ಲಿಯೆ ಕಾರ್ಯನಿರ್ವಹಿಸುವಂತೆ ಮಾರ್ಗದರ್ಶನ ಮಾಡಿ.
4. ವ್ಯಾಜ್ಯಗಳನ್ನು ಕಡಿಮೆ ಸಮಯದಲ್ಲಿಯೇ ಪರಿಹರಿಸಿ.
5. ಸ್ಥಗಿತ 551 ಸೌಹಾರ್ದ ಸಹಕಾರಿಗಳನ್ನು ಪುನಶ್ಚೇತನಕ್ಕೆ ಅಥವಾ ಸಮಾಪನೆ ಮಾಡಲು ಕ್ರಮವಿಡಿ.
6. ಸಮಾಪನೆ ಹಂತದಲ್ಲಿರುವ ಸಹಕಾರ ಸಂಘಗಳ ವಿಧಿವಿಧಾನಗಳನ್ನು ತ್ವರಿತಗತಿಯಿಂದ ನಿರ್ವಹಿಸಲು ಕ್ರಮವಿಡಿ.
7. ಸೌಹಾರ್ದ ಸಹಕಾರಿಗಳು ವ್ಯಾಜ್ಯಗಳ ಪರಿಹಾರಕ್ಕೆ ಸಾಲ ವಸೂಲಾತಿಗೆ ಸೌಹಾರ್ದ ನ್ಯಾಯಪೀಠದಲ್ಲಿ ವ್ಯಾಜ್ಯಗಳನ್ನು ಹೂಡುವಂತೆ ತಿಳುವಳಿಕೆ ನೀಡಿ.
8. ಸಹಕಾರಿ ಸಂಸ್ಥೆಗಳು ಸೌಹಾರ್ದಕ್ಕೆ ಪರಿವರ್ತನೆಗೆ ಹಾಗೂ ಸೌಹಾರ್ದ ಸಹಕಾರಿಗಳು ಸಹಕಾರ ಸಂಘಗಳಾಗಿ ಪರಿವರ್ತನೆಗೆ ಎರಡು ಕಾಯ್ದೆಗಳಲ್ಲಿ ಅವಕಾಶಮಾಡಿಕೊಳ್ಳಲು ಕ್ರಮದ ಅಗತ್ಯತೆಯನ್ನು ತಿಳಿಸಿದರು.
9. 5 ಕೋಟಿಗಿಂತ ಹೆಚ್ಚಿನ ವ್ಯವಹಾರವಿರುವ ಸೌಹಾರ್ದ ಸಹಕಾರಿಗಳ ವ್ಯವಹಾರಗಳನ್ನು ಪೂರ್ಣ ಗಣಕೀಕರಣಮಾಡಿ ಇ–ಆಫೀಸ್ ಆಗಿ ಕಾರ್ಯನಿರ್ವಹಿಸುವಂತೆ ಕ್ರಮವಿಡುವುದು.
10. ಸಂಯುಕ್ತ ಸಹಕಾರಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಇಲ್ಲಿ ಕೆಲಸ ಮಾಡುವ ಸಿಬ್ಬಂದಿಯವರು ಅದೃಷ್ಟವಂತರು.
11. ಉತ್ತಮವಾಗಿ ಮಾಡಿದ ಕೆಲಸ ಕಾರ್ಯಗಳಿಗೆ ಉತ್ತಮ ಪ್ರಚಾರ ನೀಡಿ.
12. ಸಂಯುಕ್ತ ಸಹಕಾರಿಯ ಸಿಬ್ಬಂದಿಯವರ ಕಾರ್ಯಕ್ಷಮತೆಯನ್ನು ಹೆಚ್ಚಿಸುವಂತೆ ಮುಂದಿನ 5 ವರ್ಷಗಳ ಯೋಜನೆಯನ್ನು ಸಿದ್ಧಪಡಿಸಿ.

13. ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗೆ ಉತ್ತಮ ಸೌಲಭ್ಯಗಳನ್ನು ನೀಡಲು ಕ್ರಮವಿಡುವುದು.
14. ಸಿಬ್ಬಂದಿಯವರಿಗೆ ಹೆಚ್ಚಿನ ತರಬೇತಿ ಕಾರ್ಯಕ್ರಮಗಳನ್ನು ಒದಗಿಸಿ.
15. ಮುಂದಿನ 3–5 ವರ್ಷಗಳ ಕಾರ್ಯಯೋಜನೆಯನ್ನು ಸಿದ್ಧಪಡಿಸಿ ಅನುಷ್ಠಾನಕ್ಕೆ ಕ್ರಮವಿಡಿ.

ನಂತರದಲ್ಲಿ ಶ್ರೀಯುತರಿಗೆ, ಸಹಕಾರಿಗಳ ನಿಬಂಧಕರಿಗೆ ಹಾಗೂ ಅಧಿಕಾರಿಗಳಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಸನ್ಮಾನಿಸಲಾಯಿತು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರು, ಉಪಪ್ರಧಾನ ವ್ಯವಸ್ಥಾಪಕರು ಎಲ್ಲ ವಿಭಾಗಗಳ ಮುಖ್ಯಸ್ಥರುಗಳು ಸಭೆಯಲ್ಲಿ ಉಪಸ್ಥಿತರಿದ್ದರು.

## ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 23ನೇ ತಂಡದ 10 ದಿನಗಳ ವ್ಯಕ್ತಿತ್ವ ವಿಕಸನ ವಿಶೇಷ ತರಬೇತಿ ಕಾರ್ಯಕ್ರಮ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ 23ನೇ ತಂಡದ 10 ದಿನಗಳ ವ್ಯಕ್ತಿತ್ವ ವಿಕಸನ ವಿಶೇಷ ತರಬೇತಿ ಕಾರ್ಯಕ್ರಮವನ್ನು ದಿನಾಂಕ : 02.12.2024 ರಿಂದ 11.12.2024ರ ವರೆಗೆ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು.

### ಉದ್ಘಾಟನಾ ಕಾರ್ಯಕ್ರಮ



ದಿನಾಂಕ 02.12.2024ರಂದು ಉದ್ಘಾಟನಾ ಕಾರ್ಯಕ್ರಮವನ್ನು ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು ಹಾಗೂ ಸದಸ್ಯರು ಕರ್ನಾಟಕ ಮೇಲ್ಮವಿ ನ್ಯಾಯಾಧಿಕರಣ, ಶ್ರೀ ಎಸ್.ಎನ್. ಅರುಣ್ ಕುಮಾರ್‌ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆರ್.ಐ.ಸಿ.ಎಂ. ಇದರ ಮಾನ್ಯ ಪ್ರಾಂತೀಯ ನಿರ್ದೇಶಕರಾದ ಡಾ. ಪಿ.ಎನ್. ಸುರೇಶ್‌ರವರು ಉಪಸ್ಥಿತರಿದ್ದರು.

ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು ಹಾಗೂ ಸದಸ್ಯರು ಕರ್ನಾಟಕ ಮೇಲ್ಮವಿ ನ್ಯಾಯಾಧಿಕರಣ, ಶ್ರೀ ಎಸ್.ಎನ್. ಅರುಣ್ ಕುಮಾರ್‌ರವರು ಮಾತನಾಡಿ ಸಹಕಾರ ಕ್ಷೇತ್ರದ ವ್ಯಾಪ್ತಿ ಹಾಗೂ ಸಾಧನೆಯನ್ನು ನೋಡಿ ಸಂತೋಷವಾಗಿದೆ. ಸೌಹಾರ್ದ ಸಹಕಾರಿಗಳ ವಿವಿಧ ರೀತಿಯ ಚಟುವಟಿಕೆಗಳು ಸಹ ಮೆಚ್ಚುವಂತಹದ್ದಾಗಿದೆ. ಸೌಹಾರ್ದ ಸಹಕಾರಿಗಳ ಉತ್ತಮ ಕಾರ್ಯನಿರ್ವಹಣೆಗೆ ಈ ರೀತಿಯ ತರಬೇತಿ ಕಾರ್ಯಕ್ರಮಗಳು ನೆರವಾಗುತ್ತವೆ. ಇಂತಹ ತರಬೇತಿ ಕಾರ್ಯಕ್ರಮಗಳನ್ನು ನಿರಂತರವಾಗಿ ಮತ್ತು ಉತ್ತಮವಾಗಿ ಹಮ್ಮಿಕೊಳ್ಳುತ್ತಿರುವ ಸಂಯುಕ್ತ ಸಹಕಾರಿಯವರನ್ನು ಅಭಿನಂದಿಸುತ್ತೇನೆ ಎಂದು ತಿಳಿಸಿದರು. ಆರ್ಟಿಫಿಶಿಯಲ್ ಇಂಟೆಲಿಜೆನ್ಸ್(AI) ಬಗ್ಗೆ ತರಬೇತಿಯನ್ನು ನೀಡಿ ಅದರ ಬಗ್ಗೆ ಎಲ್ಲರಿಗೂ ಮಾಹಿತಿ ನೀಡುವಂತಹ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ, ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ಮಾತನಾಡಿ, 1997ನೇ ತಿದ್ದುಪಡಿ ಕಾಯ್ದೆ ಅನ್ವಯದಡಿಯಲ್ಲಿ ಸಹಕಾರಿಗಳು ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಮಾಹಿತಿ ನೀಡಿದರು. ಸಹಕಾರಿ ಸಂಘದ ಪ್ರತಿಯೊಬ್ಬರು ದಕ್ಷತೆಯಿಂದ ಹಾಗೂ ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಿದರೆ ಮಾತ್ರ ಸಹಕಾರ ಕ್ಷೇತ್ರ ಬೆಳೆಯಲು ಸಾಧ್ಯವೆಂದು ತಿಳಿಸಿದರು. ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಸಿಬ್ಬಂದಿಯವರ ಕಾರ್ಯಕ್ಷಮತೆ ಹೆಚ್ಚುತ್ತದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಡಾ. ಪಿ.ಎನ್. ಸುರೇಶ್‌ರವರು ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಸ್ವಾಗತ ಹಾಗೂ ಪ್ರಾಸ್ತಾವಿಕ ಭಾಷಣ ಮಾತನಾಡುತ್ತಾ, ಪ್ರಸ್ತುತ ಇದು 23ನೇ ತಂಡವಾಗಿರುತ್ತದೆ. ದಿನಾಂಕ 02.12.2024 ರಿಂದ 11.12.2024ರವರೆಗೆ, ಹಮ್ಮಿಕೊಂಡಿರುವ ಈ ತರಬೇತಿಯಲ್ಲಿ ರಾಜ್ಯದ 19 ಜಿಲ್ಲೆಗಳಿಂದ 42 ಸೌಹಾರ್ದ ಸಹಕಾರಿಗಳಿಂದ 51 ಜನ ಸಿಬ್ಬಂದಿಗಳು ಭಾಗವಹಿಸಿ ಪ್ರಯೋಜನ ಪಡೆಯಲಿದ್ದಾರೆ. ಈ ತರಬೇತಿಯಲ್ಲಿ ಸುಮಾರು 30ಕ್ಕಿಂತ ಹೆಚ್ಚು ವಿಷಯಗಳನ್ನು ಅಳವಡಿಸಲಾಗಿದ್ದು, 30 ಸಂಪನ್ಮೂಲ ವ್ಯಕ್ತಿಗಳು ಆಗಮಿಸಿ ಉಪನ್ಯಾಸ ನೀಡಲಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಅಧ್ಯಯನ ಸಾಹಿತ್ಯವನ್ನು ಸಹ ನೀಡಲಾಗಿದೆ.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ರಾಜ್ಯದ 19 ಜಿಲ್ಲೆಗಳ 42 ಸೌಹಾರ್ದ ಸಹಕಾರಿಗಳಿಂದ 51 ಸಿಬ್ಬಂದಿಯವರು ಭಾಗವಹಿಸಿದ್ದರು.

### 10 ದಿನಗಳ ವ್ಯಕ್ತಿತ್ವ ವಿಕಸನದ ಚಟುವಟಿಕೆಗಳು – ವಿಷಯಗಳು

**ಹಾಗೂ ಉಪನ್ಯಾಸಗಳು :** ತರಬೇತಿಯಲ್ಲಿ 30 ವಿಷಯಗಳನ್ನು ಅಳವಡಿಸಲಾಗಿತ್ತು. ಸಂಯುಕ್ತ ಸಹಕಾರಿಯ ಅಧಿಕಾರಿಗಳು, ಸಹಕಾರಿ ತಜ್ಞರುಗಳು ಮತ್ತು ಬ್ಯಾಂಕಿಂಗ್ ಕ್ಷೇತ್ರದ ಅನುಭವವಿರುವ ಕಾರ್ಪೋರೇಟ್ ತರಬೇತಿದಾರರು ಭಾಗವಹಿಸಿ, ತರಬೇತಿ ನೀಡಿದರು.

**ಪ್ರಾಯೋಗಿಕಗಳು :**

1. ವಿವಿಧ ತಂಡಗಳನ್ನು ರಚಿಸಿ, ಪ್ರತಿ ನಿತ್ಯದ ಕಾರ್ಯಕ್ರಮಗಳ ನಿರ್ವಹಣೆ ಮಾಡುವುದು, ಪ್ರಾರ್ಥನೆ, ದಿನದ ಸುವಿಚಾರ ಹೇಳಿಸುವುದು, ಹಿಂದಿನ ದಿನದ ತರಬೇತಿ ಕಾರ್ಯಕ್ರಮದ ಸಾರಾಂಶ ಮಿಲಿ ಹೇಳುವುದು, ಪ್ರತಿದಿನದ ವರದಿಗಳನ್ನು ಪ್ರತಿ ತಂಡದವರು ಸಾಮೂಹಿಕವಾಗಿ ಕುಳಿತು ಸಿದ್ಧಪಡಿಸಿ ಸಲ್ಲಿಸುವುದು.
2. ಸಭೆಗಳನ್ನು ನಡೆಸುವುದು, ಆಡಳಿತ ಮಂಡಲಿ ಸಭೆಯ ನೋಟೀಸು ಸಿದ್ಧಪಡಿಸುವುದು, ನಡವಳಿಕೆಗಳನ್ನು ಬರೆಯುವುದು, ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು ಸಿದ್ಧಪಡಿಸುವುದು.
3. ಕ್ರಿಯಾ ಯೋಜನೆ ಸಿದ್ಧಪಡಿಸುವುದು.
4. ಲಾಭ-ನಷ್ಟ ತಃಖ್ತೆ, ವ್ಯಾಪಾರಿ ತಃಖ್ತೆ ಹಾಗೂ ಆಸ್ತಿ-ಜವಾಬ್ದಾರಿ ತಃಖ್ತೆಗಳನ್ನು ಸಿದ್ಧಪಡಿಸುವುದು
5. ಸಾಲ ವಸೂಲಾತಿ, ದಾವಾ ದಾಖಲಾತಿಗಳ ನಿರ್ವಹಣೆ.
6. ಶಕ್ತಿ, ಸಾಮರ್ಥ್ಯ, ದೌರ್ಬಲ್ಯಗಳು, ಅವಕಾಶಗಳು ಹಾಗೂ ಸವಾಲುಗಳ ನಿರ್ವಹಣೆಯ ಪ್ರಾಯೋಗಿಕಗಳನ್ನು ನಡೆಸಲಾಯಿತು

ಎಲ್ಲಾ ಪ್ರಾಯೋಗಿಕಗಳಲ್ಲಿ ಶಿಬಿರಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿ ಪ್ರಯೋಜನ ಪಡೆದರು.

**ತರಬೇತಿಯೇತರ ಚಟುವಟಿಕೆಗಳು :** ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ ಇತ್ಯಾದಿಗಳ ಬಗ್ಗೆ ಕ್ವಿಜ್ ಕಾರ್ಯಕ್ರಮವನ್ನು ಶ್ರೀ ಬಿ.ಎಸ್. ಚಂದ್ರಶೇಖರ್‌ರವರು ನಡೆಸಿಕೊಟ್ಟರು.

**ಸಾಂಸ್ಕೃತಿಕ ಕಾರ್ಯಕ್ರಮ :** ತರಬೇತಿ ಅವಧಿಯಲ್ಲಿ ಶ್ರೀ ಗುರು ರಾಘವೇಂದ್ರ ಲಹರಿ ಸಂಸ್ಥೆಯವರಿಂದ ಸುಗಮ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

**ಯೋಗ ಕಾರ್ಯಕ್ರಮ :** ಶಿಬಿರಾರ್ಥಿಗಳಲ್ಲಿ ಆರೋಗ್ಯದ ಬಗ್ಗೆ ಅರಿವು ಮೂಡಿಸುವುದಕ್ಕಾಗಿ ಮತ್ತು ಅವರುಗಳು ನಿರಂತರ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸುವಂತೆ ಪೂರಕವಾಗಲು ಪ್ರತಿದಿನ ಬೆಳಗ್ಗೆ 6.00 ರಿಂದ 7.00ರವರೆಗೆ ಯೋಗ ತರಬೇತಿಯ ವ್ಯವಸ್ಥೆ ಮಾಡಲಾಗಿತ್ತು. ಈ ಕಾರ್ಯಕ್ರಮವನ್ನು ಶ್ರೀಮತಿ ಪ್ರಿಯಾಂಕರವರು ನಡೆಸಿಕೊಟ್ಟರು.

**ಯಶಸ್ವಿ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳ ಜೊತೆಗೆ ಸಂವಾದ :** ರಾಜ್ಯದಲ್ಲಿ ವಿಶಿಷ್ಟ ರೀತಿಯ ಕಾರ್ಯನಿರ್ವಹಿಸುತ್ತಿರುವ ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿ ನಿ., ಶಿರಸಿ ಇದರ ಮಾನ್ಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ರಾಜೇಂದ್ರ ಜಿ ಜೋಶಿರವರು, ಯಶಸ್ವಿನಿ ಮಹಿಳಾ ಸೌಹಾರ್ದ ಸಹಕಾರಿ ನಿ., ಬೆಂಗಳೂರು, ಇದರ ಮಾನ್ಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಎ.ವಿ.ಎಲ್. ರಾವ್‌ರವರು, ಸಮೃದ್ದ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ, ಇದರ ಮಾನ್ಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ರಾಜಶೇಖರ್ ಕೆ.ಎಂ.ರವರು ಇವರುಗಳೆಲ್ಲ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ, ತಮ್ಮ ಸೌಹಾರ್ದ ಸಹಕಾರಿಗಳ ಪ್ರಾರಂಭದಿಂದ ಇಲ್ಲಿಯವರೆಗಿನ ಕಾರ್ಯ ಚಟುವಟಿಕೆಗಳ ಬಗ್ಗೆ ಶಿಬಿರಾರ್ಥಿಗಳಿಗೆ ಮಾಹಿತಿ ನೀಡಿದರು ಮತ್ತು ಶಿಬಿರಾರ್ಥಿಗಳ ಜೊತೆಗೆ ಪ್ರಶ್ನೋತ್ತರಗಳಿಗೆ ಸ್ಪಂದಿಸಿದರು.

**ಅಧ್ಯಯನ ಪ್ರವಾಸ :** ಶಿಬಿರಾರ್ಥಿಗಳಿಗೆ ಉತ್ತಮ ಸೌಹಾರ್ದ ಸಹಕಾರಿಗಳನ್ನು ಪರಿಚಯಿಸುವ ದೃಷ್ಟಿಯಿಂದ ದಿನಾಂಕ 10.12.2024ರಂದು ಬೆಂಗಳೂರಿನ ಉದಯ ಸೌಹಾರ್ದ ಸಹಕಾರಿ ನಿ., ಪಾವಗಡ ಸೌಹಾರ್ದ ಸಹಕಾರಿ ನಿ., ಇಲ್ಲಿಗೆ ಭೇಟಿ ನೀಡಲಾಯಿತು.

ನಂತರದಲ್ಲಿ ಶಿಬಿರಾರ್ಥಿಗಳು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ ನೀಡಿದರು. ಸಂಯುಕ್ತ ಸಹಕಾರಿಯ ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆರವರು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ವಿವರ ನೀಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

**ರೈತ ಸೇವಾ ಸಹಕಾರಿ ಸಂಘಕ್ಕೆ ಭೇಟಿ :** ಸಿಂಗನಾಯಕನಹಳ್ಳಿಯಲ್ಲಿರುವ ರೈತ ಸೇವಾ ಸಹಕಾರಿ ಸಂಘಕ್ಕೆ ಭೇಟಿ ನೀಡಿ ಅಲ್ಲಿನ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿದುಕೊಳ್ಳಲಾಯಿತು. ಇಲ್ಲಿನ ಮಾನ್ಯ ಅಧ್ಯಕ್ಷರಾದ ಶ್ರೀಮತಿ ವಾಣಿ ವಿಶ್ವನಾಥ್ ಇವರು ಸಂಘದ ಬಗ್ಗೆ ತಿಳಿಸಿದರು.

ನಂತರದಲ್ಲಿ ಮದರ್ ಡೈರಿಗೆ ಭೇಟಿ ನೀಡಲಾಯಿತು. ನಂತರದಲ್ಲಿ ಶಿಬಿರಾರ್ಥಿಗಳು ಇಸ್ಕಾನ್ ದೇವಸ್ಥಾನಕ್ಕೆ ಭೇಟಿ ನೀಡುವ ಮೂಲಕ ಅಧ್ಯಯನ ಪ್ರವಾಸವನ್ನು ಕೈಗೊಳ್ಳಲಾಗಿತ್ತು.

**ಪರೀಕ್ಷೆ :** ದಿನಾಂಕ 11.12.2024ರಂದು ಪರೀಕ್ಷೆಯನ್ನು ಆನ್‌ಲೈನ್ ಮೂಲಕ ನಡೆಸಲಾಯಿತು. ಪ್ರಥಮ, ದ್ವಿತೀಯ, ತೃತೀಯ, ಹಾಗೂ ಸಮಾದಾನಕರ ಬಹುಮಾನಗಳನ್ನು ನಗದು ರೂಪದಲ್ಲಿ ನೀಡಲಾಯಿತು.

**ಪರೀಕ್ಷೆಯಲ್ಲಿ ವಿಜೇತರಾದ ಶಿಬಿರಾರ್ಥಿಗಳು :**

1) ಪ್ರಥಮ ಬಹುಮಾನ : ಶ್ರೀ ವಿರೂಪಾಕ್ಷಪ್ಪ. ಖ. ಮಹಾಜನ ಶೆಟ್ಟಿ
2) ದ್ವಿತೀಯ ಬಹುಮಾನ: ಶ್ರೀ ಪವನ್ ಎಂ. ಆರ್
3) ತೃತೀಯ ಬಹುಮಾನ: ಶ್ರೀ ಕುಶಾಲ ಕೆ.ಎಂ.
4) ಸಮಾಧಾನಕರ ಬಹುಮಾನ : ಶ್ರೀ ಬಸಪ್ಪ ಗಲಗಲಿ.

5) ಸಮಾದಾನಕರ ಬಹುಮಾನ: ಶ್ರೀ ಶಾಮೂರ್ತಿ.

**ಸಮಾರೋಪ ಕಾರ್ಯಕ್ರಮ :**



ಸಮಾರೋಪ ಕಾರ್ಯಕ್ರಮವನ್ನು ದಿನಾಂಕ 11.12.2024ರಂದು ಏರ್ಪಡಿಸಲಾಗಿತ್ತು. ಶಿಬಿರಾರ್ಥಿಗಳೇ ಈ ಸಮಾರೋಪ ಕಾರ್ಯಕ್ರಮವನ್ನು ಆಯೋಜನೆ ಮಾಡಿದ್ದರು. ಶ್ರೀ ಲಕ್ಷ್ಮೀಪತಯ್ಯ, ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು ಹಾಗೂ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು ಇವರು ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಇವರು ವಹಿಸಿಕೊಂಡಿದ್ದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಡಾ. ಪಿ.ಎಸ್. ಸುರೇಶ್ ಮಾನ್ಯ ನಿರ್ದೇಶಕರು, ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಬೆಂಗಳೂರು ಇವರು ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯು ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಲಿದೆ. ಅದರಲ್ಲೂ ವಿಶೇಷವಾಗಿ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿಗಳನ್ನು ವಿಶೇಷ ಕಾರ್ಯಕ್ರಮವಾಗಿದೆ. ತಾವು ಈ ಕಾರ್ಯಕ್ರಮದ ಪ್ರಯೋಜನ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

**ಶಿಬಿರಾರ್ಥಿಗಳ ಆಯ್ದ ಅನಿಸಿಕೆಗಳು :**

ಕಾರ್ಯಕ್ರಮವನ್ನು ಅತ್ಯಂತ ಶಿಸ್ತಿನಿಂದ, ವ್ಯವಸ್ಥಿತವಾಗಿ ನಡೆಸಲಾಗಿದೆ. ನಮ್ಮ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿದೆ. ಬಹಳ ಒಳ್ಳೆಯ ಶಿಬಿರ, ಉತ್ತಮ ವಿಷಯಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳ ಆಯ್ಕೆ ಉತ್ತಮವಾಗಿತ್ತು ಎಂಬುದಾಗಿ ತಿಳಿಸಿದ್ದಾರೆ.

**ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳ ವಿತರಣೆ :** ಶಿಬಿರದಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಬಹುಮಾನಗಳನ್ನು ಮತ್ತು ಎಲ್ಲಾ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ನೀಡಲಾಯಿತು.



**ವಿವಿಧ ಕಾರ್ಯಕ್ರಮಗಳಲ್ಲಿ ಬಹುಮಾನ ಪಡೆದ ಶಿಬಿರಾರ್ಥಿಗಳು**

1. ಉತ್ತಮವಾದ ಸುವಿಚಾರ – ಶ್ರೀ ವಿರೂಪಾಕ್ಷಪ್ಪ ದೊಡ್ಡಪ್ಪ ಮಹಾಜನ ಶೆಟ್ಟಿ
2. ಉತ್ತಮವಾದ ಮಿಲಿ – ಶ್ರೀ ಅಣ್ಣಾಸಾಹೇಬ ರಾಜೇಂದ್ರ ಬಟ್ಟಣ್ಣವರ.
3. ತಕ್ಷಣ ಮಿಲಿ – ಶ್ರೀಮತಿ ಪೂರ್ಣಿಮ
4. ಉತ್ತಮ ತಂಡ – 1. ಮೊದಲನೇ ಬಹುಮಾನ : ಗಂಧದಗುಡಿ
   2. ಎರಡನೆಯ ಬಹುಮಾನ : ಹಂಪಿ,
   3. ಮೂರನೇಯ ಬಹುಮಾನ : ಚಾಣಕ್ಯ
   4. ನಾಲ್ಕನೇಯ ಬಹುಮಾನ : ಕುವೆಂಪು
5. ಉತ್ತಮ ಶಿಭಿರಾರ್ಥಿ – ಮಹಿಳಾ ವಿಭಾಗ : ಕು. ದಿವ್ಯಶ್ರೀ, ಹಾಗೂ ಶ್ರೀಮತಿ ರಾಜಲಕ್ಷ್ಮಿ.
   – ಪುರುಷ ವಿಭಾಗ : ಶ್ರೀ ರಾಮನಗೌಡ, ಹಾಗೂ ಶ್ರೀ ಕೆಂಚಪ್ಪ.
6. ಉತ್ತಮ ಪ್ರಾರ್ಥನೆ – ಶ್ರೀಮತಿ ಮಧುಶಾಲಿನಿ ಹಾಗೂ ಶ್ರೀಮತಿ ಶೈಲಾ

23ನೇ ತಂಡದ ನೆನಪಿನ ಕಾಣಿಕೆ : ಶಿಬಿರಾರ್ಥಿಗಳು ತಮ್ಮ ತಂಡದ ನೆನಪಿನ ಕಾಣಿಕೆಯಾಗಿ ನೆನಪಿನ ಕಾಣಿಕೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಗೆ ನೀಡಿದರು. ಶಾಂತಿ ಮಂತ್ರದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಡಿಸೆಂಬರ್ 2024 : ಶಾಸನಾತ್ಮಕ ವಿಭಾಗದ ಕಾರ್ಯಚಟುವಟಿಕೆಗಳು

**1. ವಿಶೇಷಾಧಿಕಾರಿ ನೇಮಕದ ಕುರಿತು.**

ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿಯ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾದ 03 ಸೌಹಾರ್ದ ಸಹಕಾರಿಗಳಿಗೆ ಸೌಹಾರ್ದ ಕಾಯ್ದೆ ಕಲಂ 38ಎ ರನ್ವಯ ಡಿಸೆಂಬರ್ ತಿಂಗಳಲ್ಲಿ ವಿಶೇಷಾಧಿಕಾರಿಗಳನ್ನು ನೇಮಕ ಮಾಡಿ ಆದೇಶವನ್ನು ಹೊರಡಿಸಲಾಗಿರುತ್ತದೆ.

## ಸೌಹಾರ್ದ ಸಹಕಾರಿ ಚಳುವಳಿಯ ರಜತ ಮಹೋತ್ಸವ ವರ್ಷ 2025

## ಸೌಹಾರ್ದ ಸಹಕಾರಿಗಳಿಂದ ರಜತ ಮಹೋತ್ಸವದ ಪ್ರಯುಕ್ತ ಒಂದು ಮಾದರಿ ಲಾಂಛನ (ಲೋಗೋ) ಮತ್ತು ಒಂದು ಮಾದರಿ ಘೋಷವಾಕ್ಯ ನೀಡುವುದಕ್ಕಾಗಿ ಆಹ್ವಾನ

ಆತ್ಮೀಯರೇ, ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಯಾಗಿ 01.01.2025ಕ್ಕೆ 25 ವರ್ಷಗಳು ಕಳೆದಿವೆ. ಈ 25 ವರ್ಷಗಳ ರಜತ ಮಹೋತ್ಸವ ಪ್ರಯುಕ್ತ ರಾಜ್ಯದ ಸೌಹಾರ್ದ ಸಹಕಾರಿ ಸನ್ನದ್ಧರಾಗಬೇಕಾಗಿದೆ. ಈ ಆಚರಣೆ ವೈಶಿಷ್ಟ ಪೂರ್ಣವಾಗಿ ಸಂಭ್ರಮದಿಂದ ಜರುಗಬೇಕಿದೆ. ಸಂಯುಕ್ತ ಸಹಕಾರಿಯ ಮಾರ್ಗದರ್ಶನದಲ್ಲಿ ಈ ಆಚರಣೆ ಅತ್ಯಂತ್ಯ ವೈಭೋವೋಪೂರಿತವಾಗಿ ನಡೆಯುವುದಕ್ಕೆ ಸಂಕಲ್ಪಿಸಲಾಗಿದೆ.

ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಡ್ಡಿದ್ದಾರೆ. ವರ್ಷವಿಡೀ ಕಾರ್ಯಕ್ರಮಗಳು ನಡೆಯುತ್ತವೆ. ಈ ಎಲ್ಲಾ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ನಡೆಯುವುದಕ್ಕಾಗಿ ಒಂದು ಆಕರ್ಷಕ ಲಾಂಛನ (ಲೋಗೋ) ಹಾಗೂ ಒಂದು ಉತ್ತಮ ಘೋಷವಾಕ್ಯ ಅಗತ್ಯವಿದೆ. ಎಲ್ಲಾ ಸೌಹಾರ್ದ ಸಹಕಾರಿಗಳು ಈ ಬಗ್ಗೆ ಅಲೋಚನೆ ಮಾಡಿ ಒಂದು ಲಾಂಛನ (ಲೋಗೋ) ಹಾಗೂ ಒಂದು ಘೋಷವಾಕ್ಯವನ್ನು ಸಂಯುಕ್ತ ಸಹಕಾರಿಯ ಇ–ಮೇಲ್ ಐಡಿ kssfcltrg@souharda.coop ದಿನಾಂಕ 25.01.2025ರೊಳಗಾಗಿ ಕಳುಹಿಸಲು ಕೋರಿದೆ.

**ಲಾಂಛನ (ಲೋಗೋ) ಹಾಗೂ ಘೋಷವಾಕ್ಯ ಮಾದರಿ :**

| | |
|---|---|
| ಸಹಕಾರ ಸೇ ಸಮೃದ್ಧಿ – ಕೇಂದ್ರ ಸರಕಾರ ಸಚಿವಾಲಯ | सहकार से समृद्धि |
| ಸ್ವಾಯತ್ತತೆ, ಸ್ವಯಂ ಆಡಳಿತ ಮತ್ತು ಸ್ವಯಂ ನಿಯಂತ್ರಣ – ಸಂಯುಕ್ತ ಸಹಕಾರಿ ಧ್ಯೇಯ | |
| Serving to Grow, Growing to serve - Canara bank | CANARA BANK Canara Bank |
| ಆರ್ಥಿಕ ಅಭಿವೃದ್ಧಿ ಕೇಂದ್ರಗಳಾಗಿ ಸೌಹಾರ್ದ ಸಹಕಾರಿಗಳು | |
| ಆರ್ಥಿಕ ಶಿಸ್ತು, ಉತ್ತಮ ಗುಣಮಟ್ಟ ಸೌಹಾರ್ದ ಸಹಕಾರಿಗಳ ಧ್ಯೇಯ. | |
| ಸ್ವಾಯತ್ತತೆ, ಸ್ವಯಂ ನಿಯಂತ್ರಣ ಮತ್ತು ಅಭಿವೃದ್ಧಿಗಾಗಿ ಸೌಹಾರ್ದ ಸಹಕಾರಿಗಳು | |

## ಸಂಯುಕ್ತ ಸಹಕಾರಿಯ ಸಾಮಾಜಿಕ ಜಾಲತಾಣವನ್ನು Follow/ Subscribe ಮಾಡುವ ಕುರಿತು.

ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಪ್ರಚಾರಕ್ಕಾಗಿ ಸಾಮಾಜಿಕ ಜಾಲತಾಣಗಳಾದ facebook, twitter, instagram, youtube ಖಾತೆಗಳನ್ನು ಹೊಂದಿದ್ದು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಈ ಕೆಳಗಿನ ಲಿಂಕ್‌ಗಳ ಮೂಲಕ Follow/ Subscribe ಮಾಡಲು ಕೋರಿದೆ.

FACEBOOK LINK : https://www.facebook.com/profile.php?id=100070379508086

TWITTER LINK : https://twitter.com/StateSouharda

INSTAGRAM LINK : https://www.instagram.com/kssfcl/

YOUTUBE LINK : https://www.youtube.com/channel/UCiZg79933WYB-aBAjcOJmvQ

# ರಾಜ್ಯದ ವಿವಿಧ ಭಾಗಗಳಲ್ಲಿ ಸೌಹಾರ್ದ ಸಹಕಾರಿಗಳ 2024-25ನೇ ಸಾಲಿನ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆಗಳ ಮಾಹಿತಿ



**ಚಿಕ್ಕಬಳ್ಳಾಪುರ :** ದಿನಾಂಕ 23.12.2024ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ರಾಜ್ಯ ಸರ್ಕಾರಿ ನೌಕರರ ಭವನ, ಚಿಕ್ಕಬಳ್ಳಾಪುರ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆ ಹಾಗೂ ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ವಹಿಸಿದ್ದರು. ಸಭೆಯ ಮುಖ್ಯ ಅತಿಥಿಗಳಾಗಿ ಸಹಕಾರ ಸಂಘಗಳ ಉಪ ನಿರ್ದೇಶಕರಾದ ಶ್ರೀ ವೇಣುರವರು, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಅಮರ್ ರವರು, ಒಕ್ಕೂಟದ ನಿರ್ದೇಶಕರಾದ ಶ್ರೀಮತಿ ಶೈಲಜಾ ರವರು ಮತ್ತು ವೆಂಕಟರಮಣಪ್ಪರವರು, ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ಎಸ್.ರವರು ಉಪಸ್ಥಿತ–ರಿದ್ದರು. ಸಭೆಯ ಪ್ರಾಸ್ತಾವಿಕ ನುಡಿಯನ್ನು ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ಎಸ್.ರವರು ನೆರವೇರಿಸಿದರು. ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್.ರವರು ನಡೆಸಿಕೊಟ್ಟರು. 27 ಸೌಹಾರ್ದ ಸಹಕಾರಿಗಳಿಂದ ಮುಖ್ಯಕಾರ್ಯನಿರ್ವಾಹಕರು ಮತ್ತು ಆಡಳಿತ ಮಂಡಳಿಯವರು ಸೇರಿ 38 ಜನರು ಭಾಗವಹಿಸಿದ್ದರು.

---



**ಕೊಪ್ಪಳ :** ದಿನಾಂಕ 18.12.2024 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕೊಪ್ಪಳ ಜಿಲ್ಲೆಯ ಗಂಗಾವತಿ, ಕಾರಟಗಿ, ಮತ್ತು ಕನಕಗಿರಿ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ವಾರ್ಷಿಕ ಸಭೆಯನ್ನು ಹೊಟೇಲ್ ಲಲಿತ ಮಹಲ್ ಆನೆಗುಂದಿ ರಸ್ತೆ, ಗಂಗಾವತಿಯಲ್ಲಿ ಆಯೋಜಿಸಲಾಗಿತ್ತು.

ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರರವರು ನೇರವೇರಿಸಿದರು. ವಾರ್ಷಿಕ ಸಭೆಗೆ ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಒಕ್ಕೂಟದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪಾ ಪತ್ತಾರರವರು ಆಗಮಿಸಿದ್ದರು.

ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರವರು ಆರ್ಥಿಕ ಸಬಲತೆ ಮಾನದಂಡಗಳು ಹಾಗೂ ಸಹಕಾರಿಗಳಿಗೆ ಅನ್ವಯಿಸುವ ಕಾಯ್ದೆಗಳ ಕುರಿತು, ಕಾಮನ್ ಸರ್ವಿಸ್ ಕೇಂದ್ರದ ಕುರಿತು ಮಾಹಿತಿ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಓಂಕಾರವರು ಮುಖ್ಯಕಾರ್ಯನಿರ್ವಾಹಕರ ಶಾಸನಾತ್ಮಕ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿ ನೀಡಿದರು. ಸಭೆಯಲ್ಲಿ 132 ಮುಖ್ಯಕಾರ್ಯನಿರ್ವಾಹಕರುಗಳು ಭಾಗವಹಿಸಿದ್ದರು.

---



**ಕೊಪ್ಪಳ :** ದಿನಾಂಕ 19.12.2024 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕೊಪ್ಪಳ ಜಿಲ್ಲೆಯ ಕೊಪ್ಪಳ, ಯಲಬುರ್ಗಾ, ಕುಕನೂರು ಕುಷ್ಟಗಿ ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಮುಖ್ಯಕಾರ್ಯನಿರ್ವಾಹಕರುಗಳ ವಾರ್ಷಿಕ ಸಭೆಯನ್ನು ಗಂಗಾ–ಯಮುನಾ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ಆಯೋಜಿಸಲಾಗಿತ್ತು.

ಸಭೆಯ ಉದ್ಘಾಟನೆಯನ್ನು ಸಹಕಾರ ಸಂಘಗಳ ಮಾನ್ಯ ಉಪನಿಬಂಧಕರಾದ ಶ್ರೀ ದಸ್ತಗಿರ ಅಲಿಯವರು ಉದ್ಘಾಟಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರರವರು ವಹಿಸಿದ್ದರು. ವಾರ್ಷಿಕ ಸಭೆಗೆ ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಒಕ್ಕೂಟದ ನಿರ್ದೇಶಕರಾದ ಶ್ರೀ ಶಂಕರಗೌಡ ಹಿರೇಗೌಡ, ಶರಣಪ್ಪ ವಡಗೇರಿ ಉಪಸ್ಥಿತರಿದ್ದರು.

ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರವರು ಆರ್ಥಿಕ ಸಬಲತೆ ಮಾನದಂಡಗಳು ಹಾಗೂ ಸಹಕಾರಿಗಳಿಗೆ ಅನ್ವಯಿಸುವ ಕಾಯ್ದೆಗಳ ಕುರಿತು, ಕಾಮನ್ ಸರ್ವಿಸ್ ಕೇಂದ್ರದ ಕುರಿತು ಮಾಹಿತಿ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಓಂಕಾರವರು ಮುಖ್ಯಕಾರ್ಯನಿರ್ವಾಹಕರ ಶಾಸನಾತ್ಮಕ ಕರ್ತವ್ಯಗಳು ಮತ್ತು ಜವಾಬ್ದಾ–ರಿಗಳ ಕುರಿತು ಮಾಹಿತಿ ನೀಡಿದರು. ಸಭೆಯಲ್ಲಿ 165 ಮುಖ್ಯಕಾರ್ಯನಿರ್ವಾಹಕುಗಳು ಭಾಗವಹಿಸಿದ್ದರು.



**ಚಿತ್ರದುರ್ಗ** : ದಿನಾಂಕ 21.12.2024ರಂದು ಚಿತ್ರದುರ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಹೋಟೆಲ್ ಐಶ್ವರ್ಯ ಪೋರ್ಟ್ ಸಭಾಂಗಣ, ಆರ್.ಟಿ.ಓ ಕಛೇರಿ ಹತ್ತಿರ, ಚಿತ್ರದುರ್ಗ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆ ಹಾಗೂ ಅಧ್ಯಕ್ಷತೆಯನ್ನು ಚಿತ್ರದುರ್ಗ ಜಿಲ್ಲಾ ನಿರ್ದೇಶಕರಾದ ಶ್ರೀ ರಘುರಾಮರೆಡ್ಡಿ ರವರು ವಹಿಸಿದ್ದರು. ಈ ಸಂದರ್ಭದಲ್ಲಿ ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಡಿ.ಆರ್. ತಿಪ್ಪೇಸ್ವಾಮಿ ರವರು, ಉಪಸ್ಥಿತರಿದ್ದರು. ಮುಖ್ಯ ಅತಿಥಿಗಳಾಗಿ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ದಿಲೀಪ್ ಕುಮಾರ್ ಆರ್. ಎಸ್.ರವರು, ಚಿತ್ರದುರ್ಗ ಜಿಲ್ಲೆಯ ಡಿಸಿಸಿ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಇಷ್ಯಾಸುಲ್ಲ ಷರೀಫ್ರವರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಉಪನಿರ್ದೇಶಕರಾದ ಶ್ರೀ ರಂಗಸ್ವಾಮಿರವರು, ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಬಾಹುಬಲಿ ಹಂಚೆರವರು ಭಾಗವಹಿಸಿದ್ದರು. ಸಭೆಯ ಪ್ರಾಸ್ತಾವಿಕ ನುಡಿಯನ್ನು ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ಎಸ್.ರವರು ನೆರವೇರಿಸಿದರು. ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್‌ರವರು ನಡೆಸಿಕೊಟ್ಟರು. 42 ಸೌಹಾರ್ದ ಸಹಕಾರಿಗಳಿಂದ 48 ಮುಖ್ಯಕಾರ್ಯನಿರ್ವಾಹಕರು ಸೇರಿ ಇತರೆ ಸಿಬ್ಬಂದಿಗಳು ಭಾಗವಹಿಸಿದ್ದರು.



**ದಾವಣಗೆರೆ** : ದಿನಾಂಕ 20.12.2024ರಂದು ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಮುಖ್ಯಕಾರ್ಯನಿರ್ವಾಹಕರ ಸಭೆಯನ್ನು ಹೋಟೆಲ್ ಚೇತನ ಸಭಾಂಗಣ, ಅಕ್ಕಮಹಾದೇವಿ ರಸ್ತೆ, ದಾವಣಗೆರೆ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆ ಹಾಗೂ ಅಧ್ಯಕ್ಷತೆಯನ್ನು ದಾವಣಗೆರೆ ಜಿಲ್ಲೆಯ ಮಾನ್ಯ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು ವಹಿಸಿದ್ದರು. ಈ ಸಂದರ್ಭದಲ್ಲಿ ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ನಿಕಟಪೂರ್ವ ನಿರ್ದೇಶಕರಾದ ಶ್ರೀ ಹೆಚ್.ಎಮ್. ನಾಗರಾಜು ರವರು ಉಪಸ್ಥಿತರಿದ್ದರು. ಸಭೆಯ ಪ್ರಾಸ್ತಾವಿಕ ನುಡಿಯನ್ನು ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ಎಸ್. ರವರು ನೆರವೇರಿಸಿದರು. ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್ ರವರು ನಡೆಸಿಕೊಟ್ಟರು. 54 ಸೌಹಾರ್ದ ಸಹಕಾರಿಗಳಿಂದ 58 ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು.



**ಗದಗ:** ದಿನಾಂಕ 19.12.2024 ರಂದು ಬೆಳಿಗ್ಗೆ 10.30 ಕ್ಕೆ ಗದಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಲಲಿತಾಂಬ ಸೌಹಾರ್ದ ಸಹಕಾರಿಯ ನಿ., ಗದಗ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆ ಮತ್ತು ಅಧ್ಯಕ್ಷತೆಯನ್ನು ಶ್ರೀ ನಾಗರಾಜ ದೇಶಪಾಂಡೆ ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಅರವಿಂದ ನಾಗಜ್ಜನವರ, ಪ್ರಭಾರ ಉಪನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪ-ರಿಶೋಧನಾ ಇಲಾಖೆ ಗದಗ ಇವರು ಆಗಮಿಸಿದ್ದರು. ಸೈಬರ ಕ್ರೈಂ ಕುರಿತು ಶ್ರೀ ಆನಂದ ಮಾಳಿ ಇವರು ಉಪನ್ಯಾಸ ನೀಡಿದರು. ಸಂಯುಕ್ತ ಸಹಕಾರಿಗೆ ಕಾಲಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು ಮತ್ತು ಕಾಮನ ಸರ್ವಿಸ್ ಸೆಂಟರ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಕಲ್ಮೇಶ ಎಸ್ ಎಂ ಉಪನ್ಯಾಸ ನೀಡಿದರು. ಸ್ವಾಗತ ಹಾಗೂ ನಿರೂಪಣೆಯನ್ನು ಶ್ರೀ ವಿವೇಕ್ ಕುಲಕರ್ಣಿ ಇವರು ನೆರವೇರಿಸಿದರು. ಪ್ರಾಸ್ತಾವಿಕ ನುಡಿಯನ್ನು ಗದಗ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಕಲ್ಮೇಶ ಎಸ್ ಎಂ ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಒಟ್ಟು 41 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಜರಿದ್ದರು



**ಹಾವೇರಿ:** ದಿನಾಂಕ 20.12.2024 ರಂದು ಬೆಳಿಗ್ಗೆ 10.30 ಕ್ಕೆ ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಗ್ರೀನ್ ಕೋರ್ಟ್ ಹಾಲ್ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆ ಮತ್ತು ಅಧ್ಯಕ್ಷತೆಯನ್ನು ಶ್ರೀ ಕೆ. ಶಿವಲಿಂಗಪ್ಪ ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ದೈವಜ್ಞ ಬ್ರಾಹ್ಮಣ ಸೌಹಾರ್ದ ಮುಖ್ಯ ಕಾರ್ಯ ನಿರ್ವಾಹಕರಾದ ಶ್ರೀ ಬಚ್ಚಪ್ಪಗೌಡ್ರ ಅವರು ಆಗಮಿಸಿದ್ದರು. ಸೈಬರ ಕ್ರೈಂ ಕುರಿತು ಶ್ರೀ ಆನಂದ ಮಾಳಿ ಇವರು ಉಪನ್ಯಾಸ ನೀಡಿದರು. ಸಾಮಾನ್ಯ ಸೇವಾ ಕೇಂದ್ರದ ಕುರಿತು (ಸಿಎಸ್‌ಸಿ) ಮತ್ತು ಸಂಯುಕ್ತ ಸಹಕಾರಿಗೆ ಕಾಲಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿ ಬಗ್ಗೆ ಶ್ರೀ ಕೆ ರಘುನಂದನ ರವರು ಉಪನ್ಯಾಸವನ್ನು ನೀಡಿದರು.

ಸಂಯುಕ್ತ ಸಹಕಾರಿಗೆ ಕಾಲಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು ಮತ್ತು ಕಾಮನ ಸರ್ವಿಸ್ ಸೆಂಟರ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಕಲ್ಮೇಶ ಎಸ್ ಎಂ ಉಪನ್ಯಾಸ ನಿಡಿದರು. ಸ್ವಾಗತ ಶ್ರೀ ಬಸವರಾಜ ಲಕ್ಕೊಳ್ಳಿ ಇವರು ನೆರವೇರಿಸಿದರು.ಕಾರ್ಯಕ್ರಮವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಕಲ್ಮೇಶ ಎಮ್ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಒಟ್ಟು 112 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಜರಿದ್ದರು.



**ಬೀದರ :** ದಿನಾಂಕ 23.12.2024 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಮುಖ್ಯಕಾರ್ಯನಿರ್ವಹಕರ ವಾರ್ಷಿಕ ಸಭೆಯನ್ನು ಸಹಾರ್ದ ತರಬೇತಿ ಸಂಸ್ಥೆ ನೌಬಾದ, ಬೀದರನಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ್ ರವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಸಹಕಾರ ಸಂಘಗಳ ಮಾನ್ಯ ಉಪನಿಬಂಧಕರಾದ ಶ್ರೀಮತಿ ಮಂಜುಳಾ, ಸೌಹಾರ್ದ ದಾವಾ ಪಂಚಾಯತಿ ನ್ಯಾಯಾಲಯದ ಸಹಾಯಕ ನಿಬಂಧಕರಾದ ಶ್ರೀ ಪ್ರೇಮಾನಂದ ಬಿ.ಪಿ ರವರು, ಸಂಯುಕ್ತ ಸಹಕಾ-ರಿಯ ಮನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು, ತರಬೇತಿಯ ಸಂಸ್ಥೆಯ ಮುಖ್ಯಸ್ಥರಾದ ಶ್ರೀ ಸುಬ್ರಮಣ್ಯ ಪ್ರಭು, ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲ, ತರಬೇತಿ ಅಧಿಕಾರಿಗಳಾದ ಶ್ರೀ ಶಿವಕುಮಾರ ಬಿರಾದಾರ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಪ್ರಾಸ್ತವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ನುಡಿದರು. ಸ್ವಾಗತವನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಕೋರಿದರು.

ಸಾಲ ವಸೂಲಾತಿ ದಾವಾ ದಾಖಲಾತಿ ಹಾಗೂ ಮಾರಾಟ ಅಧಿಕಾ-ರಿಗಳ ಕರ್ತವ್ಯಗಳ ಕುರಿತು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯದ ಸಹಕಾರ ನಿಬಂಧಕರಾದ ಶ್ರೀ ಪ್ರೇಮಾನಂದ ಬಿ.ಪಿ ರವರು ನೀಡಿದರು. ನಂತರ ಸಿ.ಎಸ್.ಸಿ ಅಧಿಕಾರಿಯಾದ ಶ್ರೀ ಸಂಗಮೇಶ ಇವರು ಕಾಮನ ಸಾಫ್ಟವೇರ್ ಕುರಿತು ಮಾಹಿತಿ ನೀಡಿದರು.

ಮಧ್ಯಾಹ್ನದ ಅವಧಿಯಲ್ಲಿ ಮುಖ್ಯಕಾರ್ಯನಿರ್ವಾಹಕರ ಶಾಸನಬದ್ದ ಜವಾಬ್ದಾರಿ ಮತ್ತು ಕರ್ತವ್ಯಗಳು ಹಾಗೂ ಸಭೆಯ ನೊಟಿಸ್ ವಿಷಯಗಳ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಕುರಿತು ಚರ್ಚಿಸಿದರು. ವಂದನಾರ್ಪಣೆ ಮತ್ತು ನಿರೂಪಣೆಯನ್ನು ವೀರಶಟ್ಟಿ ಕೆಯವರು ನಿರೂಪಿಸಿದರು. ಸಭೆಯಲ್ಲಿ 75 ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳು ಭಾಗವಹಿಸಿದ್ದರು.



**ಯಾದಗಿರಿ :** ದಿನಾಂಕ 17.12.2024 ದಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಮುಖ್ಯಕಾರ್ಯನಿರ್ವಾಹಕರುಗಳ ವಾರ್ಷಿಕ ಸಭೆಯನ್ನು ಹೊಟೆಲ್ ಮಾತೋಶ್ರೀ ಫ್ಯಾಮಿಲಿ ರೆಸ್ಟೋರೆಂಟ್ ಶಹಪುರದಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ

ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಶೈಲಜಾ ತಪಲಿಯವರು ವಹಿಸಿದ್ದರು. ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ನುಡಿದರು. ಮತ್ತು ಮುಖ್ಯಕಾರ್ಯನಿರ್ವಾಹಕರ ಜವಾಬ್ದಾರಿ ಮತ್ತು ಕರ್ತವ್ಯಗಳು ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಇತ್ತಿಚೀನ ಬೆಳವಣಿಗೆ ಕುರಿತು ಉಪನ್ಯಾಸ ನೀಡಿದರು. ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಎಮ್. ಆರ್ ರವರು ನೆರವೇರಿಸಿದರು. ಸಭೆಯಲ್ಲಿ 40 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.




**ಕಲಬುರಗಿ :** ದಿನಾಂಕ 21.12.2024 ರಂದು ಸಂಯುಕ್ತ ಸಹಕಾರಿಯ ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕಲಬುರಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಮುಖ್ಯಕಾರ್ಯನಿರ್ವಾಹಕರುಗಳ ವಾರ್ಷಿಕ ಸಭೆಯನ್ನು ಪ್ರಾಂತೀಯ ಕಛೇರಿಯ ತರಬೇತಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿಕಟಪೂರ್ವ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ವಹಿಸಿದ್ದರು. ಮುಖ್ಯಅತಿಥಿಗಳಾಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಸಂಜೀವಕುಮಾರರವರು ಮತ್ತು ಶ್ರೀ ಬಸವಕಿರಣ ಸಾಫ್ಟವೇರ್ ಮ್ಯಾನೇಜರ್ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಸ್ವಾಗತ ಮತ್ತು ಪ್ರಾಸ್ತವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ನುಡಿದರು.

ಪ್ರಥಮ ಅವಧಿಯಲ್ಲಿ ಸಿ.ಎಸ್.ಸಿ ಕಾಮನ್ ಸೇವೆಗಳ ಕುರಿತು ಶ್ರೀ ಬಸವ ಕಿರಣರವರು ಮಾಹಿತಿ ನೀಡಿದರು. ಎರಡನೇಯ ಅವಧಿಯಲ್ಲಿ ಮುಖ್ಯಕಾರ್ಯನಿರ್ವಾಹಕರ ಹಕ್ಕು ಮತ್ತು ಜವಾಬ್ದಾರಿಗಳ ಕುರಿತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಮಾಹಿತಿ ನೀಡಿ ಕಲಂ 34ರ ಮಾಹಿತಿ ಸಲ್ಲಿಕೆ, ವಿವಿಧ ಪ್ರಾಧಿಕಾರಿಗಳಿಗೆ ಸಲ್ಲಿಸಿರುವ ಕುರಿತು ಚರ್ಚಿಸಿದರು. ಸಭೆಯಲ್ಲಿ 105 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



**ಮಂಡ್ಯ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮೈಸೂರು ಪ್ರಾಂತೀಯ ಕಚೇರಿ ವತಿಯಿಂದ ಮಂಡ್ಯ ಜಿಲ್ಲೆಯ ಸೌಹಾರ್ದ ಸಹಕಾರಿಗಳ "ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆ" ಯನ್ನು ದಿನಾಂಕ: 18.12.2024 ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ.,ಎಂ ಲಿಂಗಯ್ಯ ಬಿಲ್ಡಿಂಗ್, ವಿ ವಿ ರಸ್ತೆ, ಮಂಡ್ಯ ಈ ಕಚೇರಿಯಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಗುರುರಾಜ್ ಬಿ.ಟಿ ರವರು ವಹಿಸಿದರು. ಪ್ರಾಸ್ತಾವಿಕ ನುಡಿಯನ್ನು ಮೈಸೂರು ಪ್ರಾಂತೀಯ ಅಧಿಕಾರಿಯಾದ ಶ್ರೀ ಗುರುಪ್ರಸಾದ್ ಬಂಗೇರ ರವರು ನೆರವೇರಿಸಿದರು.

ವಿಷಯ 1. "ಮುಖ್ಯ ಕಾರ್ಯನಿರ್ವಾಹಕರ ಶಾಸನಬದ್ಧ ಜವಾಬ್ದಾರಿ ಮತ್ತು ಕರ್ತವ್ಯಗಳು" ಬಗ್ಗೆ ಮಾನ್ಯ ಪ್ರಾಂತೀಯ ಅಧಿಕಾರಿ ಉಪನ್ಯಾಸವನ್ನು ನೀಡಿದರು. ವಿಷಯ 2. ಸಾಮಾನ್ಯ ಸೇವಾ ಕೇಂದ್ರದ ಕುರಿತು (ಸಿ.ಎಸ್.ಸಿ) ಶ್ರೀ ಉಮಾಶಂಕರ್ ಜಿಲ್ಲಾ ವ್ಯವಸ್ಥಾಪಕರು ಮಂಡ್ಯ (ಸಿ.ಎಸ್.ಸಿ) ಇವರು ಮಾಹಿತಿಯನ್ನು ನೀಡಿದರು. ವಿಷಯ 3. ಆರ್ಥಿಕ ಸಬಲತೆಯ ಮನದಂಡಗಳ ಸುತ್ತೋಲೆ & ಲೆಕ್ಕಪರಿಶೋಧನ ವರದಿಯಲ್ಲಿ ಕಂಡುಬಂದಿರುವ ನ್ಯೂನ್ಯತೆಗಳ ಕುರಿತು ಶ್ರೀ ಬಲರಾಮ್ ಎನ್ ಇವರು ಉಪನ್ಯಾಸ ನೀಡಿದರು

ಮಧ್ಯಾಹ್ನದ ಅವಧಿಯಲ್ಲಿ ಪ್ರಾಂತೀಯ ಅಧಿಕಾರಿಯ ಅಧ್ಯಕ್ಷತೆಯಲ್ಲಿ ಮುಖ್ಯ ಕಾರ್ಯನಿರ್ವಾಹಕರ ಸಭೆ ಮತ್ತು ಸಂವಾದ ಜರುಗಿತು. ಸಭೆಯ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಮಂಡ್ಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಬಲರಾಮ್ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಒಟ್ಟು 21 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಜರಿದ್ದರು.



**ಮೈಸೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಬೆಂಗಳೂರು ಇದರ ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಮೈಸೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ "ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆ" ಯನ್ನು ದಿನಾಂಕ: 19.12.2024 ಹೋಟೆಲ್ ಪಂಚವಟಿ, ಎಸ್.ಡಿ.ಎಂ ಕಾಲೇಜು ಎದುರು, ಜೆ.ಎಲ್.ಬಿ.ರಸ್ತೆ, ಲಕ್ಷ್ಮೀಪುರಂ, ಮೈಸೂರು ಈ ಕಚೇರಿಯಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಯ ಉದ್ಘಾಟನೆಯನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಮನೋಜ್‌ಕುಮಾರ್ ಎಸ್ ಹೆಚ್ ರವರು ನೆರವೇರಿಸಿದರು. ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಆರ್. ನಾರಾಯಣ ರಾವ್ ರವರು ಅಧ್ಯಕ್ಷತೆಯನ್ನು ವಹಿಸಿದ್ದರು ಹಾಗೂ ತುಳು ಶಿವಳ್ಳಿ ಮಾಧ್ವ ಬ್ರಾಹ್ಮಣ ಸೌಹಾರ್ದ ಸಹಕಾರಿ ಸಂಘ ನಿ., ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಜಗದೀಶ್ ಹೆಬ್ಬಾರ್ ರವರು ಭಾಗವಹಿಸಿದ್ದರು. ಪ್ರಾಸ್ತಾವಿಕ ನುಡಿಗಳನ್ನು ಸಂಯುಕ್ತ ಸಹಕಾರಿಯ ಮಾನ್ಯ ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು, ಸಭೆಯ ಸ್ವಾಗತವನ್ನು ಸುರೇಶ ಆರ್ ಎಸ್ ರವರು ಹಾಗೂ ವಂದನಾರ್ಪಣೆಯನ್ನು ಒಕ್ಕೂಟದ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಎಸ್. ಸಿ. ಭಗೀರಥ ನೆರವೇರಿಸಿದರು.

ವಿಷಯ 1. "ಮುಖ್ಯ ಕಾರ್ಯನಿರ್ವಾಹಕರ ಶಾಸನಬದ್ಧ ಜವಾಬ್ದಾರಿ ಮತ್ತು ಕರ್ತವ್ಯಗಳು" ಬಗ್ಗೆ ಮಾನ್ಯ ಪ್ರಾಂತೀಯ ಅಧಿಕಾರಿರವರು ಉಪನ್ಯಾಸವನ್ನು ನೀಡಿದರು. ವಿಷಯ 2. ಸಾಮಾನ್ಯ ಸೇವಾ ಕೇಂದ್ರದ ಕುರಿತು (ಸಿ.ಎಸ್.ಸಿ) ಶ್ರೀ ಚೇತನ್, ಜಿಲ್ಲಾ ವ್ಯವಸ್ಥಾಪಕರು ಮೈಸೂರು ಇವರು ಮಾಹಿತಿಯನ್ನು ನೀಡಿದರು. ವಿಷಯ 3. ಆರ್ಥಿಕ ಸಬಲತೆಯ ಮನದಂಡಗಳ ಸುತ್ತೋಲೆ & ಲೆಕ್ಕಪರಿಶೋಧನ ವರದಿಯಲ್ಲಿ ಕಂಡುಬಂದಿರುವ ನ್ಯೂನ್ಯತೆಗಳ ಕುರಿತು ಶ್ರೀ ಸುರೇಶ ಆರ್ ಎಸ್ ಇವರು ಉಪನ್ಯಾಸ ನೀಡಿದರು.

ಮಧ್ಯಾಹ್ನದ ಅವಧಿಯಲ್ಲಿ ಪ್ರಾಂತೀಯ ಅಧಿಕಾರಿಯ ಅಧ್ಯಕ್ಷತೆಯಲ್ಲಿ ಮುಖ್ಯ ಕಾರ್ಯನಿರ್ವಾಹಕರ ಸಭೆ ಮತ್ತು ಸಂವಾದ ಜರುಗಿತು. ಸದರಿ ಸಭೆಯಲ್ಲಿ ಒಟ್ಟು 56 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಜರಿದ್ದರು.

---



**ಚಾಮರಾಜನಗರ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಬೆಂಗಳೂರು ಇದರ ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಚಾಮರಾಜನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ "ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆ"ಯನ್ನು ದಿನಾಂಕ : 20.12.2024 ರಂದು "ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ಸಂಘ ನಿ.," 1ನೇ ಮಹಡಿ, ಪಿಕಾರ್ಡೋ ಆಸ್ಪತ್ರೆ ಎದುರುಗಡೆ, ಬಿ.ರಾಚಯ್ಯ ಜೋಡಿ ರಸ್ತೆ, ಚಾಮರಾಜನಗರ ಸಹಕಾರಿಯ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದ ಉದ್ಘಾಟನೆ & ಅಧ್ಯಕ್ಷತೆಯನ್ನು ಶ್ರೀ ಬಾಲಸುಬ್ರಹ್ಮಣ್ಯ ಎಸ್, ನಿರ್ದೇಶಕರು, ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ಸಂಘ ನಿ., ಇವರು ವಹಿಸಿದ್ದರು. ಈ ಸಭೆಯಲ್ಲಿ ಶ್ರೀ ಗುರುಪ್ರಸಾದ್ ಬಂಗೇ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಸ್ತಾವಿಕ ನುಡಿಯನ್ನು ಶ್ರೀ ಗುರುಪ್ರಸಾದ್ ಬಂಗೇರ, ಪ್ರಾಂತೀಯ ಅಧಿಕಾರಿ ಇವರು ನುಡಿದರು. ಕಾರ್ಯಕ್ರಮದ ಸ್ವಾಗತ, ನಿರೂಪಣೆ ಹಾಗು ವಂದನಾರ್ಪಣೆಯನ್ನು ಶ್ರೀ ಬಲರಾಮ್ ಎನ್ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ಮಾಡಿದರು.

ವಿಷಯ:1. "ಮುಖ್ಯ ಕಾರ್ಯನಿರ್ವಾಹಕರ ಶಾಸನಬದ್ಧ ಜವಾಬ್ದಾರಿ ಮತ್ತು ಕರ್ತವ್ಯಗಳು" ಬಗ್ಗೆ ಶ್ರೀ ಗುರುಪ್ರಸಾದ್ ಬಂಗೇರ, ಪ್ರಾಂತೀಯ ಅಧಿಕಾರಿ ಇವರು ಉಪನ್ಯಾಸ ನೀಡಿದರು.

ವಿಷಯ:2. ಸಾಮಾನ್ಯ ಸೇವಾ ಕೇಂದ್ರದ ಕುರಿತು (ಸಿಎಸ್‌ಸಿ) ಶ್ರೀ ನಿರಂಜನ್ ಪ್ರಸಾದ್, ಜಿಲ್ಲಾ ವ್ಯವಸ್ಥಾಪಕರು, ಚಾಮರಾಜನಗರ (ಸಿಎಸ್‌ಸಿ) & ಶ್ರೀ ನಾಗಬಸವಣ್ಣ, ತಾಲೂಕು ಸಂಯೋಜಕರು, ಚಾಮರಾಜನಗರ (ಸಿಎಸ್‌ಸಿ) ಇವರು ಮಾಹಿತಿಯನ್ನು ನೀಡಿದರು.

ವಿಷಯ:3. ಆರ್ಥಿಕ ಸಬಲತೆಯ ಮಾನದಂಡಗಳ ಸುತ್ತೋಲೆ & ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದಿರುವ ನ್ಯೂನ್ಯತೆಗಳ ಕುರಿತು ಶ್ರೀ ಬಲರಾಮ್ ಎನ್ ಇವರು ಸಹಕಾರಿಗಳೊಂದಿಗೆ ಚರ್ಚಿಸಿದರು.

ಮಧ್ಯಾಹ್ನದ ಅವಧಿಯಲ್ಲಿ ಪ್ರಾಂತೀಯ ಅಧಿಕಾರಿಯ ಅಧ್ಯಕ್ಷತೆಯಲ್ಲಿ ಮುಖ್ಯ ಕಾರ್ಯನಿರ್ವಾಹಕರ ಸಭೆ ಮತ್ತು ಸಂವಾದ ಜರುಗಿತು. ಸದರಿ ಸಭೆಯಲ್ಲಿ ಒಟ್ಟು 23 ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಹಾಜರಿದ್ದರು.



**ಕೊಡಗು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮೈಸೂರು ಪ್ರಾಂತೀಯ ಕಚೇರಿ ವತಿಯಿಂದ ಕೊಡಗು ಜಿಲ್ಲೆಯ ಸೌಹಾರ್ದ ಸಹಕಾರಿಗಳ "ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆ" ಯನ್ನು ದಿನಾಂಕ : 21.12.2024 ಕೊಡವ ಎಂಟರ್‌ಪ್ರೆನ್ಯೂರ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಕೊಡವ ಸಮಾಜ ಕಾಂಪ್ಲೆಕ್ಸ್, ಮುಖ್ಯ ರಸ್ತೆ, ಮಡಿಕೇರಿ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಯ ಉದ್ಘಾಟನೆಯನ್ನು ಕೊಡಗು ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಎಂ ಪಿ ಮುತ್ತಪ್ಪ ರವರು ನೆರವೇರಿಸಿದರು. ಕೊಡವ ಎಂಟರ್‌ಪ್ರೆನ್ಯೂರ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಇದರ ಮಾನ್ಯ ನಿರ್ದೇಶಕರಾದ ಶ್ರೀ ಎಂ ಎಂ ಕುಟ್ಟಯ್ಯ ರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಪ್ರಾಸ್ತಾವಿಕ ನುಡಿಗಳನ್ನು ಸಂಯುಕ್ತ ಸಹಕಾರಿಯ ಮಾನ್ಯ ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು, ಸಭೆಯ ಸ್ವಾಗತವನ್ನು ಸುರೇಶ ಆರ್ ಎಸ್ ರವರು ಹಾಗೂ ವಂದನಾರ್ಪಣೆಯನ್ನು ಕೊಡವ ಎಂಟರ್‌ಪ್ರೆನ್ಯೂರ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಇದರ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಪೊನ್ನಪ್ಪ ನೆರವೇರಿಸಿದರು.

ವಿಷಯ 1."ಮುಖ್ಯ ಕಾರ್ಯನಿರ್ವಾಹಕರ ಶಾಸನಬದ್ಧ ಜವಾಬ್ದಾರಿ ಮತ್ತು ಕರ್ತವ್ಯಗಳು" ಬಗ್ಗೆ ಮಾನ್ಯ ಪ್ರಾಂತೀಯ ಅಧಿಕಾರಿರವರು ಉಪನ್ಯಾಸವನ್ನು ನೀಡಿದರು.

ವಿಷಯ 2. ಸಾಮಾನ್ಯ ಸೇವಾ ಕೇಂದ್ರದ ಕುರಿತು ಶ್ರೀ ಮನೋಜ್ ಕುಮಾರ್, ಜಿಲ್ಲಾ ವ್ಯವಸ್ಥಾಪಕರು ಮಡಿಕೇರಿ (ಸಿ.ಎಸ್.ಸಿ) ಇವರು ಮಾಹಿತಿಯನ್ನು ನೀಡಿದರು.

ವಿಷಯ 3 ಆರ್ಥಿಕ ಸಬಲತೆಯ ಮಾನದಂಡಗಳ ಸುತ್ತೋಲೆ & ಲೆಕ್ಕಪರಿಶೋಧನವರದಿಯಲ್ಲಿ ಕಂಡುಬಂದಿರುವ ನ್ಯೂನ್ಯತೆಗಳ ಕುರಿತು ಶ್ರೀ ಸುರೇಶ ಆರ್ ಎಸ್ ಇವರು ಉಪನ್ಯಾಸ ನೀಡಿದರು.

ನಂತರ ಪ್ರಾಂತೀಯ ಅಧಿಕಾರಿಯ ಅಧ್ಯಕ್ಷತೆಯಲ್ಲಿ ಮುಖ್ಯ ಕಾರ್ಯನಿರ್ವಾಹಕರ ಸಭೆ ಮತ್ತು ಸಂವಾದ ಜರುಗಿತು. ಸದರಿ ಸಭೆಯಲ್ಲಿ ಒಟ್ಟು 15 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಳು ಹಾಜರಿದ್ದರು.



**ಚಿಕ್ಕಮಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ "ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆ" ಯನ್ನು ದಿನಾಂಕ : 23.12.2024 ಇಂಜಿನಿಯರ್ ಸೌಹಾರ್ದ ಸಹಕಾರಿ ಸಂಘ ನಿಯಮಿತ ಚಿಕ್ಕಮಗಳೂರು ಇಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಯ ಉದ್ಘಾಟನೆಯನ್ನು ಇಂಜಿನಿಯರ್ ಸೌಹಾರ್ದ ಸಹಕಾರಿ ಸಂಘ ನಿಯಮಿತ ಇದರ ಮಾನ್ಯ ಉಪಾಧ್ಯಕ್ಷರಾದ ಶ್ರೀ ನಾಗೇಶ್ ರವರು ನೆರವೇರಿಸಿದರು. ಸಮಾನ ಸೌಹಾರ್ದ ಸಹಕಾರಿ ಸಂಘ ನಿಯಮಿತ ಇದರ ಅಧ್ಯಕ್ಷರು ಹಾಗೂ ಚಿಕ್ಕಮಗಳೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಸಂಘಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ದೇವರಾಜ ರವರು ಮುಖ್ಯ ಅತಿಥಿಯಾಗಿ ಭಾಗವಹಿಸಿದರು ಪ್ರಾಸ್ತಾವಿಕ ನುಡಿಗಳನ್ನು ಸಂಯುಕ್ತ ಸಹಕಾರಿಯ ಮಾನ್ಯ ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು, ಸಭೆಯ ಸ್ವಾಗತವನ್ನು ಶಿವಕುಮಾರ ಎ ಸಹಾಯಕರು ರವರು ಹಾಗೂ ವಂದನಾರ್ಪಣೆಯನ್ನು ವಾಸವಿ ಸೌಹಾರ್ದ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ರಘುನಂದನ್ ರವರು ನೆರವೇರಿಸಿದರು

ವಿಷಯ 1. "ಮುಖ್ಯ ಕಾರ್ಯನಿರ್ವಾಹಕರ ಶಾಸನಬದ್ಧ ಜವಾಬ್ದಾರಿ ಮತ್ತು ಕರ್ತವ್ಯಗಳು" ಬಗ್ಗೆ ಆರ್ಥಿಕ ಸಬಲತೆಯ ಮಾನದಂಡಗಳು ಸಂಯುಕ್ತ ಸಹಕಾರಿಯ ಸುತ್ತೋಲೆಗಳು, ಲೆಕ್ಕಪರಿಶೋಧನೆ ನ್ಯೂನ್ಯತೆಗಳ ವಿಷಯದ ಕುರಿತು ಮಾನ್ಯ ಪ್ರಾಂತೀಯ ಅಧಿಕಾರಿರವರು ಉಪನ್ಯಾಸವನ್ನು ನೀಡಿದರು.

ವಿಷಯ 2. ಸಾಮಾನ್ಯ ಸೇವಾ ಕೇಂದ್ರದ ಕುರಿತು (ಸಿಎಸ್‌ಸಿ) ಶ್ರೀ ವಿಜಯ್ ಕುಮಾರ್ ರವರು, ಜಿಲ್ಲಾ ವ್ಯವಸ್ಥಾಪಕರು ಚಿಕ್ಕಮಗಳೂರು (ಸಿ.ಎಸ್.ಸಿ) ಇವರು ಮಾಹಿತಿಯನ್ನು ನೀಡಿದರು.

ಸಂವಾದ ಕಾರ್ಯಕ್ರಮ ಪ್ರಾಂತೀಯ ಅಧಿಕಾರಿಯ ಅಧ್ಯಕ್ಷತೆಯಲ್ಲಿ ಮುಖ್ಯ ಕಾರ್ಯನಿರ್ವಾಹಕರ ಸಭೆ ಮತ್ತು ಸಂವಾದ ಜರುಗಿತು. ಸದರಿ ಸಭೆಯಲ್ಲಿ ಒಟ್ಟು 27 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಳು ಹಾಜರಿದ್ದರು.

# ಕರ್ನಾಟಕ ರಾಜ್ಯ ಸೌಹಾರ್ದ
# ಸಂಯುಕ್ತ ಸಹಕಾರಿ ನಿಯಮಿತ

ಶಾಸನಬದ್ಧ ಸಹಕಾರಿ ಸಂಸ್ಥೆ

**ಸ್ವಾಯತ್ತತೆ, ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣ ನಮ್ಮ ಧ್ಯೇಯ**

### ಜನವರಿ – 2025

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

### ಫೆಬ್ರವರಿ – 2025

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | |

### ಮಾರ್ಚ್ – 2025

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 30 | 31 | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

### ಏಪ್ರಿಲ್ – 2025

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | | | |

### ಮೇ – 2025

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |

### ಜೂನ್ – 2025

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | | | | | |

### ಜುಲೈ – 2025

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

### ಆಗಸ್ಟ್ – 2025

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 31 | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

### ಸೆಪ್ಟೆಂಬರ್ – 2025

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | | | | |

### ಅಕ್ಟೋಬರ್ – 2025

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

### ನವೆಂಬರ್ – 2025

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 30 | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

### ಡಿಸೆಂಬರ್ – 2025

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |

### ಸಂಯುಕ್ತ ಸಹಕಾರಿಯ ರಜಾ ದಿನಗಳು 2025

1. ಜನವರಿ 14 ಮಕರ ಸಂಕ್ರಾಂತಿ
2. ಫೆಬ್ರವರಿ 26 ಮಹಾಶಿವರಾತ್ರಿ
3. ಏಪ್ರಿಲ್ 10 ಮಹಾವೀರ ಜಯಂತಿ
4. ಏಪ್ರಿಲ್ 14 ಡಾ|| ಬಿ.ಆರ್.ಅಂಬೇಡ್ಕರ್ ಜಯಂತಿ
5. ಮೇ 01 ಕಾರ್ಮಿಕರ ದಿನಾಚರಣೆ
6. ಜೂನ್ 07 ಬಕ್ರೀದ್
7. ಆಗಸ್ಟ್ 15 ಸ್ವಾತಂತ್ರ್ಯ ದಿನಾಚರಣೆ
8. ಆಗಸ್ಟ್ 27 ವರಸಿದ್ಧಿ ವಿನಾಯಕ ವ್ರತ
9. ಸೆಪ್ಟೆಂಬರ್ 05 ಈದ್–ಮಿಲಾದ್
10. ಅಕ್ಟೋಬರ್ 1 ಆಯುಧಪೂಜೆ/ವಿಜಯದಶಮಿ
11. ಅಕ್ಟೋಬರ್ 02 ಗಾಂಧಿ ಜಯಂತಿ
12. ಅಕ್ಟೋಬರ್ 20 ನರಕ ಚತುರ್ದಶಿ
13. ಅಕ್ಟೋಬರ್ 22 ದೀಪಾವಳಿ
14. ನವೆಂಬರ್ 01 ಕನ್ನಡ ರಾಜ್ಯೋತ್ಸವ
15. ಡಿಸೆಂಬರ್ 25 ಕ್ರಿಸ್‌ಮಸ್

ತಿಂಗಳ ಎರಡನೇ ಶನಿವಾರ, ವಾರದ ಎಲ್ಲಾ ಭಾನುವಾರಗಳು ಹಾಗೂ ಮೇಲೆ ತಿಳಿಸಿದ 15 ದಿನಗಳು ಮಾತ್ರ.

**ಸೌಹಾರ್ದ ಸಹಕಾರಿಗಳ ನಡೆ - ಗುಣಮಟ್ಟದ ಕಡೆ**

“ಸೌಹಾರ್ದ ಸಹಕಾರಿ ಸೌಧ”, 18ನೇ ಅಡ್ಡರಸ್ತೆ, ಮಾರ್ಗೋಸ ರಸ್ತೆ,




ಮಲ್ಲೇಶ್ವರಂ, ಬೆಂಗಳೂರು - 560 055 ದೂ : 080-23378375 - 80



**ಹಾಸನ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತೀಯ ಕಛೇರಿ, ಇದರ ವತಿಯಿಂದ ದಿನಾಂಕ: 24.12.2024ರ ಮಂಗಳವಾರ ದಂದು ಹಾಸನ ಜಿಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಶ್ರೀ ಪುಷ್ಪಗಿರಿ ಮಹಾ ಸಂಸ್ಥಾನ, ಶ್ರೀ ಮಠ, ಪುಷ್ಪಗಿರಿ, ಬೇಲೂರು ತಾಲ್ಲೂಕು, ಹಾಸನ ಇಲ್ಲಿ ನಡೆಸಲಾಯಿತು. ಕಾರ್ಯಕ್ರಮದ ಸಭೆಯ ಅಧ್ಯಕ್ಷತೆಯನ್ನು ಶ್ರೀ ಪುಷ್ಪಗಿರಿ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎಸ್.ಪಿ. ಹಿರಣ್ಣಯ್ಯ ರವರು ವಹಿಸಿದ್ದರು ಹಾಗೂ ಸಭೆಯ ಉದ್ಘಾಟನೆಯನ್ನು ವೇದಿಕೆಮೇಲಿದ್ದ ಗಣ್ಯರು ಹಾಗೂ ಸಹಕಾರಿಗಳು ನೆರವೇರಿಸಿದರು. ಸಭೆಯ ಪ್ರಾರ್ಥನೆಯನ್ನು ಹಾಸನ ವರ್ತಕರ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀಮತಿ ಪುಷ್ಪವತಿ ರವರು ನೆರವೇ–ರಿಸಿದರು. ಸಭೆಯ ಪ್ರಾಸ್ತಾವಿಕ ನುಡಿಯನ್ನು ಮೈಸೂರು ಪ್ರಾಂತೀಯ ಅಧಿಕಾರಿಯವರಾದ ಶ್ರೀ ಗುರುಪ್ರಸಾದ್ ಬಂಗೇರ ರವರು ನುಡಿದರು. ಕಾರ್ಯಕ್ರಮದ ಸ್ವಾಗತ ಹಾಗೂ ನಿರೂಪಣೆಯನ್ನು ಹಿರಿಯ ಸಹಾಯಕರಾದ ಶ್ರೀ ಚಂದ್ರಶೇಖರ್ ಎನ್ ರವರು ನಡೆಸಿಕೊಟ್ಟರು. ವಂದನಾರ್ಪಣೆಯನ್ನು ಶ್ರೀ ವಿಘ್ನೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಹೆಚ್.ಸಿ. ರವಿಕುಮಾರ್ ರವರು ಮಾಡಿದರು.

**ಸಭೆಯ ವಿಷಯಗಳು :**

1. ಮುಖ್ಯಕಾರ್ಯನಿರ್ವಾಹಕರ ಶಾಸನಬದ್ದ ಕಾರ್ಯಗಳು ಮತ್ತು ಜವಾಬ್ದಾರಿಗಳು ಹಾಗೂ ಆರ್ಥಿಕ ಸಬಲತೆಯ ಮಾನದಂಡಗಳು ಮತ್ತು ಕಲಂ 34ರ ಮಾಹಿತಿಯ ಕುರಿತು ಶ್ರೀ ಗುರುಪ್ರಸಾದ್ ಬಂಗೇರ ಮೈಸೂರು ಪ್ರಾಂತೀಯ ಕಛೇರಿ, ಇವರು ನೀಡಿದರು. ಹಾಗೂ

2. ಸಾಮಾನ್ಯ ಸೇವಾ ಕೇಂದ್ರದ ಕುರಿತು ಶ್ರೀ ಜಮೀರ್ ರವರು ಮಾಹಿತಿ ಹಾಗೂ ಮಾರ್ಗದರ್ಶನ ನೀಡಿದರು.

ಸದರಿ ಸಭೆಯಲ್ಲಿ ಹಾಸನ ಜಿಲ್ಲೆಯ 35 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ 6 ಆಡಳಿತ ಮಂಡಳಿ ಸದಸ್ಯರು ಸೇರಿ ಒಟ್ಟು 41 ಭಾಗವಹಿಸಿದ್ದರು.

---




**ದಕ್ಷಿಣ ಕನ್ನಡ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮೈಸೂರು ಪ್ರಾಂತೀಯ ಕಚೇರಿ ವತಿಯಿಂದ ದಿ 26–12–2024ರಂದು ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ "ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆ" ಯನ್ನು ಶ್ರೀನಿವಾಸ ಹೋಟೆಲ್ ಇಲ್ಲಿ ಆಯೋಜಿಸಲಾಗಿತ್ತು.

ಸದರಿ ಸಭೆಯ ಅಧ್ಯಕ್ಷತೆಯನ್ನು ಶ್ರೀಮತಿ ಭಾರತಿ ಜಿ. ಭಟ್ ಮಾನ್ಯ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಇವರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ದ.ಕ ಜಿಲ್ಲಾ ಸೌಹಾರ್ದ ಒಕ್ಕೂಟ ಇದರ ಅಧ್ಯಕ್ಷರಾದ ಶ್ರೀ ಭಾಸ್ಕರ್ ದೇವಸ್ಯ ಇವರು ನೆರವೇರಿಸಿದರು. ಸಭೆಯ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಗಳನ್ನು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ನಡೆಸಿಕೊಟ್ಟರು. ನಿರೂಪಣೆ ಮತ್ತು ವಂದನಾರ್ಪಣೆಯನ್ನು ವಿಜಯ್ ಬಿ.ಎಸ್ ರವರು ಮಾಡಿದರು.

ವಿಷಯ 1."ಮುಖ್ಯ ಕಾರ್ಯನಿರ್ವಾಹಕರ ಶಾಸನಬದ್ಧ ಜವಾಬ್ದಾರಿ ಮತ್ತು ಕರ್ತವ್ಯಗಳು" ಬಗ್ಗೆ ಶ್ರೀ ಗುರುಪ್ರಸಾದ್ ಬಂಗೇರ ಇವರು ಉಪನ್ಯಾಸವನ್ನು ನೀಡಿದರು.

ವಿಷಯ 2. ಸಾಮಾನ್ಯ ಸೇವಾ ಕೇಂದ್ರದ ಕುರಿತು (ಸಿ.ಎಸ್.ಸಿ) ಶ್ರೀ ಗೋರ್ವದನ್ ಜಿಲ್ಲಾ ವ್ಯವಸ್ಥಾಪಕರು ದಕ್ಷಿಣ ಕನ್ನಡ ಜಿಲ್ಲೆ ಇವರು ಮಾಹಿತಿಯನ್ನು ನೀಡಿದರು.

ವಿಷಯ 3. ಆರ್ಥಿಕ ಸಬಲತೆಯ ಮನದಂಡಗಳ ಸುತ್ತೋಲೆ & ಲೆಕ್ಕಪರಿಶೋಧನ ವರದಿಯಲ್ಲಿ ಕಂಡು ಬಂದಿರುವ ನ್ಯೂನ್ಯತೆಗಳ ಕುರಿತು ಶ್ರೀ ವಿಜಯ್ ಬಿ.ಎಸ್ ಇವರು ಸಭೆಯಲ್ಲಿ ಚರ್ಚಿಸಲಾಯಿತು

ಸಭೆಗೆ ವಿಶೇಷ ಆಹ್ವಾನಿತರಾಗಿ ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ರಮೇಶ್ ರವರು ಭಾಗವಹಿಸಿ ಮುಖ್ಯಕಾರ್ಯನಿರ್ವಾಹಕರಿಗೆ ಮಾರ್ಗದರ್ಶನ ನೀಡಿದರು. ಮಧ್ಯಾಹ್ನದ ಅವಧಿಯಲ್ಲಿ ಮುಖ್ಯ ಕಾರ್ಯನಿರ್ವಾಹಕರ ಸಭೆ ಮತ್ತು ಸಂವಾದ ಜರುಗಿತು. ಸದರಿ ಸಭೆಯಲ್ಲಿ ಒಟ್ಟು 103 ಸೌಹಾರ್ದ ಸಹಕಾರಿಗಳಿಂದ 104 ಪ್ರತಿನಿಧಿಗಳು ಹಾಜರಿದ್ದರು.



**ಉಡುಪಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮೈಸೂರು ಪ್ರಾಂತೀಯ ಕಚೇರಿ ವತಿಯಿಂದ ದಿ : 27–12–2024ರಂದು ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ "ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆ" ಯನ್ನು ರಾಷ್ಟ್ರೀಯ ಸ್ವ–ಸಹಾಯ ತರಬೇತಿ ಸಂಸ್ಥೆ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಯ ಅಧ್ಯಕ್ಷತೆ ಶ್ರೀ ಮಂಜುನಾಥ್ ಎಸ್.ಕೆ ಮಾನ್ಯ ನಿರ್ದೇಶಕರು ಕ.ರಾ.ಸೌ.ಸಂ ಸ.ನಿ ಇವರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಸುಕನ್ಯಾ ರಾವ್ ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂದಕರು. ಕುಂದಾಪುರ ಇವರು ನೆರವೇರಿಸಿದರು. ಸದರಿ ಸಭೆಗೆ ಮುಖ್ಯ ಅಥಿತಿಗಳಾಗಿ ಉಡುಪಿ ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ಭಾಗವಹಿಸಿದ್ದರು. ಸಭೆಯ ಪ್ರಾಸ್ತಾವಿಕ ನುಡಿಗಳನ್ನು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ನಡೆಸಿಕೊಟ್ಟರು. ಸ್ವಾಗತ ಹಾಗೂ ನಿರೂಪಣೆ ಮತ್ತು ವಂದನಾರ್ಪಣೆಯನ್ನು ವಿಜಯ್ ಬಿ.ಎಸ್ ರವರು ಮಾಡಿದರು.

ವಿಷಯ 1."ಮುಖ್ಯ ಕಾರ್ಯನಿರ್ವಾಹಕರ ಶಾಸನಬದ್ಧ ಜವಾಬ್ದಾರಿ ಮತ್ತು ಕರ್ತವ್ಯಗಳು"ಬಗ್ಗೆ ಶ್ರೀ ಗುರುಪ್ರಸಾದ್ ಬಂಗೇರ ಇವರು ಉಪನ್ಯಾಸವನ್ನು ನೀಡಿದರು. ವಿಷಯ 2. ಸಾಮಾನ್ಯ ಸೇವಾ ಕೇಂದ್ರದ ಕುರಿತು (ಸಿ.ಎಸ್.ಸಿ) ಶ್ರೀ ಮಹೇಶ್ ಜಿಲ್ಲಾ ವ್ಯವಸ್ಥಾಪಕರು ಉಡುಪಿ ಜಿಲ್ಲೆ ಇವರು ಮಾಹಿತಿಯನ್ನು ನೀಡಿದರು. ವಿಷಯ 3. ಆರ್ಥಿಕ ಸಬಲತೆಯ ಮನದಂಡಗಳ ಸುತ್ತೋಲೆ & ಲೆಕ್ಕಪರಿಶೋಧನ ವರದಿಯಲ್ಲಿ ಕಂಡುಬಂದಿರುವ ನ್ಯೂನ್ಯತೆಗಳ ಕುರಿತು ಶ್ರೀ ವಿಜಯ್ ಬಿ.ಎಸ್ ಇವರು ಸಭೆಯಲ್ಲಿ ಚರ್ಚಿಸಲಾಯಿತು

ಮಧ್ಯಾಹ್ನದ ಅವಧಿಯಲ್ಲಿ ಮುಖ್ಯ ಕಾರ್ಯನಿರ್ವಾಹಕರ ಸಭೆ ಮತ್ತು ಸಂವಾದ ಜರುಗಿತು. ಸದರಿ ಸಭೆಯಲ್ಲಿ ಒಟ್ಟು 124 ಸೌಹಾರ್ದ ಸಹಕಾ–ರಿಗಳಿಂದ 127 ಪ್ರತಿನಿಧಿಗಳು ಹಾಜರಿದ್ದರು.



**ಬೆಂಗಳೂರು ನಗರ (2&3ನೇ ವಲಯ) ಹಾಗೂ ರಾಮನಗರ ಜಿಲ್ಲೆ :** ದಿನಾಂಕ 26.12.2024ರಂದು ಬೆಂಗಳೂರು ನಗರ (2&3ನೇ ವಲಯ) ಹಾಗೂ ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಉದಯ ಸೌಹಾರ್ದ ಸಹಕಾರಿ ಸಂಘ ನಿ, ಹನುಮಂತನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆ ಹಾಗೂ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡುರಾವ್ ರವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ತಿಮ್ಮಯ್ಯಶೆಟ್ಟರವರು, ಉದಯ ಸೌಹಾರ್ದ ಸಹಕಾರಿ ಸಂಘದ ಉಪಾಧ್ಯಕ್ಷರಾದ ಶ್ರೀ ಎನ್. ಚಂದ್ರಶೇಖರ್ ರವರು, ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ಎಸ್.ರವರು ಭಾಗವಹಿಸಿದ್ದರು. ಸಭೆಯ ಪ್ರಾಸ್ತಾವಿಕ ನುಡಿಯನ್ನು ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ಎಸ್.ರವರು ನೆರವೇರಿಸಿದರು. ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಭವನ್‌ರಾವ್‌ರವರು ನಡೆಸಿಕೊಟ್ಟರು. ಸಭೆಯಲ್ಲಿ 78 ಸೌಹಾರ್ದ ಸಹಕಾರಿಗಳಿಂದ 80 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೆಂಗಳೂರು ನಗರ(1&4ನೇ ವಲಯ) ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆ :** ದಿನಾಂಕ 27.12.2024ರಂದು ಬೆಂಗಳೂರು ನಗರ(1&4ನೇ ವಲಯ) ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಸಂಯುಕ್ತ ಸಹಕಾರಿಯ ತರಬೇತಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಸಭೆಯಲ್ಲಿ ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ಎಸ್.ರವರು, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಅನಿಲ್ ಕುಮಾರ್ ಎಮ್. ರವರು ಭಾಗವಹಿಸಿದ್ದರು. 80 ಸೌಹಾರ್ದ ಸಹಕಾರಿಗಳಿಂದ 85 ಪ್ರತಿನಿಧಿಗಳು ಭಾಗವಹಿಸಿದ್ದರು. ದೇಶದ ಮಾಜಿ ಪ್ರಧಾನಿಗಳಾದ ಶ್ರೀ ಡಾ. ಮನಮೋಹನ್ ಸಿಂಗ್ ರವರು ನಿಧನರಾದ ಹಿನ್ನೆಲೆಯಲ್ಲಿ ವೇದಿಕೆ ಕಾರ್ಯಕ್ರಮವನ್ನು ರದ್ದುಗೊಳಿಸಲಾಯಿತು.



**ಕೋಲಾರ :** ದಿನಾಂಕ 24.12.2024 ರಂದು ಕೋಲಾರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಜಿಲ್ಲಾ ಸಹಕಾರ ಸಂಘಗಳ ಒಕ್ಕೂಟ (ಯೂನಿಯನ್) ಕೋಲಾರ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ನೆರವೇರಿಸಿದರು. ಬೆಂಗಳೂರು

ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ಎಸ್.ರವರು ಸಾಮಾನ್ಯ ಸೇವಾ ಕೇಂದ್ರದ (ಸಿಎಸ್‌ಸಿ) ಜಿಲ್ಲಾ ವ್ಯವಸ್ಥಾಪಕರಾದ ಶ್ರೀ ಪ್ರಸನ್ನಕುಮಾರ್‌ರವರು ಉಪಸ್ಥಿತರಿದ್ದರು. ಸಭೆಯ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್.ರವರು ನಡೆಸಿಕೊಟ್ಟರು. 18 ಸೌಹಾರ್ದ ಸಹಕಾರಿಗಳಿಂದ ಮುಖ್ಯಕಾರ್ಯನಿರ್ವಾಹಕರು ಮತ್ತು ಆಡಳಿತ ಮಂಡಳಿಯವರು ಸೇರಿ 23 ಜನರು ಭಾಗವಹಿಸಿದ್ದರು.



**ತುಮಕೂರು :** ದಿನಾಂಕ 30.12.2024ರಂದು ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಸೆಕ್ರೆಡ್ ಹಾರ್ಟ್ ಕ್ರೆಡಿಟ್ ಕೋ–ಆಪರೇಟಿವ್ ಲಿ, ತುಮಕೂರು ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಸಹಕಾರ ಸಂಘಗಳ ಉಪ ನಿಬಂಧಕರಾದ ಶ್ರೀ ಹೆಚ್. ಮೂರ್ತಿ ರವರು, ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್. ಲಕ್ಷ್ಮೀನಾರಾಯಣ್ ರವರು, ಶಿವಾಜಿ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಸುರೇಶ್‌ರಾವ್ ರವರು, ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ಎಸ್.ರವರು ಭಾಗವಹಿಸಿದ್ದರು. ಸಭೆಯ ಪ್ರಾಸ್ತಾವಿಕ ನುಡಿಯನ್ನು ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ಎಸ್.ರವರು ನೆರವೇರಿಸಿದರು. ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್.ರವರು ನಡೆಸಿಕೊಟ್ಟರು. 112 ಸೌಹಾರ್ದ ಸಹಕಾರಿಗಳಿಂದ 126 ಪ್ರತಿನಿಧಿಗಳು ಭಾಗವಹಿಸಿದ್ದರು.



**ಉತ್ತರ ಕನ್ನಡ :** ದಿನಾಂಕ 26.12.2024 ರಂದು ಬೆಳಿಗ್ಗೆ 10.00 ಕ್ಕೆ ಉತ್ತರ ಕನ್ನಡ ಜಿಲ್ಲೆಯ ಶಿರಸಿ, ದಾಂಡೇಲಿ, ಹಳಿಯಾಳ, ಜೋಯಿಡಾ, ಮುಂಡಗೋಡ, ಸಿದ್ದಾಪೂರ ಹಾಗೂ ಯಲ್ಲಾಪೂರ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು, ಟಿ.ಆರ್.ಸಿ ಸಭಾ ಭವನ, ಶಿರಸಿ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮೋಹನದಾಸ ನಾಯಕ ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ರಘುನಂದನ.ಕೆ, ಉಪಸ್ಥಿತ–ರಿದ್ದರು. ಮುಖ್ಯಕಾರ್ಯನಿವಾಹಕರ ಶಾಸನಬದ್ದ ಜವಾಬ್ದಾರಿ ಮತ್ತು ಕರ್ತವ್ಯಗಳ ಕುರಿತು ಶ್ರೀ ರಘುನಂದನ.ಕೆ, ಇವರು ಉಪನ್ಯಾಸ ನೀಡಿದರು. ಸಾಮಾನ್ಯ ಸೇವಾ ಕೇಂದ್ರದ ಕುರಿತು ಶ್ರೀ ಅಕ್ಷಯ ಬಿ ನಾಯ್ಕ ಮಾಹಿತಿ ನೀಡಿದರು. ಆರ್ಥಿಕ ಸಬಲತೆಯ ಮಾನದಂಡಗಳ ಸುತ್ತೋಲೆ ಮತ್ತು ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದಿರುವ ನ್ಯೂನ್ಯತೆಗಳ ಕುರಿತು ಶ್ರೀ ಸಂತೋಷಕುಮಾರ ಎಮ್ ಜೆ ಇವರು ಮಾಹಿತಿ ನೀಡಿದರು.

ಕಾರ್ಯಕ್ರಮದ ಸ್ವಾಗತವನ್ನು ಸ್ಕೋಡ್ ವೆಸ್ ಮಹಿಳಾ ಸೌಹಾರ್ದ ಸಹಕಾರಿಯ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಗಣೇಶ ನಾಯ್ಕ ನೆರವೇರಿಸಿದರು. ನಿರೂಪಣೆ ಮತ್ತು ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಸಂತೋಷ ಎಮ್ ಜೆ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಒಟ್ಟು 47 ಸೌಹಾರ್ದ ಸಹಕಾರಿಗಳಿಂದ 53 ಪ್ರತಿನಿಧಿಗಳು ಹಾಜರಿದ್ದರು.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

1. ದಿನಾಂಕ 09.01.2025 ರಂದು ಮೈಸೂರು ವಿಶ್ವವಿದ್ಯಾಲಯದಲ್ಲಿ ಯುವಜನ ಹಾಗೂ ಸಹಕಾರ ಕುರಿತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.
2. ದಿನಾಂಕ 21.01.2025 ರಿಂದ 23.01.2025 ರವರೆಗೆ ಪಟ್ಟಣ ಸಹಕಾರಿ ಬ್ಯಾಂಕುಗಳ ಪದಾಧಿಕಾರಿಗಳಾಗಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.
3. ಜನವರಿ ಕೊನೆಯ ವಾರದಲ್ಲಿ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಯುವಜನ ಹಾಗೂ ಸಹಕಾರ ಕುರಿತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.



**ಧಾರವಾಡ** : ದಿನಾಂಕ 21.12.2024 ರಂದು ಬೆಳಿಗ್ಗೆ 10.30 ಕ್ಕೆ ಧಾರವಾಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕ–ರಿಗಾಗಿ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಮಂತ್ರ ರೆಸಿಡೆನ್ಸಿ, ಹುಬ್ಬಳ್ಳಿ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆ ಮತ್ತು ಅಧ್ಯಕ್ಷತೆಯನ್ನು ಶ್ರೀ ಮಲ್ಲಿಕಾರ್ಜುನ ಹೋರಕೇರಿ ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇವರು ವಹಿಸಿದ್ದರು. ಸೈಬರ ಕ್ರೈಂ ಕುರಿತು ಶ್ರೀ ಆನಂದ ಮಾಳಿ ಹಾಗೂ ಸಾಮಾನ್ಯ ಸೇವಾ ಕೇಂದ್ರದ ಕುರಿತು ಶ್ರೀ ಪ್ರವೀಣ ನವಲಗುಂದ ಮತ್ತು ಮುಖ್ಯಕಾರ್ಯನಿರ್ವಾಹಕರ ಜವಾಬ್ದಾರಿ ಮತ್ತು ಕರ್ತವ್ಯಗಳ ಕುರಿತು ಸಂಯುಕ್ತ ಸಹಕಾರಿಗೆ ಕಾಲಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿ ಬಗ್ಗೆ ಶ್ರೀ ಕೆ ರಘುನಂದನ ರವರು ಉಪನ್ಯಾಸವನ್ನು ನೀಡಿದರು.

ಕಾರ್ಯಕ್ರಮವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಕಲ್ಮೇಶ ಎಸ್ ಎಂ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಒಟ್ಟು 90 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಜರಿದ್ದರು.



**ಬೆಳಗಾವಿ**: ದಿನಾಂಕ 23.12.2024 ರಂದು ಬೆಳಿಗ್ಗೆ 10.30 ಕ್ಕೆ ಬೆಳಗಾವಿ ಜಿಲ್ಲೆಯ ಅಥಣಿ, ಚಿಕ್ಕೋಡಿ, ನಿಪ್ಪಾಣಿ, ಕಾಗವಾಡ, ರಾಯಭಾಗ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಭಾಭವನ, ಬಸವ ಸರ್ಕಲ್, ಚಿಕ್ಕೋಡಿ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆ ಮತ್ತು ಅಧ್ಯಕ್ಷತೆಯನ್ನು ಶ್ರೀ ಜಗದೀಶ ಕವಟಗಿಮಠ ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಹನುಮಾನ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಅಧ್ಯಕ್ಷರಾದ ಶ್ರೀ ಬಾಬುರಾವ ಯಾದವ, ಶ್ರೀ ಜಿನ್ನಪ್ಪನ್ನ ಚೌಗುಲೆ ಲಾಲಬಹದ್ದೂರ ಸೌಹಾರ್ದ ಸಹಕಾರಿ ಸಂಘ ಶಿರಗುಪ್ಪಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬೋಮ್ಮಣ್ಣ ಚೌಗುಲೆ, ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಅಮಿತ ಮಾಳಿ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಶ್ರೀ ಅಮಿತ ಮಾಳಿ ಮತ್ತು ಆನಂದ ಮಾಳಿ ಇವರು ಸೈಬರ ಕ್ರೈಂ ಕುರಿತು ಸಾಮಾನ್ಯ ಸೇವಾ ಕೇಂದ್ರದ ಕುರಿತು ಶ್ರೀ ಅಮರ ಪಾಟೀಲ ಉಪನ್ಯಾಸ ನಿಡಿದರು. ಶಾಸನಾತ್ಮಕ ಮಾಹಿತಿ ಸಲ್ಲಿಕೆ ಕುರಿತು ಹಾಗೂ ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದ ನ್ಯೂನ್ಯತೆಗಳ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಜವಾಹರ ಮುಗ್ಗನವರ ಕ್ರೇಡ್ ಪೋಲ್ ಸಾಫ್ಟವೇರ ಕುರಿತು ಶ್ರೀ ಗುರುದತ್ ಜೋಗಳೇಕರ ಮಾಹಿತಿ ನೀಡಿದರು.

ಸಭೆಯ ನಿರೂಪಣೆ ಮತ್ತು ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಜವಾಹರ ಮುಗ್ಗನವರ ನಡೆಸಿಕೊಟ್ಟರು. ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಶಿವಕಾಂತ ಎಸ್ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಒಟ್ಟು 186 ಸೌಹಾರ್ದ ಸಹಕಾರಿಗಳಿಂದ 209 ಪ್ರತಿನಿಧಿಗಳು ಹಾಜರಿದ್ದರು.

ದಿನಾಂಕ 23.12.2024 ರಂದು ಬೆಳಿಗ್ಗೆ 10.30 ಕ್ಕೆ ಬೆಳಗಾವಿ ಜಿಲ್ಲೆಯ ಗೋಕಾಕ ಮತ್ತು ಮೂಡಲಗಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ರೋಟರಿ ಕ್ಲಬ್, ಗೋಕಾಕ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆ ಮತ್ತು ಅಧ್ಯಕ್ಷತೆಯನ್ನು ಶ್ರೀ ಜಗದೀಶ ಕವಟಗಿಮಠ ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಅಮಿತ ಮಾಳಿ ಮತ್ತು ಶ್ರೀ ಆನಂದ ಮಾಳಿ ಇವರು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಶ್ರೀ ಅಮಿತ ಮಾಳಿ ಮತ್ತು ಆನಂದ ಮಾಳಿ ಇವರು ಸೈಬರ ಕ್ರೈಂ ಕುರಿತು ಸಾಮಾನ್ಯ ಸೇವಾ ಕೇಂದ್ರದ ಕುರಿತು ಶ್ರೀ ಅನಿಲಕುಮಾರ ಉಪನ್ಯಾಸ ನಿಡಿದರು. ಶಾಸನಾತ್ಮಕ ಮಾಹಿತಿ ಸಲ್ಲಿಕೆ ಕುರಿತು ಹಾಗೂ ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದ ನ್ಯೂನ್ಯತೆಗಳ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ರಾಚಯ್ಯ ಹಿರೇಮಠ, ಕ್ರೇಡ್ ಪೋಲ್ ಸಾಫ್ಟವೇರ ಕುರಿತು ಶ್ರೀ ಗುರುದತ್ ಜೋಗಳೇಕರ ಮಾಹಿತಿ ನೀಡಿದರು.

ಸಭೆಯ ನಿರೂಪಣೆ ಮತ್ತು ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ರಾಚಯ್ಯ ಹಿರೇಮಠ ನಡೆಸಿಕೊಟ್ಟರು. ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸು–ಜಯ ಬೆಳವಿ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಒಟ್ಟು 133 ಸೌಹಾರ್ದ ಸಹಕಾರಿಗಳಿಂದ 154 ಪ್ರತಿನಿಧಿಗಳು ಹಾಜರಿದ್ದರು.



**ಬಾಗಲಕೋಟೆ:** ದಿನಾಂಕ 23.12.2024 ರಂದು ಬೆಳಿಗ್ಗೆ 10.30 ಕ್ಕೆ ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ, ಬೀಳಗಿ, ಬಾದಾಮಿ, ಗುಳೇದಗುಡ್ಡ, ಹುನಗುಂದ ಮತ್ತು ಇಲಕಲ್ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಹೋಟೆಲ್ ಅನುಗ್ರಹ, ಬಾಗಲಕೋಟೆ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಶ್ರೀ ಎಮ್.ಪಿ.ಶೆಲ್ಲೇಕೇರಿ, ಸಹಕಾರ ಸಂಘಗಳ ಉಪನಿಬಂಧಕರು(ನಿ)ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಜಿ. ಎನ್. ಪಾಟೀಲ ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಎಮ್.ಎಸ್. ಪಾಟೀಲ ಹಾಗೂ ಶ್ರೀ ಆರ್.ಬಿ. ಕುರ್ತಕೋಟಿ ಇವರು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಶ್ರೀ ವೆಂಕಟೇಶ ರಾಠೋಡ ಇವರು ಸೈಬರ ಕ್ರೈಂ ಕುರಿತು, ಸಾಮಾನ್ಯ ಸೇವಾ ಕೇಂದ್ರದ ಕುರಿತು ಶ್ರೀ ಶ್ರೀರಾಮ ಉಪನ್ಯಾಸ ನಿಡಿದರು. ಆರ್ಥಿಕ ಸಬಲತೆಯ ಮಾನದಂಡಗಳ ಸುತ್ತೋಲೆ, ಶಾಸನಾತ್ಮಕ ಮಾಹಿತಿ ಸಲ್ಲಿಕೆ ಕುರಿತು ಹಾಗೂ ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದ ನ್ಯೂನ್ಯತೆಗಳ ಕುರಿತು ಶ್ರೀಮತಿ ರೇಷ್ಮಾ ಪಾಟೀಲ, ಸಹಾಯಕರು , ಇವರು ಮಾಹಿತಿ ನೀಡಿದರು.

ಸಭೆಯ ನಿರೂಪಣೆ ಮತ್ತು ವಂದನಾರ್ಪಣೆ ಶ್ರೀಮತಿ ರೇಷ್ಮಾ ಪಾಟೀಲ, ಸಹಾಯಕರು ನೆರವೇರಿಸಿದರು. ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಗಳನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವೆಂಕಟೇಶ ರಾಠೋಡ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಒಟ್ಟು 78 ಸೌಹಾರ್ದ ಸಹಕಾರಿಗಳಿಂದ 105 ಪ್ರತಿನಿಧಿಗಳು ಹಾಜರಿದ್ದರು.



**ಉತ್ತರ ಕನ್ನಡ :** ದಿನಾಂಕ 23.12.2024 ರಂದು ಬೆಳಿಗ್ಗೆ 10.30 ಕ್ಕೆ ಉತ್ತರ ಕನ್ನಡ ಜಿಲ್ಲೆಯ ಕುಮುಟಾ, ಹೊನ್ನಾವರ, ಕಾರವಾರ, ಭಟ್ಕಳ ಹಾಗೂ ಅಂಕೋಲಾ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು, ಮಹಾಲಕ್ಷ್ಮೀ ಕಂಫರ್ಟ, ಕುಮಟಾ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಶ್ರೀ ಕೆ ರಘುನಂದನ ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಯುನಿಯನ್ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಗೋಪಾಲ ನಾಯ್ಕ ಉಪಸ್ಥಿತರಿದ್ದರು. ಮುಖ್ಯಕಾರ್ಯನಿವಾಹಕರ ಶಾಸನಬದ್ದ ಜವಾಬ್ದಾರಿ ಮತ್ತು ಕರ್ತವ್ಯಗಳ ಕುರಿತು ಶ್ರೀ ರಘುನಂದನ.ಕೆ, ಇವರು ಉಪನ್ಯಾಸ ನೀಡಿದರು. ಸಾಮಾನ್ಯ ಸೇವಾ ಕೇಂದ್ರದ ಕುರಿತು ಶ್ರೀ ಅಕ್ಷಯ ಬಿ ನಾಯ್ಕ ಮಾಹಿತಿ ನೀಡಿದರು. ಆರ್ಥಿಕ ಸಬಲತೆಯ ಮಾನದಂಡಗಳ ಸುತ್ತೋಲೆ ಮತ್ತು ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದಿರುವ ನ್ಯೂನ್ಯತೆಗಳ ಕುರಿತು ಶ್ರೀ ಸಂತೋಷಕುಮಾರ ಎಮ್ ಜೆ ಇವರು ಮಾಹಿತಿ ನೀಡಿದರು.

ಕಾರ್ಯಕ್ರಮದ ಸ್ವಾಗತವನ್ನು ಸೇಫ್ ಸ್ಟಾರ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಮಹೇಶ ಶೆಟ್ಟಿ ನೆರವೇರಿಸಿದರು. ನಿರೂಪಣೆ ಮತ್ತು ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಸಂತೋಷ ಎಮ್ ಜೆ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಒಟ್ಟು 116 ಸೌಹಾರ್ದ ಸಹಕಾರಿಗಳಿಂದ 135 ಪ್ರತಿನಿಧಿಗಳು ಹಾಜರಿದ್ದರು.



**ಬೆಳಗಾವಿ:** ದಿನಾಂಕ 24.12.2024 ರಂದು ಬೆಳಿಗ್ಗೆ 10.30 ಕ್ಕೆ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಕನ್ನಡ ಸಾಹಿತ್ಯ ಭವನ, ಚನ್ನಮ್ಮ ಸರ್ಕಲ್ ಹತ್ತಿರ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆ ಮತ್ತು ಅಧ್ಯಕ್ಷತೆಯನ್ನು ಶ್ರೀ ಜಗದೀಶ ಕವಟಗಿಮಠ ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಅಮಿತ ಮಾಳಿ ಮತ್ತು ಶ್ರೀ ಆನಂದ ಮಾಳಿ ಇವರು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಶ್ರೀ ಅಮಿತ ಮಾಳಿ ಮತ್ತು ಆನಂದ ಮಾಳಿ ಇವರು ಸೈಬರ ಕ್ರೈಂ ಕುರಿತು ಸಾಮಾನ್ಯ ಸೇವಾ ಕೇಂದ್ರದ ಕುರಿತು ಶ್ರೀ ಮಲ್ಲಿಕಾರ್ಜುನ ಉಪನ್ಯಾಸ ನಿಡಿದರು. ಶಾಸನಾತ್ಮಕ ಮಾಹಿತಿ ಸಲ್ಲಿಕೆ ಕುರಿತು ಹಾಗೂ

ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದ ನ್ಯೂನ್ಯತೆಗಳ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಶಿವಕಾಂತ ಎನ್, ಕ್ರೇಡ್ ಪೋಲ್ ಸಾಪ್ಟವೇರ ಕುರಿತು ಶ್ರೀ ಗುರುದತ್ ಜೋಗಳೇಕರ ಮಾಹಿತಿ ನೀಡಿದರು.

ಪ್ರಾಸ್ತಾವಿಕ ನುಡಿಗಳನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ನುಡಿದರು. ಸಭೆಯ ನಿರೂಪಣೆಯನ್ನು ಶ್ರೀಮತಿ ಅಶ್ವಿನಿ ಕಮ್ಮಾರ ನೇರವೇರಿಸಿದರು. ಸ್ವಾಗತ ಮತ್ತು ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಶಿವಕಾಂತ ಎನ್ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಒಟ್ಟು 157 ಸೌಹಾರ್ದ ಸಹಕಾರಿಗಳಿಂದ 169 ಪ್ರತಿನಿಧಿಗಳು ಹಾಜರಿದ್ದರು.



**ಬೆಳಗಾವಿ:** ದಿನಾಂಕ 24.12.2024 ರಂದು ಬೆಳಿಗ್ಗೆ 10.30 ಕ್ಕೆ ಬೆಳಗಾವಿ ಜಿಲ್ಲೆಯ ಬೆಳಗಾವಿ, ಬೈಲಹೊಂಗಲ, ಖಾನಾಪೂರ, ಚನ್ನಮ್ಮನ ಕಿತ್ತೂರ, ಸವದತ್ತಿ, ಯರಗಟ್ಟಿ, ರಾಮದುರ್ಗ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಮಹಾಂತ ಭವನ, ಮಹಾಂತೇಶ ನಗರ, ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆ ಮತ್ತು ಅಧ್ಯಕ್ಷತೆಯನ್ನು ಶ್ರೀ ಜಗದೀಶ ಕವಟಗಿಮಠ ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಮಲ್ಲಿಕಾರ್ಜುನ ಇವರು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಶ್ರೀ ಅಮಿತ ಮಾಳಿ ಮತ್ತು ಆನಂದ ಮಾಳಿ ಇವರು ಸೈಬರ ಕ್ರೈಂ ಕುರಿತು ಸಾಮಾನ್ಯ ಸೇವಾ ಕೇಂದ್ರದ ಕುರಿತು ಶ್ರೀ ಮಲ್ಲಿಕಾರ್ಜುನ ಉಪನ್ಯಾಸ ನಿಡಿದರು. ಶಾಸನಾತ್ಮಕ ಮಾಹಿತಿ ಸಲ್ಲಿಕೆ ಕುರಿತು ಹಾಗೂ ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದ ನ್ಯೂನ್ಯತೆಗಳ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುಜಯ ಬೆಳವಿ , ಕ್ರೇಡ್ ಪೋಲ್ ಸಾಪ್ಟವೇರ ಕುರಿತು ಶ್ರೀ ಗುರುದತ್ ಜೋಗಳೇಕರ ಮಾಹಿತಿ ನೀಡಿದರು.

ಪ್ರಾಸ್ತಾವಿಕ ನುಡಿಗಳನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ನುಡಿದರು. ಸಭೆಯ ನಿರೂಪಣೆ ಮತ್ತು ಸ್ವಾಗತವನ್ನು ಶ್ರೀ ಸುಜಯ ಬೆಳವಿ ನೇರವೇರಿಸಿದರು. ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ರಾಚಯ್ಯ ಹಿರೇಮಠ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಒಟ್ಟು 145 ಸೌಹಾರ್ದ ಸಹಕಾ–ರಿಗಳಿಂದ 196 ಪ್ರತಿನಿಧಿಗಳು ಹಾಜರಿದ್ದರು.



**ಬಾಗಲಕೋಟೆ:** ದಿನಾಂಕ 24.12.2024 ರಂದು ಬೆಳಿಗ್ಗೆ 10.30 ಕ್ಕೆ ಬಾಗಲಕೋಟೆ ಜಿಲ್ಲೆಯ ಮುಧೋಳ, ಜಮಖಂಡಿ, ರಬಕವಿ–ಬನಹಟ್ಟಿ ಮತ್ತು ತೇರದಾಳ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಹೋಟೆಲ್ ಪಾರ್ಕ, ಮುಧೋಳ ಬಾಗಲಕೋಟೆ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಶ್ರೀ ಲಕ್ಷ್ಮಣ ಬಳಗಾನೂರ, ನಿರ್ದೇಶಕರು ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಜಿ. ಎನ್. ಪಾಟೀಲ ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಹಾದೇವ ಮಂಟೂರ ಹಾಗೂ ಮಹೇಶ ಮಠಪತಿ ಇವರು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಶ್ರೀ ವೆಂಕಟೇಶ ರಾಠೋಡ ಇವರು ಸೈಬರ ಕ್ರೈಂ ಕುರಿತು ಮತ್ತು ಸಾಮಾನ್ಯ ಸೇವಾ ಕೇಂದ್ರದ ಕುರಿತು ಶ್ರೀ ಚೇತನ ಪಟ್ಟಣಶೆಟ್ಟಿ ಇವರು ಉಪನ್ಯಾಸ ನಿಡಿದರು. ಆರ್ಥಿಕ ಸಬಲತೆಯ ಮಾನದಂಡಗಳ ಸುತ್ತೋಲೆ, ಶಾಸನಾತ್ಮಕ ಮಾಹಿತಿ ಸಲ್ಲಿಕೆ ಹಾಗೂ ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದ ನ್ಯೂನ್ಯತೆಗಳ ಕುರಿತು ಶ್ರೀಮತಿ ರೇಷ್ಮಾ ಪಾಟೀಲ, ಸಹಾಯಕರು, ಮಾಹಿತಿ ನೀಡಿದರು.

ಸಭೆಯ ನಿರೂಪಣೆ ಮತ್ತು ವಂದನಾರ್ಪಣೆ ಶ್ರೀಮತಿ ರೇಷ್ಮಾ ಪಾಟೀಲ, ಸಹಾಯಕರು ನೇರವೇರಿಸಿದರು. ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಗಳನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವೆಂಕಟೇಶ ರಾಠೋಡ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಒಟ್ಟು 173 ಸೌಹಾರ್ದ ಸಹಕಾರಿಗಳಿಂದ 230 ಪ್ರತಿನಿಧಿಗಳು ಹಾಜರಿದ್ದರು.



**ಬಳ್ಳಾರಿ :** ದಿನಾಂಕ 30.12.2024 ರಂದು ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಾಗಕರುಗಳಿಗೆ ಮುಖ್ಯಕಾರ್ಯ ನಿರ್ವಾಹಕರ ಸಭೆಯನ್ನು ಹೊಟೇಲ್ ನಕ್ಷತ್ರಾದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಕೇಸರಿ ಮಠ ನೆರವೆಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹನುಮಂತಯ್ಯಶೆಟ್ಟಿಯವರು ವಹಿಸಿದ್ದರು. ಮುಖ್ಯಅತಿಥಿಗಳಾಗಿ ಶ್ರೀ ಪ್ರಭುಗೌಡ ಮತ್ತು ಮಲ್ಲಿಕಾರ್ಜುನವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರ ಸಂಘಗಳ ಉಪನಿಬಂದಕರಾದ ಶ್ರೀ ಕೇಸರಿ ಮಠ ನೆರೆವೇರಿಸಿದರು. ಅತಿಥಿಗಳಾಗಿ ಶ್ರೀ ಪ್ರಭುಗೌಡ ಮತ್ತು ಮಲ್ಲಿಕಾರ್ಜುನ ರವರು ಈ ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹನುಮಂತಯ್ಯ ಶೆಟ್ಟಿ ಯವರು ವಹಿಸಿದ್ದರು. ಭಾಗವಹಿಸಿದ ಎಲ್ಲಾ ಗಣ್ಯರು ಮುಖ್ಯಕಾರ್ಯನಿರ್ವಾಹಕರನ್ನು ಉದ್ದೇಶಿಸಿ ಮಾತನಾಡಿದರು.

ಸಭೆಯ ಪ್ರಾಸ್ತಾವಿಕ ನುಡಿಯನ್ನು ಕಲುಬುರಗಿ ಪ್ರಾಂತೀಯ ಅಧಿಕಾ-ರಿಯಾದ ಶ್ರೀ ಸೂರ್ಯಕಾಂತ ರಾಕಲೆ ರವರು ನುಡಿದರು. ಕಾರ್ಯಕ್ರಮದ ಸ್ವಾಗತ, ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ರವಿಕುಮಾರ್ ಕೆ.ಆರ್ ರವರು ನಡೆಸಿಕೊಟ್ಟರು.

ಮುಖ್ಯಕಾರ್ಯನಿರ್ವಾಹಕರ ಶಾಸನಬದ್ದ ಕಾರ್ಯಗಳು ಮತ್ತು ಜವಾಬ್ದಾರಿಗಳ ಕುರಿತು ಶ್ರೀ ಸೂರ್ಯಕಾಂತ ರಾಕಲೆ, ಪ್ರಾಂತೀಯ ಅಧಿಕಾರಿ, ಕಲುಬುರಗಿ ಪ್ರಾಂತ ಇವರು ಮಾಹಿತಿಯನ್ನು ನೀಡಿದರು. ಈ ಸಭೆಯಲ್ಲಿ ಬಳ್ಳಾರಿ ಜಿಲ್ಲೆಯ 76 ಸೌಹಾರ್ದ ಸಹಕಾರಿಗಳಿಂದ 91 ಪ್ರತಿನಿಧಿಗಳು ಭಾಗವಹಿಸಿ ಸಭೆಯ ಪ್ರಯೋಜನವನ್ನು ಪಡೆದರು.

ಸಭೆಯ ನಂತರ ಸಂಯುಕ್ತ ಸಹಕಾರಿಯ 2025ನೇ ಸಾಲಿನ ಕ್ಯಾಲೆಂಡರ್ ಹಾಗೂ ಡೈರಿಯನ್ನು ವಿತರಿಸಲಾಯಿತು.

---




**ರಾಯಚೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ದಿನಾಂಕ 02.01.2025 ರಂದು ಟೌನ್ ಹಾಲ್ ಸಿಂಧನೂರುನಲ್ಲಿ ರಾಯಚೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಾಗೂ ಉದ್ಘಾಟನೆಯನ್ನು ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಂ. ದೊಡ್ಡಬಸವರಾಜರವರು ನೆರವೇರಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ರಾಜಶೇಖರ ಬಿ ರವರು, ಆರ್.ಕೆ.ಡಿ.ಸಿ.ಸಿ ಬ್ಯಾಂಕ್ ರಾಯಚೂರು ಇದರ ಮಾನ್ಯ ನಿರ್ದೇಶಕರಾದ ಶ್ರೀ ಸೋಮನಗೌಡ ಬಾದರ್ಲಿರವರು ಭಾಗವಹಿಸಿದ್ದರು. ಪ್ರಾರ್ಥನೆ ಗೀತೆಯನ್ನು ಆಕ್ಸಫರ್ಡ ಕಾಲೇಜಿನ ವಿದ್ಯಾರ್ಥಿನಿಯಾದ ಕು. ಅಂಜನಾದೇವಿರವರು ನೆರವೇರಸಿದರು. ಕಾರ್ಯಕ್ರಮದ ನಿರೂಪಣೆಯನ್ನು ರಾಯಚೂರು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ನಟರಾಜರವರು ನಡೆಸಿಕೊಟ್ಟರು. ಸಭೆಯ ಸ್ವಾಗತ ಮತ್ತು ಪ್ರಾಸ್ಥವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನುಡಿದರು. ವಂದನಾರ್ಪಣೆಯನ್ನು ರಾಯಚೂರು ಜಿಲ್ಲಾ ಸೌಹಾರ್ದ ಒಕ್ಕೂಟದ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಹುಸೇನ್ ಭಾಷಾರವರು ಮಾಡಿದರು.

ಸಿ.ಎಸ್.ಸಿ ಕೇಂದ್ರದ ಕುರಿತು ರಾಯಚೂರು ಜಿಲ್ಲಾ ವ್ಯವಸ್ಥಾಪಕರಾದ ಶ್ರೀ ಮಹಮ್ಮದ ನಜಿಮುದ್ದಿನ್‌ರವರು ಮಾಹಿತಿ ನೀಡಿದರು. ಮುಖ್ಯಕಾರ್ಯನಿರ್ವಾಹಕರ ಶಾಸನಬದ್ದ ಕಾರ್ಯಗಳು ಮತ್ತು ಜವಾಬ್ದಾರಿಗಳ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಮಾಹಿತಿ ನೀಡಿದರು. ಸೌಹಾರ್ದ ಸಹಕಾರಿ ದಿನಾಚರಣೆಯ ರಜತ ಮಹೊತ್ಸವದ ಅಂಗವಾಗಿ ರಸಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಮುಖ್ಯಕಾರ್ಯನಿರ್ವಾಹಕರು 4 ಜನ ಸೇರಿಕೊಂಡು ಒಂದು ತಂಡ ರಚಿಸಿಕೊಂಡು ಇದೇ ರೀತಿ ಒಟ್ಟು 13 ತಂಡಗಳು ರಚಿಸಿಕೊಂಡು ಈ ರಸ ಪ್ರಶ್ನೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ರಸ ಪ್ರಶ್ನೆಯಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ, ಬ್ಯಾಂಕಿಂಗ್ ಕ್ಷೇತ್ರ, ಸಾಮಾನ್ಯ ಜ್ಞಾನ, ಭಾರತದ ಸಂವಿಧಾನ, ಭಾರತದ ಅರ್ಥಶಾಸ್ತ್ರ ವಿಷಯಗಳ ಮೇಲೆ ಪ್ರಶ್ನೆಗಳನ್ನು ಕೇಳಲಾಗಿತ್ತು.

**ಪ್ರಥಮ ಸ್ಥಾನ ಪುಲಕೇಶಿ ತಂಡ ಸಿಂಧನೂರು.**

**ದ್ವಿತೀಯ ಸ್ಥಾನ ಶ್ರೀ ಬಸವೇಶ್ವರ ಸೌಹಾರ್ದ ತಂಡ ಸಿಂಧನೂರು.**

**ತೃತೀಯ ಸ್ಥಾನ ಆರ್.ಸಿ.ಬಿ ತಂಡ ಸಿರವಾರ**

ಚತುರ್ಥ ಸ್ಥಾನ ಸಿದ್ದೇಶ್ವರ ತಂಡ ಲಿಂಗಸೂಗುರು ರವರು ಪಡೆದುಕೊಂಡರು. ರಸ ಪ್ರಶ್ನೆ ಕಾರ್ಯಕ್ರಮದವನ್ನು ರಾಯಚೂರು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಟರಾಜರವರು ನಡೆಸಿಕೊಟ್ಟರು. ಈ ಸಭೆಯಲ್ಲಿ 280 ಸಹಕಾರಿಗಳಿಂದ 300 ಪ್ರತಿನಿಧಿಗಳು ಭಾಗವಹಿಸಿದ್ದರು. ನಂತರ ಸಂಯುಕ್ತ ಸಹಕಾರಿಯ ಡೈರಿ ಮತ್ತು ಕ್ಯಾಲೆಂಡರ್ ವಿತರಿಸಲಾಯಿತು.



**ವಿಜಯನಗರ :** ದಿನಾಂಕ 07.01.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರಗಿ ಪ್ರಾಂತೀಯ ಕಛೇರಿ ವತಿಯಿಂದ ವಿಜಯನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ರೋಟರಿ ಕ್ಲಬ್ ಹೊಸಪೇಟೆಯಲ್ಲಿ ಆಯೋಜಿಸಲಾಗಿತ್ತು.

ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಂಜನಗೌಡರವರು ಉದ್ಘಾಟಿಸಿ, ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕಿನ ಮಾನ್ಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ಅಧ್ಯಕ್ಷರಾದ ಶ್ರೀ ವಿಶ್ವನಾಥ ಚ ಹಿರೇಮಠರವರು, ಬಳ್ಳಾರಿ ಡಿಸಿಸಿ ಬ್ಯಾಂಕಿನ ನಿರ್ದೇಶಕರಾದ ಶ್ರೀ ಎಲ್.ಎಸ್ ಆನಂದರವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ನಂತರ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಂಜನಗೌಡರವರು ಸಭೆಯನ್ನು ಉದ್ದೇಶಿಸಿ ಮಾತಾನಾಡಿದರು. ಸಭೆಯ ಪ್ರಾಸ್ತವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ನುಡಿದರು. ಕಾರ್ಯಕ್ರಮದ ಸ್ವಾಗತ, ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕೂಮಾರವರು ನಡೆಸಿಕೊಟ್ಟರು. ಮೊದಲನೆಯ ಅವಧಿಯಲ್ಲಿ ಸಾಮಾನ್ಯ ಸೇವಾ ಕೇಂದ್ರದ ಕುರಿತು ಬಳ್ಳಾರಿ ಜಿಲ್ಲಾ ವ್ಯವಸ್ಥಾಪಕರಾದ ಶ್ರೀ ವೇಂಕಟೇಶರವರು ಮಾಹಿತಿ ನೀಡಿದರು.

ಎರಡನೇಯ ಅವಧಿಯಲ್ಲಿ ಮುಖ್ಯಕಾರ್ಯನಿರ್ವಾಹಕರ ಶಾಸನಬದ್ಧ ಕಾರ್ಯಗಳು ಮತ್ತು ಜವಾಬ್ದಾರಿಗಳ ಕುರಿತು, ಕಲಂ 34ರ ಮಾಹಿತಿ ಸಲ್ಲಿಸುವಿಕೆ, ಇತರೇ ಶಾಸನಾತ್ಮಕ ಮಾಹಿತಿ ಸಲ್ಲಿಸುವಿಕೆಯ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಮಾಹಿತಿ ನೀಡಿದರು. ಸಭೆಯಲ್ಲಿ ವಿಜಯನಗರ ಜಿಲ್ಲೆಯ 93 ಸಹಕಾರಿಗಳಿಂದ 117 ಪ್ರತಿನಿಧಿಗಳು ಭಾಗವಹಿಸಿದ್ದರು. ನಂತರ ಸಂಯುಕ್ತ ಸಹಕಾರಿಯ 2025 ನೇ ಸಾಲಿನ ಕ್ಯಾಲೆಂಡರ್ ಮತ್ತು ಡೈರಿಯನ್ನು ಬಿಡುಗಡೆಗೊಳಿಸಲಾಯಿತು.




**ಬೆಂಗಳೂರು :** ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ಸಂಘ, ಯಲಹಂಕ ಉಪನಗರ, ಬೆಂಗಳೂರು ಕೇಂದ್ರ ಕಛೇರಿ ಬೈರತಿ ಶಾಖೆ ಮತ್ತು ವರ್ತೂರು ಶಾಖೆಯಲ್ಲಿ ದಿನಾಂಕ 01.01.2025ರಂದು ಅದ್ದೂರಿಯಾಗಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಎಂ.ಮುನಿರೆಡ್ಡಿ ರವರು ಹಾಗೂ ಉಪಾಧ್ಯಕ್ಷರಾದ ಶ್ರೀಯುತ.ಎಸ್.ಎನ್ ಸಂಪತ್‌ಕುಮಾರ್ ರವರು ಹಾಗೂ ಸಹಕಾರಿಯ ನಿರ್ದೇಶಕರುಗಳು ಧ್ವಜಾರೋಹಣ ನೆರವೇರಿಸಿದರು. ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

## ಡಿ.ಸಿ.ಬಿ.ಎಂ ಪರೀಕ್ಷೆ ವೇಳಾಪಟ್ಟಿ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವ ವಿದ್ಯಾಲಯ, ಗದಗ
Karnataka State Rural Development and Panchayat Raj University, Gadag
ರೈತ ಭವನ, ಜನರಲ್ ಕಾರಿಯಪ್ಪ ವೃತ್ತ, ಗದಗ –582101
Raitha Bhavan, General Cariappa Circle, Gadag - 582101
E-mail: : registrarksrdpruexam@gmail.com
Phone: 08372-230338, Fax:08372-297343

RDPRU 49 EXM 2024 Date: 27/12/2024

### ಸೂಚನೆ

**ವಿಷಯ1:** "ಡಿಪ್ಲೋಮಾ ಇನ್ ಕೋ–ಆಫರೇಷನ್ ಆ್ಯಂಡ್ ಬ್ಯಾಂಕೀಂಗ್ ಮ್ಯಾನೇಜಮೆಂಟ್" ಕಾರ್ಯಕ್ರಮದ ಎರಡನೇ ಸೆಮಿಸ್ಟರನ ಪರೀಕ್ಷೆಗಳು ಜನೇವರಿ 2024-25.

**ವಿಷಯ2:** 2023-24ರಲ್ಲಿ ಎರಡನೇ ಸೆಮೆಸ್ಟರ್ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳಿಗೆ ಮರು ಪರೀಕ್ಷೆ ಜನೇವರಿ 2024-25.

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವವಿದ್ಯಾಲಯ ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಬೆಂಗಳೂರು ಜಂಟಿಯಾಗಿ ನಡೆಸುತ್ತಿರುವ "ಡಿಪ್ಲೋಮಾ ಇನ್ ಕೋ–ಆಫರೇಷನ್ ಆಂಡ್ ಬ್ಯಾಂಕೀಂಗ್ ಮ್ಯಾನೇಜಮೆಂಟ್" ಕಾರ್ಯಕ್ರಮದ ಎರಡನೇ ಸೆಮಿಸ್ಟರನ ಪರೀಕ್ಷೆಗಳು ಮತ್ತು 2023-24ರಲ್ಲಿ ಎರಡನೇ ಸೆಮೆಸ್ಟರ್ ಅನುತ್ತೀರ್ಣರಾದ ಅಭ್ಯರ್ಥಿಗಳಿಗೆ ಮರು ಪರೀಕ್ಷೆ ದಿನಾಂಕ: 25.01.2025 ಮತ್ತು 26.01.2025 (ನಾಲ್ಕನೇ ಶನಿವಾರ ಮತ್ತು ಭಾನುವಾರ) ರಂದು ಈ ಕೆಳಗೆ ಸೂಚಿಸಿದ ಸ್ಥಳಗಳಲ್ಲಿ ಜರುಗಿಸಲಾಗುವುದು ಎಂದು ಈ ಮೂಲಕ ಸೂಚಿಸಲಾಗಿದೆ. ಸದರಿ ಪರೀಕ್ಷೆಯ ವೇಳಾಪಟ್ಟಿ ಮತ್ತು ಪರೀಕ್ಷಾ ಕೇಂದ್ರಗಳು ಈ ಕೆಳಗಿನಂತಿವೆ.

**ಪರೀಕ್ಷೆ ವೇಳಾಪಟ್ಟಿ (Regular)**

| Date | Time | Paper Code | Paper Title |
|---|---|---|---|
| 25.01.2025 | 10:30 –12:30 | DCBM 2.1 | Basics of Banking Operations |
| | 02:00 – 04:00 | DCBM 2.2 | Accounting and Audit |
| 26.01.2025 | 10:30 –12:30 | DCBM 2.3 | Basics of Information Technology |

- DCBM 2.4: Case Study Analysis Reportನ್ನು ಅಭ್ಯರ್ಥಿಗಳು ಸಿದ್ಧಪಡಿಸಿ, ದಿನಾಂಕ 15.01.2025ರ ಒಳಗಾಗಿ ಇ–ಮೇಲ್ dcbmksrdpru@gmail.com ಸ್ಕ್ಯಾನ ಮಾಡಿದ ಪ್ರತಿಗಳನ್ನು ಕಳುಹಿಸಲು ಸೂಚಿಸಲಾಗಿದೆ.

**ಪರೀಕ್ಷೆ ವೇಳಾಪಟ್ಟಿ (Repeater)**

| Date | Time | Paper Code | Paper Title |
|---|---|---|---|
| 25.01.2025 | 10:30 –12:30 | DCBM 2.1 | Basics of Banking Operations |
| | 02:00 – 04:00 | DCBM 2.2 | Accounting and Audit |
| 26.01.2025 | 10:30 –12:30 | DCBM 2.3 | Information Technology |
| | 02:00 – 04:00 | DCBM 2.4 | Basics of Project Work Preparation |

**ಪರೀಕ್ಷಾ ಕೇಂದ್ರಗಳು**

| ಪರೀಕ್ಷಾ ಕೇಂದ್ರಗಳು | ಪರೀಕ್ಷಾ ಕೇಂದ್ರಗಳ ಕೋಡ |
|---|---|
| 1. ಬೆಂಗಳೂರು | 001 |
| 2. ಬಳ್ಳಾರಿ | 002 |
| 3. ಚಿಕ್ಕೋಡಿ | 003 |
| 4. ವಿಜಯಪುರ | 004 |
| 5. ಹುಬ್ಬಳ್ಳಿ | 005 |

ಪರೀಕ್ಷಾ ಮಾದರಿಯ ಈ ಕೆಳಗಿನಂತಿರುತ್ತದೆ (ಎರಡು ಬ್ಯಾಚನ್ ಅಭ್ಯರ್ಥಿಗಳಿಗೆ)

| | |
|---|---|
| ವಿಭಾಗ –A ಒಂದು ಅಂಕದ 10 ಬಹು ಆಯ್ಕೆಯ ಪ್ರಶ್ನೆಗಳು | (10×1=10) |
| ವಿಭಾಗ–B ಎರಡುಅಂಕದ 5 ಪ್ರಶ್ನೆಗಳಿಗೆ ಉತ್ತರಿಸಬೇಕು | (5×2=10) |
| ವಿಭಾಗ–C ಐದು ಅಂಕದ 5 ಪ್ರಶ್ನೆಗಳಿಗೆ ಉತ್ತರಿಸಬೇಕು | (5×5=25) |
| ವಿಭಾಗ–D ಹದಿನೈದು ಅಂಕದ 1 ಪ್ರಶ್ನೆಗೆ ಉತ್ತರಿಸಬೇಕು | (1×15=15) |

**2023-24ರಲ್ಲಿ ಎರಡನೇ ಸೆಮಿಸ್ಟರ್ ಅನುತ್ತೀರ್ಣರಾದ ಅಭ್ಯರ್ಥಿಗಳಿಗೆ ಸೂಚನೆಗಳು**

- ಮರು ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಈ ಕೆಳಗೆ ನೀಡಿದ ಅರ್ಜಿಯನ್ನು ಭರ್ತಿಮಾಡಿ ನಿಗದಿತ ಶುಲ್ಕವನ್ನು ಪಾವತಿಸಿ ವಿಶ್ವವಿದ್ಯಾಲಯದ ವಿಳಾಸ **"ಕುಲಸಚಿವರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ರೈತ ಭವನ, ಜನರಲ್ ಕಾರಿಯಪ್ಪ ವೃತ್ತ, ಗದಗ 582101"**ಇಲ್ಲಿಗೆ ಅಂಚೆ ಮೂಲಕ ಕಳುಹಿಸಬೇಕು ಅಥವಾ ಇ–ಮೇಲ್dcbmksrdpru@gmail.com ಸ್ಕ್ಯಾನ ಮಾಡಿದ ಪ್ರತಿಗಳನ್ನು ಕಳುಹಿಸಲು ಸೂಚಿಸಲಾಗಿದೆ.
- ಒಂದು ಪರೀಕ್ಷೆ ಅನುತ್ತೀರ್ಣರಾಗಿದ್ದಲ್ಲಿ ರೂ. 1,500/–, ಎರಡು ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿದ್ದಲ್ಲಿ ರೂ. 3,000/–, ಮೂರು ಅಥವಾ ನಾಲ್ಕು ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿದ್ದಲ್ಲಿ ರೂ. 4,500/–ಗಳನ್ನು ವಿಶ್ವವಿದ್ಯಾಲಯದ SB Account Number: 110095611771, Canara Bank, IFSC Code CNRB0000511 ಗೆ Online /UPI ಮುಖಾಂತರ ಪಾವತಿಸಿ, Transaction ID Screenshotನ್ನು ಗೂಗಲ್ ಫಾರ್ಮನಲ್ಲಿ ಅಪ್‌ಲೋಡ್ ಮಾಡಬೇಕು.
- ಈ ಮೇಲಿನ ಐದು ಕೇಂದ್ರಗಳಲ್ಲಿ ಪರೀಕ್ಷೆಗಳು ಜರುಗುವುದರಿಂದ ಯಾವುದಾದರು ಒಂದು ಕೇಂದ್ರವನ್ನು ಗೂಗಲ್ ಫಾರ್ಮನಲ್ಲಿ ಪರೀಕ್ಷೆಗೆ ಆಯ್ಕೆ ಮಾಡಿಕೊಳ್ಳಬೇಕು ಮತ್ತು ಇದನ್ನು ಮುಂಚಿತವಾಗಿ ಶ್ರೀ. **ಅಭಿಷೇಕ ವಿ.ಜಿ.** ಮೊಬೈಲ್ ಸಂಖ್ಯೆ 9632062466ಗೆ ವಾಟ್ಸಆಫ್ ಮುಖಾಂತರ ತಿಳಿಸಬೇಕು.
- ಈ ಮೇಲಿನ ಎಲ್ಲ ದಾಖಲೆ ಮತ್ತು ಶುಲ್ಕವನ್ನು ದಿನಾಂಕ 15.01.2025ರ ಒಳಗಾಗಿ ತಲುಪಿಸಲು ಸೂಚಿಸಲಾಗಿದೆ ಮತ್ತು ನಂತರದಲ್ಲಿ ಸ್ವೀಕೃತವಾದ ದಾಖಲೆ ಮತ್ತು ಶುಲ್ಕಗಳನ್ನು ಪರೀಕ್ಷೆಗಾಗಿ ಪರಿಗಣಿಸಲಾಗುವುದಿಲ್ಲ ಮತ್ತು ಮರಳಿಸಲಾಗುವುದಿಲ್ಲ ಎಂದು ಈ ಮೂಲಕ ಸೂಚಿಸಲಾಗಿದೆ.
- ಹೆಚ್ಚಿನ ಮಾಹಿತಿಗಾಗಿ ಶ್ರೀ. **ಅಭಿಷೇಕ ವಿ.ಜಿ.** ಮೊಬೈಲ್ ಸಂಖ್ಯೆ 9632062466ಗೆ ಸಂಪರ್ಕಿಸಲು ಸೂಚಿಸಲಾಗಿದೆ.

**ಕುಲಸಚಿವರು**

## ಸೌಹಾರ್ದ ಸಹಕಾರಿ ಕ್ಷೇತ್ರದ ರಜತ ಮಹೋತ್ಸವ ವರ್ಷ ಆಚರಣೆಯ ಜೊತೆಗೆ ಸೌಹಾರ್ದ ಸಹಕಾರಿ ದಿನಾಚರಣೆ

2025 ಸೌಹಾರ್ದ ಸಹಕಾರಿ ಕ್ಷೇತ್ರದ ರಜತ ಮಹೋತ್ಸವ ವರ್ಷವಾಗಿದ್ದು ಸಂಯುಕ್ತ ಸಹಕಾರಿ ಆಡಳಿತ ಮಂಡಳಿ ವರ್ಷ ಪೂರ್ತಿ ಈ ಕಾರ್ಯಕ್ರಮವನ್ನು ಅತ್ಯಂತ ಸಂಭ್ರಮದಿಂದ ಹಾಗೂ ಉತ್ಸಾಹದಿಂದ ಆಚರಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಈ ಕಾರ್ಯಕ್ರಮಗಳು ರಾಷ್ಟ್ರದ ದಾಖಲೆಗಳಲ್ಲಿ ದಾಖಲಾಗಬೇಕೆಂದು ಸಂಯುಕ್ತ ಸಹಕಾರಿಯ ಆಪೇಕ್ಷೆ ಹಾಗೂ ಈ ದಾಖಲೆಗಳು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಲಿವೆ ಎಂಬುದು ಸಹಕಾರಿಗಳ ಅಭಿಪ್ರಾಯವಾಗಿದೆ. ಆದ್ದರಿಂದ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ರಜತ ಮಹೋತ್ಸವ ಆಚರಣೆಗೆ ಸನ್ನದ್ಧರಾಗಬೇಕೆಂದು ತಮ್ಮ ಸಲಹೆ, ಸಹಕಾರ, ಮಾರ್ಗದರ್ಶನಗಳನ್ನು ನೀಡಿ ರಜತ ಮಹೋತ್ಸವ ಯಶಸ್ವಿ ಆಚರಣೆಗೆ ಸಾಕ್ಷಿಯಾಗಬೇಕೆಂದು ಸಂಯುಕ್ತ ಸಹಕಾರಿಯು ಆಪೇಕ್ಷಿಸುತ್ತದೆ.

## ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕಿನ ನಿರ್ದೇಶಕ ಮಂಡಳಿಗೆ ಅವಿರೋಧವಾಗಿ ಆಯ್ಕೆ :



**ಬೆಲ್ಲದ ಬಾಗೇವಾಡಿ** : ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕಿನ 2024 ರಿಂದ 2029ರ ಐದು ವರ್ಷಗಳ ಅವಧಿಗಾಗಿ ನಿರ್ದೇಶಕ ಮಂಡಳಿ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಶ್ರೀ ಕುಶ ರಮೇಶ ಕತ್ತಿ, ಶ್ರೀ ಮಲ್ಲಿಕಾರ್ಜುನ ಸಂಗಪ್ಪಾ ಬೆಲ್ಲದ, ಶ್ರೀ ಶಿವಗೌಡಾ ಸಾತಗೌಡಾ ಪಾಟೀಲ, ಶ್ರೀ ಸುರೇಶ ಬಸಲಿಂಗಪ್ಪಾ ಬೆಲ್ಲದ, ಶ್ರೀ ಮುರಗೇಶ ಬಸವರಾಜ ಕತ್ತಿ, ಶ್ರೀ ಮೋಹನ ಸತ್ತೆಪ್ಪಾ ಮುನ್ನೋಳಿ, ಶ್ರೀ ರಮೇಶ ಬಂಡಪ್ಪಾ ಮುನ್ನೋಳಿ, ಶ್ರೀ ಮಹಾವೀರ ಪಾರೆಸಪ್ಪಾ ಖೆಮಲಾಪೂರೆ, ಶ್ರೀ ಸಿದ್ದಪ್ಪಾ ವೀರಪ್ಪಾ ಹಾಗರಗಿ, ಶ್ರೀ ವಿನಾಯಕ ಶಶಿಕಾಂತ ಬುರ್ಜಿ, ಶ್ರೀ ಶಮಸುದ್ದೀನ ದಸ್ತಗೀರಸಾಬ ಪಠಾಣ ಮಹಿಳಾ ಕ್ಷೇತ್ರದಿಂದ ಶ್ರೀಮತಿ ವಿಜಯಲಕ್ಷ್ಮೀ ಶಿವಪುತ್ರ ಶೆಟ್ಟಿ, ಶ್ರೀಮತಿ ಸಂಜೀವಿನಿ ಶ್ರೀಮಂತ ತೇರದಾಳ ಹಿಂದುಳಿದ ವರ್ಗ 'ಅ' ಕ್ಷೇತ್ರದಿಂದ ಶ್ರೀ ರಾಜಾರಾಮ ತುಕಾರಾಮ ಶಿರಾಳಕರ ಹಿಂದುಳಿದ ವರ್ಗ 'ಬ' ಕ್ಷೇತ್ರದಿಂದ ಶ್ರೀ ಕಿಶೋರ ಸದಾಶಿವ ಕತ್ತಿ ಮತ್ತು ಪರಿಶಿಷ್ಟ ಜಾತಿ ಕ್ಷೇತ್ರದಿಂದ ಶ್ರೀ ಮನೋಹರ ನಾಗಪ್ಪಾ ಶ್ರೀಖಂಡೆ ಇವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ

ಪದಾಧಿಕಾರಿಗಳ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಶ್ರೀ ಕುಶ(ಪವನ) ರಮೇಶ ಕತ್ತಿ ಸಾ॥ ಬೆಲ್ಲದ ಬಾಗೇವಾಡಿ ಹಾಗೂ ಉಪಾಧ್ಯಕ್ಷರಾಗಿ ಶ್ರೀ ರಮೇಶ ಬಂಡಪ್ಪಾ ಮುನ್ನೋಳಿ ಸಾ॥ ಬೆಲ್ಲದ ಬಾಗೇವಾಡಿ ಇವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಚುನಾವಣಾಧಿಕಾರಿಯಾಗಿ ಶ್ರೀ ಆನಂದ ಅ. ಹೇರೆಕರ ದ್ವಿ.ದ.ಸ.ಸ.ಸಂ. ಸಂಯುಕ್ತ ನಿಬಂಧಕರ ಕಚೇರಿ ಬೆಳಗಾವಿ ಇವರು ಕಾರ್ಯ ನಿರ್ವಹಿಸಿದರು.

## ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ :



**ದಾವಣಗೆರೆ** : ದಿನಾಂಕ: 18–12–2024 ರಂದು ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿ, 2ನೇ ಮಹಡಿ, ಡಿ.ಸಿ ಕಚೇರಿ, ದಾವಣಗೆರೆ ಇಲ್ಲಿ ದಾವಣಗೆರೆ ಜಿಲ್ಲೆಯ ಸಹಕಾರ ಇಲಾಖೆಯ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ದಾವಣಗೆರೆ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಮಧುಶ್ರೀನಿವಾಸ್ .ಟಿ ರವರು ವಹಿಸಿದ್ದರು. ಈ ಸಂದರ್ಭದಲ್ಲಿ ದಾವಣಗೆರೆ ಡಿ.ಸಿ.ಸಿ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಪರ ನಿಬಂಧಕರಾದ ಶ್ರೀ ಕೆ.ಎನ್ ನಂಜುಂಡೇಗೌಡ ರವರು, ಲೆಕ್ಕಪರಿಶೋಧನ ಇಲಾಖೆಯ ಉಪ ನಿರ್ದೇಶಕರಾದ ಶ್ರೀ ಮಹೇಶ್ವರಪ್ಪ ರವರು, ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀಮತಿ ಮಂಜುಳ .ಎಸ್ ರವರು, ಕೈಮಗ್ಗ ಮತ್ತು ಜವಳಿ ನಿಗಮದ ಅಧಿಕಾರಿಗಳು, ಮೀನುಗಾರಿಕೆ ಇಲಾಖೆ ಅಧಿಕಾರಿಗಳು, ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಸಹಕಾರ ಅಭಿವೃದ್ಧಿ ಅಧಿಕಾರಿಗಳು, ಲೆಕ್ಕಪರಿಶೋಧನ ಇಲಾಖೆಯ ಅಧಿಕಾರಿಗಳು ಹಾಗೂ ಜಿಲ್ಲಾ ಹಾಲು ಒಕ್ಕೂಟದ ಅಧಿಕಾರಿಗಳು ಉಪಸ್ಥಿತರಿದ್ದರು. ಈ ಸಭೆಯಲ್ಲಿ ದಾವಣಗೆರೆ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಉಮೇಶ್ ಎ.ಎಸ್ ರವರು ಸಂಯುಕ್ತ ಸಹಕಾರಿಯ ಪ್ರತಿನಿಧಿಯಾಗಿ ಭಾಗವಹಿಸಿ ಸಭೆಗೆ ಅಗತ್ಯ ಮಾಹಿತಿ ಒದಗಿಸಿದರು.

## ಪ್ರವರ್ತಕರ ಸಭೆ



**ಮೈಸೂರು** : ಕುಶಾಲನಗರ ತಾಲ್ಲೂಕಿನಲ್ಲಿ ನೂತನ ಸೌಹಾರ್ದ ಸಹಕಾರಿಗಳನ್ನು ಪ್ರಾರಂಭಿಸುವ ದೃಷ್ಟಿಯಿಂದ ಉದ್ದೇಶಿತ ಕುಶಾಲನಗರ ತಾಲೂಕು ವಿಶ್ವಕರ್ಮ ಸೌಹಾರ್ದ ಸಹಕಾರಿ ಸಂಘ ನಿಯಮಿತ ಇದರ ಪ್ರವರ್ತಕರ ಸಭೆಯನ್ನು ಮಾಡಲಾಯಿತು. ಸದರಿ ಸಭೆಯಲ್ಲಿ ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಮತ್ತು ಸೌಹಾರ್ದ ಚಳುವಳಿಯ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುರೇಶ ಆರ್ ಎಸ್ ರವರು ಮಾಹಿತಿಯನ್ನು ನೀಡದರು. ಸದರಿ ಸಭೆಯಲ್ಲಿ 14 ಜನ ಪ್ರವರ್ತಕರು ಭಾಗವಹಿಸಿದ್ದರು

## ಉದ್ಘಾಟನೆ :



**ತುಮಕೂರು :** ದಿನಾಂಕ 05.12.2024 ರಂದು ಶ್ರೀ ಗುರುಕುಲ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ, ತುಮಕೂರು ಇದರ ಗುರುಕುಲ ಕ್ಲಿನಿಕ್ ಮತ್ತು ಡಯಾಗ್ನೋಸ್ಟಿಕ್ ಸೆಂಟರ್‌ನ ಉದ್ಘಾಟನಾ ಕಾರ್ಯಕ್ರಮವನ್ನು ಗುರುಕುಲ ಆರ್ಕೆಡ್, ಸಿದ್ದಗಂಗಾ ಬಡಾವಣೆ, ತುಮಕೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ತುಮಕೂರು ನಗರದ ಮಾನ್ಯ ಶಾಸಕರಾದ ಶ್ರೀ ಜ್ಯೋತಿ ಗಣೇಶ್ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಹಕಾರಿ ಅಧ್ಯಕ್ಷರಾದ ಶ್ರೀ ಜಿ. ಮಲ್ಲಿಕಾರ್ಜುನಯ್ಯ ಇವರು ವಹಿಸಿದ್ದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ತುಮಕೂರು ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್‌ರವರು ಭಾಗವಹಿಸಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ಇವರು ಉಪಸ್ಥಿತರಿದ್ದರು.



**ಶಿವಮೊಗ್ಗ :** ಶಿವಮೊಗ್ಗ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ. ಆರ್. ಪ್ರಸನ್ನ ಕುಮಾರ್ ರವರು ಧ್ವಜಾರೋಹಣ ನೆರವೇರಿಸಿದರು.



**ಬೀದರ :** ಬೀದರ ಜಿಲ್ಲಾ ಸಂಪರ್ಕ ಕಚೇರಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ್ ರವರು ಧ್ವಜಾರೋಹಣ ನೆರವೇರಿಸಿದರು.

**ದಾವಣಗೆರೆ :** ದಿನಾಂಕ 05.12.2024 ರಿಂದ 07.12.2024ರವರೆಗೆ ಜರುಗಿದ ಜಿ.ಎಂ. ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ದಾವಣಗೆರೆ ಸಹಕಾರಿಯ ಸಿಬ್ಬಂದಿ ನೇಮಕಾತಿ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಪ್ರತಿನಿಧಿಯಾಗಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಭಾಗವಹಿಸಿದ್ದರು. ಸೌಹಾರ್ದ ಕಾಯ್ದೆ/ನಿಯಮ ಹಾಗೂ ಸಂಘದ ಉಪವಿಧಿಯನ್ವಯ ನೇಮಕಾತಿಯು ಜರುಗಿತು. ಈ ಸಂದರ್ಭದಲ್ಲಿ ಸಹಕಾರಿಯ ಕಾರ್ಯನಿರ್ವಾಹಕ ನಿರ್ದೇಶಕರು, ಉಪಸಮಿತಿ ನಿರ್ದೇಶಕರು, ಬಾಹ್ಯತಜ್ಞರು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.

**ಶಿವಮೊಗ್ಗ :** ದಿನಾಂಕ 13.12.2024ರಂದು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರನ್ನಕುಮಾರ್ ರವರು ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಕೃಷಿಕ್ ಸೌಹಾರ್ದ ಸಹಕಾರಿ ಸಂಘ ನಿ, ಮತ್ತು ಶ್ರೀ ಭದ್ರಕಾಳಿ ಸೌಹಾರ್ದ ಸಹಕಾರಿ ಸಂಘ ನಿ, ಸಹಕಾರಿಗಳಿಗೆ ಭೇಟಿ ನೀಡಿ ಸಹಕಾರಿಗಳ ಅಭಿದೃಷ್ಟಿಯಿಂದ ಅಗತ್ಯ ಸಲಹೆ ಸೂಚನೆ ಹಾಗೂ ಮಾರ್ಗದರ್ಶನ ನೀಡಿದರು.

**ಮೈಸೂರು :** ಸಪ್ತರ್ಷಿ ಸೌಹಾರ್ದ ಸಹಕಾರಿ ಸಂಘ ನಿ., ಸಹಕಾರಿಯ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮವನ್ನು ದಿನಾಂಕ: 19.12.2024 ರ ಗುರುವಾರ ಸಂಜೆ 5.30 ಗಂಟೆಗೆ ಸಹಕಾರಿಯ ಕಚೇರಿಯಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಹಾಗೂ ಲೆಕ್ಕಪರಿಶೋದಕರಾದ ಶ್ರೀ ಬಿ.ಎನ್.ಚಂದ್ರಶೇಖರ್ ರವರು ಸಹಕಾರಿಯ ಕ್ಯಾಲೆಂಡರ್‌ನ್ನು ಬಿಡುಗಡೆ ಮಾಡಿದರು. ಸದರಿ ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿಯ ಸದಸ್ಯರು ಹಾಗೂ ಸಿಬ್ಬಂದಿಗಳು ಭಾಗವಹಿಸಿದರು.

**ಶಿವಮೊಗ್ಗ :** ದಿನಾಂಕ 17.12.2024ರಂದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ನಗರದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಾಹಕರುಗಳಿಗಾಗಿ ಶಿಕಾರಿಪುರ ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ನಿ, ಶಿಕಾರಿಪುರ ಇಲ್ಲಿ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಲೆಕ್ಕಪರಿಶೋಧನಾ ವರದಿ ಬಾಕಿ/ವಾರ್ಷಿಕ ಶುಲ್ಕ ಬಾಕಿ ಮತ್ತು ಆಡಳಿತ ಮಂಡಳಿ ಚುನಾವಣೆ ಹಾಗೂ ದಾವಾ ದಾಖಲಾತಿ ವಿಷಯದ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಮಹಿತಿ ನೀಡಿದರು. ಕಾರ್ಯಕ್ರಮದಲ್ಲಿ 09 ಜನ ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.

**ಮೈಸೂರು :** ಹೆಚ್ ಡಿ ಕೋಟೆ ತಾಲ್ಲೂಕಿನಲ್ಲಿ ನೂತನ ಸೌಹಾರ್ದ ಸಹಕಾರಿಗಳನ್ನು ಪ್ರಾರಂಭಿಸುವ ದೃಷ್ಟಿಯಿಂದ ಉದ್ದೇಶಿತ ಅಮೃತ ಸಿರಿ ಸೌಹಾರ್ದ ಸಹಕಾರಿ ಸಂಘ ನಿಯಮಿತ ಇದರ ಪ್ರವರ್ತಕರ ಸಭೆಯನ್ನು ಮಾಡಲಾಯಿತು. ಸದರಿ ಸಭೆಯಲ್ಲಿ ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಮತ್ತು ಸೌಹಾರ್ದ ಚಳುವಳಿಯ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುರೇಶ ಆರ್ ಎಸ್ ರವರು ಮಾಹಿತಿಯನ್ನು ನೀಡದರು. ಸದರಿ ಸಭೆಯಲ್ಲಿ 10 ಜನ ಪ್ರವರ್ತಕರು ಭಾಗವಹಿಸಿದ್ದರು.

# ಕ್ಯಾಲೆಂಡರ್ ಬಿಡುಗಡೆ



ಮೈಸೂರು : ಮೈಸೂರು ಜಿಲ್ಲಾ ಛಾಯಾ ಸ್ನೇಹ ಸೌಹಾರ್ದ ಸಹಕಾರಿ ಸಂಘ ನಿಯಮಿತ ವತಿಯಿಂದ ಸಹಕಾರಿ ಸೌಹಾರ್ದ ದಿನಾಚರಣೆ ಹಾಗೂ ಡೈರಿ ಮತ್ತು ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮವನ್ನು ದಿನಾಂಕ 02/01/2025 ರಂದು ಚಿಕ್ಕಮ್ಮನಿಕೇತನ ಕಮ್ಯೂನಿಟಿ ಹಾಲ್ ಕುವೆಂಪುನಗರ, ಮೈಸೂರಿನಲ್ಲಿ ಆಯೋಜಿಸಿದ್ದು, ಕಾರ್ಯಕ್ರಮದ ಉದ್ಘಾಟನೆಯನ್ನು ವೇದಿಕೆಯ ಮೇಲಿಂದ ಗಣ್ಯರು ಉದ್ಘಾಟಿಸಿದರು, ದಿನಚರಿ ಬಿಡುಗಡೆಯನ್ನು ಶ್ರೀ ಎಂ ಕೆ ಸೋಮಶೇಖರ್ (ಮಾಜಿ ಶಾಸಕರು) ರವರಿಂದ ಬಿಡುಗಡೆ ಗೊಳಿಸಿದರು, ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮವನ್ನು ಶ್ರೀ ಎಸ್ ನಾರಾಯಣ್ ರಾವ್ ರವರು (ಕೊಡಗು ಮೈಸೂರು ಮಂಡ್ಯ ಜಿಲ್ಲಾ ಒಕ್ಕೂಟ ಅಧ್ಯಕ್ಷರು), ರವರಿಂದ ಬಿಡುಗಡೆಗೊಳಿಸಿದರು. ಹಾಗೂ ಮುಖ್ಯ ಅತಿಥಿಗಳಾಗಿ ಶ್ರೀ ಗುರುಪ್ರಸಾದ್ ಬಂಗೇರ, ಮೈಸೂರು ಪ್ರಾಂತೀಯ ಅಧಿಕಾರಿ ರವರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸದಸ್ಯರಿಗೆ ಹಾಗೂ ಸದಸ್ಯರ ಮಕ್ಕಳಿಗೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಕಾರ್ಯಕ್ರಮಕ್ಕೆ ಸಹಕಾರಿಯ ಆಧ್ಯಕ್ಷರಾದ ಶ್ರೀ ಎಂ ಎಸ್ ರಾಜೇಂದ್ರ ಕುಮಾರ್ ರವರು, ಸಂಘದ ಆಡಳಿತ ಮಂಡಳಿಯವರು, ಸಿಬ್ಬಂದಿವರ್ಗದವರು ಹಾಗೂ ಸಂಘದ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



**ರಾಯಚೂರು** : ಕಮ್ಮವಾರಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಆದರ್ಶ ಕಾಲೋನಿ, ಸಿಂಧನೂರು. ಸಹಕಾರಿ ವತಿಯಿಂದ 2025ನೇ ಸಾಲಿನ ದಿನದರ್ಶಿಕೆಯನ್ನು ಸಹಕಾರಿಯ ಅಧ್ಯಕ್ಷರು ಶ್ರೀ. ಕರುಟೂರಿ ಸುಬ್ಬರಾವು ಹಾಗೂ ನಿರ್ದೇಶಕರು ಶ್ರೀ. ವಿ. ಶ್ರೀನಿವಾಸ್, ಶ್ರೀ.ಯು. ಶ್ರೀನಿವಾಸ್, ಶ್ರೀ ಆರ್. ವೆಂಕಟೇಶ್ವರಲು, ಶ್ರೀ ಈ ರಾಮಕೃಷ್ಣ ಹಾಗೂ ಮಾಜಿ ನಿರ್ದೇಶಕರಾದ ಶ್ರೀ. ಕೆ. ವಿ. ವಿ. ರಾಮಕೃಷ್ಣರವರು ಹಾಗೂ ಸಹಕಾರಿಯ ಸಿಬ್ಬಂದಿಗಳಾದ ಶ್ರೀ. ಲಕ್ಷ್ಮೀಪತಿ ಕುಂಬಾರ್ ಮುಖ್ಯ ಕಾರ್ಯನಿರ್ವಾಹಕರು, ಕ್ಯಾಶಿಯರ್ ಮಂಜುನಾಥ್.ಎಮ್, ಹಾಗೂ ಕ್ಲರ್ಕ್ ಮೌನೇಶ್ ರವರು ಭಾಗವಹಿಸಿ ಕ್ಯಾಲೆಂಡರ್ ಬಿಡುಗಡೆಯನ್ನು ನೆರವೇರಿಸಲಾಯಿತು.



**ಬಳ್ಳಾರಿ** : ಸಂಡೂರು ತಾಲ್ಲೂಕಿನ ಶ್ರೀ ಶಿವಲೀಲೆ ಸೌಹಾರ್ದ ಸಹಕಾರಿ ಸಂಘದ 2025 ರ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಡಿ ವಿ ಸದಾನಂದಗೌಡರು ಮತ್ತು ಮಾಜಿ ಸಚಿವರಾದ ಮಹೇಶ್ ಕುಮಾರ, ಸಹಕಾರಿಯ ಅಧ್ಯಕ್ಷರಾದ ಬಿ ಜಿ ಪ್ರಭುಗೌಡ ಉಪಾಧ್ಯಕ್ಷರಾದ ಉಮಾದೇವಿ ನಿರ್ದೇಶಕರಾದ ಶ್ರೀಮತಿ ಸವಿತಾ ಶಿಂದೆ ಶ್ರೀಮತಿ ಕವನ ಪ್ರಶಾಂತ್ ಅರುಣ ಪೋಲ್ ಬಸವರಾಜ ಸಾಲಿಗರ್ ಅರಳಿ ಕುಮಾರಸ್ವಾಮಿ ಶ್ರೀಮತಿ ಯೆರಿಯಮ್ಮ ಮಾಲಿಯಕ್ಕ ಹಾಜರಿದ್ದರು.



**ಹುಲ್ಲೋಳಿ** : ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದು 24 ವರ್ಷ ತುಂಬಿ 25ನೇ ವರ್ಷಕ್ಕೆ ಪಾದಾರ್ಪಣೆ ಮಾಡಿರುವ ಪ್ರಯುಕ್ತ ದಿನಾಂಕ 01–01–2025 ರಂದು ನಮ್ಮ ಸೌಭಾಗ್ಯಲಕ್ಷ್ಮಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಕೊಪ್ಪಳ ಪ್ರಧಾನ ಕಛೇರಿಯ ಮೇಲ್ಕಂಡ ಸಹಕಾರಿಯು ಧ್ವಜಾರೋಹಣವನ್ನು ಸಹಕಾರಿಯ ನಿಕಟ ಪೂರ್ವ ಅಧ್ಯಕ್ಷರಾದ ಶ್ರೀ ಪ್ರಾಣೇಶರಾವ ದೇಸಾಯಿ ರವರು ವಿದ್ಯುಕ್ತವಾಗಿ ನೇರವೆರಿಸಿದರು. ಕೊಪ್ಪಳ ಪ್ರಧಾನ ಮತ್ತು ಶಾಖೆಯ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

## "ಬೆಳ್ಳಿ ಹಬ್ಬದ" ಸಮಾರಂಭ



**ಹುಕ್ಕೇರಿ :** ಹುಲ್ಲೋಳಿಯ ಅರಿಹಂತ ಸೌಹಾರ್ದ ಸಹಕಾರಿಯ 25ನೇ ವರ್ಷದ "ಬೆಳ್ಳಿ ಹಬ್ಬದ" ಸಮಾರಂಭವನ್ನು ಶ್ರವಣಬೆಳಗೊಳ ಅಭಿನವ ಚಾರು ಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು ಶ್ರವಣಬೆಳಗೊಳ ಚಾರು ಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಸ್ವಾಮೀಜಿ ಸಲಹೆ. ಪರೋಪಕಾರಿ ಗುಣ ಬೆಳೆಸಿಕೊಳ್ಳಿ 'ಮನುಜರಾಗಲಿ ಅಥವಾ ಸಂಘ ಸಂಸ್ಥೆಗಳಾಗಲಿ ಪರೋಪಕಾರಿ ಗುಣ ಬೆಳೆಸಿಕೊಂಡು ಲೋಕ ಕಲ್ಯಾಣಕ್ಕೆ ಶ್ರಮಿಸಿದಾಗ ಮಾತ್ರ ಸಮಾಜದಲ್ಲಿ ಗೌರವದ ಸ್ಥಾನ ಸಿಗುವುದು' ಎಂದು ಶ್ರವಣಬೆಳಗೊಳ ಅಭಿನವ ಚಾರು ಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಸ್ವಾಮೀಜಿ ಹೇಳಿದರು. ತಾಲೂಕಿನ ಹುಲ್ಲೋಳಿಯ ಅರಿಯಂತ ಸವಾರ್ದ ಸಹಕಾರಿಯ ಸಂಘದ 25ನೇ ವರ್ಷದ ಅಂಗವಾಗಿ ಗುರುವಾರ ನಡೆದ "ಬೆಳ್ಳಿ ಹಬ್ಬ" ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು ವೃಕ್ಷಕ್ಕೆ ಕಲ್ಲು ಹೊಡೆದರೂ ಹೇಗೆ ಅದು ಕಲ್ಲು ಹೊಡೆದವನಿಗೆ ಹಣ್ಣು ಕೊಡುವುದೊ ಹಾಗೆ ಟೀಕೆ ಟಿಪ್ಪಣಿ ನಡುವೆಯೂ ಸಂಸ್ಥೆಯು ಸಮಾಜಮುಖಿ ಕೆಲಸ ಮಾಡಿ ಇನ್ನೂ ಬೆಳೆಯಲಿ' ಎಂದು ಶುಭ ಕೋರಿದರು. ಬೆಳ್ಳಿ ನಾಣ್ಯ ವಿತರಿಸಿ ಮಾತನಾಡಿದ ಶಾಸಕ ಅಭಯ್ ಪಾಟೀಲ್, ನಿವೃತ್ತರು ಮತ್ತು ಹಿರಿಯರು ಕೂಡಿ ಕಟ್ಟಿದ ಸಂಸ್ಥೆಯು ರಾಜಕೀಯ ರಹಿತವಾಗಿ ಬೆಳೆದು ಜನರ ಮನ್ನಣೆಗೆ ಪಾತ್ರವಾಗಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಭರತೇಶ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ವಿನೋದ್ ದೊಡ್ಡಣ್ಣವರ, ಹಿರೇಮಠದ ಚಂದ್ರಶೇಖರ್ ಸ್ವಾಮೀಜಿ, ಕ್ಯಾರಗುಡ್ ಆಶ್ರಮದ ಅಭಿನವ ಮಂಜುನಾಥ್ ಸ್ವಾಮೀಜಿ ಹಾಗೂ ಅಧ್ಯಕ್ಷತೆ ವಹಿಸಿದ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ರಮೇಶ್ ಕತ್ತಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಅರಿಹಂತ ಸಭಾಭವನ ಅಡಿಗಲ್ಲು ಅನಾವರಣ ಗೊಳಿಸಲಾಯಿತು. ಶ್ರೀಗಳನ್ನು, ಗಣ್ಯರನ್ನು, ಸಾಧಕರನ್ನು ಆಡಳಿತ ಮಂಡಳಿ ವತಿಯಿಂದ ಸತ್ಕ–ರಿಸಲಾಯಿತು. ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಪಾರೀಶ ಉಗಾರೆ, ಮಹಾವೀರ ಉದ್ಯೋಗ ಸಮೂಹ ಸಂಸ್ಥೆ ಚೇರಮನ ಮಹಾವೀರ್ ನಿಲಜಗಿ, ಸದಲಗಾ ಬ್ಯಾಂಕಿನ ಅಧ್ಯಕ್ಷ ಪ್ರಕಾಶ್ ಪಾಟೀಲ್, ಸಿಎ ಎಸ್. ಬಿ. ಲಠ್ಠೆ, ಡಿಸಿಸಿ ಬ್ಯಾಂಕ್ ನಿರ್ದೇಶಕ ಗಜಾನನ ಕ್ವಳ್ಳಿ, ಸಹಕಾರಿ ಇಲಾಖೆಯ ವಿಭಾಗೀಯ ಅಧಿಕಾರಿ ಬಸವರಾಜ ಹೊಂಗಲ್, ಜಿನ್ನಪ್ಪ ಅಸ್ಕಿ ಸೇರಿದಂತೆ ಅನೇಕರು ಇದ್ದರು. ನಿರ್ದೇಶಕ ಜಯಪಾಲ ಚೌಗಲಾ ಸ್ವಾಗತಿಸಿದರು. ನಿರ್ದೇಶಕ ವಕೀಲ ಪಿ. ಆರ್. ಚೌಗಲಾ ಪ್ರಾಸ್ತಾವಿಕ ಮಾತನಾಡಿದರು. ಆಶಾ ಯಮಕನಮರಡಿ ಮತ್ತು ರಾಜೇಂದ್ರ ಸಾಂಗಾವೆ ನಿರೂಪಿಸಿದರು. ಪ್ರಧಾನ ವ್ಯವಸ್ಥಾಪಕ ಆನಂದ ಚೌಗಲಾ ವಂದಿಸಿದರು.

---



**ಬಳ್ಳಾರಿ :** ಪ್ರಗತಿಕೃಷ್ಣ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಹೊಸಪೇಟೆಯಲ್ಲಿ ಸೌಹಾರ್ದ ಕಾಯ್ದೆಯು ಜಾರಿಗೆ ಬಂದ 25 ವರ್ಷದ ವರ್ಷಾಚರಣೆಯ ಮೊದಲ ದಿನವನ್ನು ಮತ್ತು ಸೌಹಾರ್ದ ಸಹಕಾರಿಯು ದಿನವನ್ನು ದಿನಾಂಕ 01.01.2025 ರಂದು ಬೆಳ್ಳಿಗೆ 10 ಗಂಟೆಗೆ ನಮ್ಮ ಸಹಕಾರಿಯ ಮುಖ್ಯ ಕಛೇರಿಯಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು.

ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ ಭರಮಪ್ಪ ಇವರು ಸಹಕಾರಿಯ ಧ್ವಜವನ್ನು ಆರೋಹಣ ಮಾಡಿದರು. ನಂತರ ಅವರು ಮಾತನಾಡಿ ರಜತ ಮಹೋತ್ಸವದ ಅಂಗವಾಗಿ ಇಡೀ ವರ್ಷದಲ್ಲಿ ನಾವು ವಿವಿಧ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡು ರಜತ ಮಹೋತ್ಸವವನ್ನು ಆಚರಿಸೋಣ ಎಂದು ತಿಳಿಸಿದರು. ಇದರ ಅಂಗವಾಗಿ ರಕ್ತ ದಾನ ಶಿಬಿರ, ಆರೋಗ್ಯ ಶಿಬಿರ, ಸ್ವಚ್ಛತಾ ಕಾರ್ಯಕ್ರಮ, ಶಾಲೆಗಳಲ್ಲಿ ಅಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನ ನಮ್ಮ ಸದಸ್ಯರಿಗೆ ಆರೋಗ್ಯ ಶಿಬಿರ, ಮುಂತಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ರಜತ ಮಹೋತ್ಸವವನ್ನು ನಿಜವಾದ ರೀತಿಯಲ್ಲಿ ಆಚರಿಸೋಣಾ ಎಂದು ತಿಳಿಸಿದರು ಅಲ್ಲದೇ ನಮ್ಮ ಎಲ್ಲಾ ಶಾಖೆಗಳಲ್ಲಿ ಪ್ರತಿ ತಿಂಗಳ 15ನೇ ದಿನಾಂಕದಂದು ಗ್ರಾಹಕರ ದಿನವನ್ನು ಆಚರಿಸಲು ನಿರ್ಧರಿಸಿರುವುದುದಾಗಿ ತಿಳಿಸಿದರು.

ಸಹಕಾರಿಯ 2025ನೇ ವರ್ಷದ ಕ್ಯಾಲೆಂಡರ್‌ಗಳನ್ನು ಬಿಡುಗಡೆ ಮಾಡಿದರು. ಉಪಾಧ್ಯಕ್ಷರಾದ ಶ್ರೀ ಬಿ ಎಂ ಪ್ರಭುದೇವ ಪ್ರಸಕ್ತ ವಿದ್ಯಮಾನಗಳ ಬಗ್ಗೆ ಮಾತನಾಡಿದರು. ಮುಖ್ಯಕಾರ್ಯನಿರ್ವಾಹ ಅಧಿಕಾರಿಯಾದ ಶ್ರೀ ಎಚ್.ಎಂ ಸಣ್ಣಸಿದ್ದಯ್ಯ ಇವರು ಸೌಹಾರ್ದ ಸಹಕಾರಿಯ ಉದಯ, ಬೆಳವಣಿಗೆ, ನಮ್ಮ ಸಹಕಾರಿಯ ಸದ್ಯದ ಸ್ಥಿತಿ ಮತ್ತು ಇನ್ನೂ ಉತ್ತಮಪಡಿಸಿಕೊಳ್ಳಲು ಹಾಕಿಕೊಳ್ಳಬೇಕಾದ ಕಾರ್ಯಸೂಚಿಗಳನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ನಿರ್ದೇಶಕ ಮಂಡಳಿಯ ಸದಸ್ಯರು ಸಹಕಾರಿಯ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.



**ರಾಯಚೂರು** : ರಾಯಚೂರು ತಾಲೂಕು ಸೌಹಾರ್ದ ಸಹಕಾರಿಗಳ ಕಾರ್ಯನಿರತ ನೌಕರರ ಸಂಘದ ವತಿಯಿಂದ ಸೌಹಾರ್ದ ಕಾಯ್ದೆಯ ರಜತ ಮಹೋತ್ಸವವನ್ನು ದಿನಾಂಕ: 03–01–2025 ರಂದು ನಗರದ ಸ್ಟೇಶನ್ ರಸ್ತೆಯಲ್ಲಿರುವ ಕೊಠಾರಿ ಫಂಕ್ಷನ್ ಹಾಲ್‌ನಲ್ಲಿ ಆಚರಿಸಲಾಯಿತು.

ಸೌಹಾರ್ದ ಕಾಯ್ದೆ ಜಾರಿಗೆ ಬಂದು 25 ವರ್ಷ ಪೂರೈಸಿದ ನಿಮಿತ್ತ ರಜತ ಮಹೋತ್ಸವವನ್ನು ರಾಯಚೂರು ತಾಲೂಕು ಸೌಹಾರ್ದ ಸಹಕಾರಿಗಳ ಕಾರ್ಯನಿರತ ನೌಕರರ ಸಂಘದ ವತಿಯಿಂದ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಹಾಜರಿದ್ದ ಎಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಅಧ್ಯಕ್ಷರ ಪೈಕಿ ಹಿರಿಯರಾದ ಶ್ರೀ ವಿ.ಕಿಶನ್‌ರಾವ್ ಕುಲಕರ್ಣಿ, ಅಧ್ಯಕ್ಷರು ವಿಶ್ವರಾಜ್ ಸೌಹಾರ್ದ ಸಹಕಾರಿ ಸಂಘ ಮತ್ತು ಯುವಕರ ಪೈಕಿ ಯುವ ಅಧ್ಯಕ್ಷರಾದ ಶ್ರೀ ಎಂ.ಇಲಿಯಾಸ್ ಪಾಶಾ ಅಧ್ಯಕ್ಷರು, ಯುವಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ಮತ್ತು ನೌಕರರ ಸಂಘದ ಅಧ್ಯಕ್ಷರಾದ ಶ್ರೀ ರವಿಕುಮಾರ ಹಾಗೂ ನೌಕರರ ಸಂಘದ ಜಂಟಿ ಕಾರ್ಯದರ್ಶಿಗಳು ಸಹಕಾರಿಯ ಸಪ್ತ ವರ್ಣದ ಧ್ವಜಾರೋಹಣವನ್ನು ನೆರವೇರಿಸಿದರು.

ಈ ಸಂದರ್ಭದಲ್ಲಿ ವಿಶ್ವರಾಜ್ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಮಾತನಾಡಿ, ಸೌಹಾರ್ದ ಸಹಕಾರಿಗಳನ್ನು ಗುಣಮಟ್ಟದಲ್ಲಿ ಬೆಳೆಸಬೇಕಾದರೆ ಸಿಬ್ಬಂದಿಗಳ ಶ್ರಮ ಪ್ರಮುಖ ಪಾತ್ರ ನಿರ್ವಹಿಸುತ್ತದೆ ಎಂದು ತಿಳಿಸಿದರು. ರಾಯಚೂರು ಜಿಲ್ಲಾ ಸೌಹಾರ್ದ ಒಕ್ಕೂಟದ ನಿರ್ದೇಶಕರು ಮತ್ತು ಅಕ್ಷಯ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಕುಂಟ್ನಾಳ ವೆಂಕಟೇಶ ಅವರು ಮಾತನಾಡುತ್ತ, ಸಂಸ್ಥೆಯ ಅಳಿವು ಉಳಿವು ಸಿಬ್ಬಂದಿಗಳ ಕೈಯಲ್ಲಿರುತ್ತದೆ. ಮಂಡಳಿಯ ಸದಸ್ಯರು ಪಾರ್ಟ್‌ಟೈಂ ಕೆಲಸಗಾರರು ಮಾತ್ರ ಎಂದು ಹೇಳಿದರು ಹಾಗೂ ತಾಲೂಕು ಮಟ್ಟದಲ್ಲಿ ಅಧ್ಯಕ್ಷರುಗಳ ಒಕ್ಕೂಟ ರಚನೆಯಾದಲ್ಲಿ ಅಂತಹ ಒಕ್ಕೂಟ ರಚನೆಗೆ ಅವಶ್ಯಕವಿರುವ ಆರ್ಥಿಕ ಶಕ್ತಿಯನ್ನು ತಾವು ವೈಯಕ್ತಿಕವಾಗಿ ನೀಡುವುದಾಗಿ ಹೇಳಿದರು.

ವೀರಶೈವ ವಿಕಾಸ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಪ್ರಭುದೇವರು ಹೆಚ್.ಎಂ ರವರು ಮಾತನಾಡುತ್ತ, ಸಹಕಾರಿ ಕ್ಷೇತ್ರದಲ್ಲಿ ವೈಯಕ್ತಿಕ ಹಿತಾಸಕ್ತಿಗಿಂತ ಸೌಹಾರ್ದ ಕಾಯ್ದೆಯ ಆಶಯ ಮತ್ತು ಮೂಲ ಉದ್ದೇಶಕ್ಕೆ ಧಕ್ಕೆಯಾಗದಂತೆ ಕಾರ್ಯನಿರ್ವಹಿಸುವ ಜವಾಬ್ದಾರಿಯು ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರು ಅತ್ಯಂತ ಅಚ್ಚುಕಟ್ಟಾಗಿ ನಿಭಾಯಿಸುವುದು ಅತ್ಯಂತ ಪ್ರಮುಖವಾಗಿರುತ್ತವೆ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ವಿವಿಧ ಸೌಹಾರ್ದ ಸಹಕಾರಿಗಳ ಅಧ್ಯಕ್ಷರುಗಳಾದ ಶ್ರೀ ನಾಗಪ್ಪ ಹೊರಪ್ಯಾಟಿ, ಕೆ. ವೇಣುಗೋಪಾಲ್, ಮಲ್ಹಾರರಾವ್ ಕುಲಕರ್ಣಿ, ಅಮರೇಶ ನಿಲೋಗಲ್, ಸತ್ಯನಾರಾಯಣ ಗಾಣಧಾಳ, ಹನುಮಂತಗೌಡ ಹರವಿ, ವಿಶ್ವನಾಥ ಹಿರೇಮಠ, ಕುಂಟ್ನಾಳ ವೆಂಕಟೇಶ, ಎಂ.ಇಲಿಯಾಸ್ ಪಾಶಾ, ಶಿವಪ್ಪ ನಾಯಕ್, ಪ್ರಭುದೇವರು ಹೆಚ್.ಎಂ, ವಿ.ಕಿಶನ್‌ರಾವ್ ಕುಲಕರ್ಣಿ ಇವರುಗಳು ಆಗಮಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ರವಿಕುಮಾರ ಆಶಾಪೂರ ಇವರು ವಹಿಸಿದ್ದರು. ಪ್ರಾರ್ಥನೆ ಗೀತೆಯನ್ನು ಬಸವಲಿಂಗ ಸೌಹಾರ್ದದ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀಮತಿ ಶಿವಲೀಲಾ ರೆಡ್ಡಿ ನೆರವೇರಿಸಿದರು. ಪಂಚಮುಖಿ ಸೌಹಾರ್ದದ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ನಾಗರಾಜ ಪಾಟೀಲ್ ಕಾರ್ಯಕ್ರಮವನ್ನು ನಿರೂಪಿಸಿದರು. ಶಿವಪಾರ್ವತಿ ಗಣೇಶ ಸೌಹಾರ್ದದ ಮುಖ್ಯ ಕಾರ್ಯನಿರ್ವಾಹಕರಾದ ಪ್ರಭಾಕರ ರೆಡ್ಡಿ ಅವರು ವಂದನಾರ್ಪಣೆಯನ್ನು ಸಲ್ಲಿಸಿದರು

ಈ ಸಂದರ್ಭದಲ್ಲಿ ರಾಯಚೂರು ನಗರದ ಎಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರುಗಳು, ಮಂಡಳಿ ನಿರ್ದೇಶಕರು, ಸಿಬ್ಬಂದಿ ವರ್ಗದವರು, ಪಿಗ್ಮಿ ಸಂಗ್ರಹಗಾರರು, ನೌಕರರ ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಅಮೃತ ಹನುಮಂತಗೌಡ, ಕಾನೂನು ಸಲಹೆಗಾರರಾದ ಜಿತೇಂದ್ರ ಹರದಾರ, ಪ್ರಧಾನ ಕಾರ್ಯದರ್ಶಿಗಳಾದ ವೆಲ್ಲಪು ಗಾಲಯ್ಯ, ಖಜಾಂಚಿಗಳಾದ ಗಿರಿಯಪ್ಪ ಹವಲ್ದಾರ, ಕಾರ್ಯಕಾರಿ ಸಮಿತಿಯ ಸದಸ್ಯರಾದ ಅಶೋಕ ನಾಯಕ್, ಶ್ರೀಮತಿ ಸುಷ್ಮಿತಾ, ರಾಜೇಶ ಸಿ.ಹೆಚ್, ಪ್ರಮೋದ ಕುಮಾರ, ಶ್ರೀಮತಿ ರಾಧಿಕಾ ಮತ್ತು ದೇವಪ್ಪ ಸೇರಿದಂತೆ ಇನ್ನಿತರರು ಹಾಜರಿದ್ದರು.



## ಸೌಹಾರ್ದ ಸಹಕಾರಿ ದಿನಾಚರಣೆ

**ಹುಲ್ಲೋಳಿ** : ಅರಿಹಂತ ಸೌಹಾರ್ದ ಸಹಕಾರಿ ಸಂಘ ನಿ., ಹುಲ್ಲೋಳಿ ತಾ॥ ಹುಕ್ಕೇರಿ ಜಿ॥ ಬೆಳಗಾವಿ 25ನೇ ವರ್ಷದ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು, ಪ್ರಧಾನ ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ವರ್ಗದವರಿಂದ ಪ್ರಧಾನ ಕಛೇರಿ ಹುಲ್ಲೋಳಿಯಲ್ಲಿ ಪೂಜೆ ಮತ್ತು ಧ್ವಜಾರೋಹಣ ಮಾಡುವುದರೊಂದಿಗೆ ನೆರವೇರಿಸಲಾಯಿತು.

## ನಿಮ್ಮ ಪ್ರಶ್ನೆ



## ನಮ್ಮ ಉತ್ತರ

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ.

–ಸಂಪಾದಕರು

**ಪ್ರಶ್ನೆ : ಶ್ರೀ ಸೀತಾರಾಘವ ಸೌಹಾರ್ದ ಸಹಕಾರಿ ನಿ., ಹೊಸದುರ್ಗ**

**ಉತ್ತರ : ಶ್ರೀ ಸಿ.ಎನ್. ಪರಶಿವಮೂರ್ತಿ, ಸಹಕಾರ ಸಂಘಗಳ ಅಪರ ನಿಬಂಧಕರು (ನಿ.)**

ಕರ್ನಾಟಕ ಸೌಹಾರ್ದ ಕಾಯಿದೆ ಅಡಿ ನೋಂದಾವಣೆಯಾದ ಪ್ರತಿಯೊಂದು ಸದಸ್ಯ ಸಹಕಾರಿ, ಸ್ವಾಯತ್ತ, ಸ್ವತಂತ್ರ ಮತ್ತು ಸ್ವಯಂ ನಿಯಂತ್ರಿತ ಸಂಸ್ಥೆ. ಈ ಕಾಯಿದೆ ರಚನೆಯಾಗಿರುವುದು. ಸಮಾನ ಮನಸ್ಕರು ತಮ್ಮ ಅಲ್ಪ ಸಂಪನ್ಮೂಲವನ್ನು ಕೂಡಿಸಿ, ತಮ್ಮ ಆರ್ಥಿಕ ಬೆಳವಣಿಗೆಗಾಗಿ ರಚಿಸಿದ ಒಂದು ಸಹಕಾರಿ. ಈ ಸಂಸ್ಥೆಯಲ್ಲಿ ಆ ಸಹಕಾರಿ ಸದಸ್ಯರೇ ಮುಖ್ಯ ಪ್ರವರ್ತಕರು ಮತ್ತು ಫಲಾನುಭವಿಗಳು. ಸದಸ್ಯರ ಆರ್ಥಿಕ ಬೆಳವಣಿಗೆ, ಸಹಾಯ ಮಾಡಲು ನೌಕರರ ಅವಶ್ಯಕತೆ ಇದೆ ಎಂದು ಕಾಯಿದೆಯಲ್ಲಿ ಇಂತಹ ಸಂಸ್ಥೆಗೆ ಸೇವೆ ಸಲ್ಲಿಸಲು ನೌಕರರನ್ನು ನೇಮಿಸಿಕೊಳ್ಳಲು ಸೌಹಾರ್ದ ಕಾಯಿದೆ ಕಲಂ.31ನ್ನು ಸೇರಿಸಲಾಗಿದೆ. ಅದರಲ್ಲಿ ಪ್ರಮುಖವಾಗಿ ಪ್ರತಿಯೊಂದು ಸಹಕಾರಿಗೆ ಒಬ್ಬ ಮುಖ್ಯಕಾರ್ಯನಿರ್ವಾಕನಿರಬೇಕು ಮತ್ತು ಅವಶ್ಯಕವಿದ್ದರೆ ಹೆಚ್ಚುವರಿ ಸಿಬ್ಬಂದಿ ನೇಮಕ ಮಾಡಲು ಆಡಳಿತ ಮಂಡಳಿಗೆ ಅಧಿಕಾರ ನೀಡಲಾಗಿದೆ. ಸಂಯುಕ್ತ ಸಹಕಾರಿಗೆ ಸಂಬಂಧಪಟ್ಟಂತೆ ಕಲಂ.61ರಲ್ಲಿ ನೌಕರರ ಬಗ್ಗೆ ಪ್ರಸ್ತಾಪ ಮಾಡಲಾಗಿದೆ.

ಸೀತಾರಾಘವ ಸೌಹಾರ್ದ ಸಹಕಾರಿ 29.11.2024 ರಂದು ಕೇಳಿರುವ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಈ ಕೆಳಗೆ ನಮೂದಿಸಿದೆ ಮತ್ತು ಎಲ್ಲಾ ಪ್ರಶ್ನೆಗಳು, ಸಿಬ್ಬಂದಿಗೆ ನೀಡುವ ಸೌಲತ್ತುಗಳಿಗೆ ಮಾತ್ರ ಸೀಮಿತವಾಗಿದೆ. ಆದರೆ ಈ ಸೌಹಾರ್ದ ಪ್ರಾರಂಭವಾಗಿರುವುದು ಅದರ ಸದಸ್ಯರ ಆರ್ಥಿಕ ಬೆಳವಣಿಗೆಗೆ ಎಂಬುದನ್ನು ಮರೆತಂತಿದೆ. ಏಕೆಂದರೆ ಒಂದು ಸಹಕಾರ ಸಂಸ್ಥೆ ಪ್ರಾರಂಭವಾಗುವುದು ಅದರ ಸದಸ್ಯರ ಆರ್ಥಿಕ ಬೆಳವಣಿಗೆಗಾಗಿ.

**(1) ಸಿಬ್ಬಂದಿ ವೇತನ ಶ್ರೇಣಿಗೆ** ಸಂಬಂಧಿಸಿದ್ದು ಅದರಲ್ಲಿ ಆರು ಉಪಪ್ರಶ್ನೆಗಳನ್ನು ಕೇಳಿದ್ದಾರೆ. ಇವುಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆ. ಒಂದು ಸಹಕಾರಿಯ ನೌಕರರ ವೇತನ ಶ್ರೇಣಿ ನಿಗದಿ ಪಡಿಸುವ ಅಧಿಕಾರ, ಸಂಬಂಧಪಟ್ಟ ಆಡಳಿತ ಮಂಡಳಿಗೆ ವಿಹಿತವಾಗಿದೆ. ಇದರಲ್ಲಿ ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ ಅಥವಾ ಸಂಯುಕ್ತ ಸಹಕಾರಿಯಾಗಲಿ ನಿಗದಿ ಪಡಿಸುವ ಅಧಿಕಾರ ಇರುವುದಿಲ್ಲ. ಸಂಬಂಧಪಟ್ಟ ಸಹಕಾರಿಯ ಆಡಳಿತ ಮಂಡಳಿ, ಅದರ ಆರ್ಥಿಕ ಬಲದ ಆಧಾರದಲ್ಲಿ ನೌಕರರ ನೇಮಕ, ವೇತನ ಶ್ರೇಣಿ ಮತ್ತಿತರ ಭತ್ಯಗಳನ್ನು ನಿಗದಿ ಪಡಿಸಬೇಕು. ಅದಕ್ಕೂ ಪೂರ್ವದಲ್ಲಿ, ಆ ಸಹಕಾರಿ ತನ್ನ ಸದಸ್ಯರಿಗೆ ಅಗತ್ಯವಾದ ಎಲ್ಲಾ ಸೇವೆಗಳನ್ನು ಸಮರ್ಪಕವಾಗಿ ನೀಡಿದೆ ಎಂದ ನಂತರ. ಸಹಕಾರಿ ಕೇಳಿರುವ 6 ಉಪಪ್ರಶ್ನೆಗಳಿಗೆ ಮೇಲ್ಕಂಡ ಉತ್ತರದ ನಂತರ ತಿಳಿಯಬಹುದಾದ ವಿಷಯವೆಂದರೆ, ಆಡಳಿತ ಮಂಡಳಿ, ಸಾಮಾನ್ಯ ಸಭೆಯಲ್ಲಿ, ಆಡಳಿತ ವೆಚ್ಚದ ಮಿತಿ ನಿಗದಿ ಪಡಿಸಿದ ಮೊತ್ತದ ಒಳಗೆ, ಸಿಬ್ಬಂದಿ ವೇತನ, ವೇತನ ಶ್ರೇಣಿ ಹಾಗೂ ಭತ್ಯಗಳನ್ನು ನಿರ್ಧರಿಸುವ ಅಧಿಕಾರ ಸಂಬಂಧಪಟ್ಟ ಆಡಳಿತ ಮಂಡಳಿಗೆ ಮಾತ್ರ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕಾಲಕಾಲಕ್ಕೆ ನೀಡುವ ಭತ್ಯಗಳನ್ನು ಸಹಕಾರಿಯ ನೌಕರರಿಗೆ ನೀಡಬೇಕೆಂಬ ನೀತಿ ಯಾವುದೂ ಇಲ್ಲ.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಆಡಳಿತ ಮಂಡಳಿ ಮತ್ತು ನೌಕರರ ಮಧ್ಯ ವಿವಾದ ವೇರ್ಪಟ್ಟರೆ. ಸೌಹಾರ್ದ ಕಾಯಿದೆ ಕಲಂ.39 ರಡಿ ದಾವಾ ದಾಖಲಿಸಿ ಪರಿಹಾರ ಪಡೆಯಬಹುದು ಮತ್ತು ಅಂತಹ ವಿವಾದವನ್ನು 12 ತಿಂಗಳ ಅವಧಿಯೊಳಗೆ ದಾಖಲಿಸಿ ಪರಿಹಾರ ಪಡೆಯಬೇಕು (ಕಲಂ.40) ಇದರ ಜೊತೆಗೆ ಒಂದು ಸೌಹಾರ್ದ ಕಾಯಿದೆಯಡಿ ನೋಂದಾವಣೆಯಾದ ಸಹಕಾರಿ, ಶಾಸನ ಭದ್ದ ಜವಾಬ್ದಾರಿಗಳನ್ನು ನಿರ್ವಹಿಸಲು ಆ ಸಂಸ್ಥೆಯ ಆಡಳಿತ ಮಂಡಳಿಯ ಜವಾಬ್ದಾರಿ, ಕರ್ತವ್ಯ. ಆ ಮಂಡಳಿ ತೆಗೆದುಕೊಂಡ ತೀರ್ಮಾನಗಳನ್ನು ಕಾಯಿದೆ ಪೂರಕವಾಗಿ ನಿರ್ವಹಿಸುವುದು ಆ ಸಹಕಾರಿಯ ಮುಖ್ಯಕಾರ್ಯನಿರ್ವಾಹಕನ ಜವಾಬ್ದಾರಿ ಮತ್ತು ಕರ್ತವ್ಯ. ಕಾನೂನನ್ನು ಮೀರಿ ಯಾವುದೇ ಪರಿಹಾರ ಮಂಜೂರಿ ಮಾಡಿದರೆ ಅದಕ್ಕೆ ಆಡಳಿತ ಮಂಡಳಿ ಮತ್ತು ಮುಖ್ಯಕಾರ್ಯನಿರ್ವಾಹಕನ ಜವಾಬ್ದಾರಿಯಾಗುತ್ತದೆ. ವಿವಾದ ಇತ್ಯರ್ಥದ ಅವಧಿ ಬಗ್ಗೆ 1959ರ ಕಾಯಿದೆ ಕಲಂ.71(5) ರಡಿ 12 ತಿಂಗಳು + 6 ತಿಂಗಳ ಅವಧಿಯೊಳಗೆ ತೀರ್ಮಾನಿಸ ಬೇಕೆಂದರ ಶರತ್ತು ವಿಧಿಸಲಾಗಿದೆ. ಅದೇ ನೀತಿ ಸೌಹಾರ್ದ ಕಾಯಿದೆಯಡಿ ಅನುಸರಿಸಬಹುದು.

**(2) ನೌಕರರಿಗೆ ಬೋನಸ್ ಪಾವತಿ ಬಗ್ಗೆ ಕೇಳಲಾಗಿದೆ.** ಒಂದು ಸಹಕಾರಿ ಸಂಸ್ಥೆಯಲ್ಲಿ ನೇಮಕವಾದ ನೌಕರರ ಸಂಖ್ಯೆ ಆಧಾರದಲ್ಲಿ, ಅದು ಕಾರ್ಮಿಕ ಕಾಯಿದೆ ಅನ್ವಯವಾಗುತ್ತಿದೆಯೋ ಇಲ್ಲವೋ ಎಂಬುದನ್ನು ನಿರ್ಧರಿಸಬೇಕು. ಆದರೂ ಸೌಹಾರ್ದ ಕಾಯಿದೆ ಕಲಂ.10(XXI)(ಎಫ್)

ಅನ್ವಯ ಎರಡು ತಿಂಗಳ ವೇತನಕ್ಕೆ ಮೀರದ ಬೋನಸ್ ಪಾವತಿ ಮಾಡಲು ಅವಕಾಶವಿದೆ. ಈ ಹಣವನ್ನು ಪ್ರತಿ ವರ್ಷ ವಾರ್ಷಿಕ ಸಾಮಾನ್ಯ ಸಭೆ ಒಪ್ಪಿಗೆ ಪಡೆದು ನೌಕರರಿಗೆ ಬೋನಸ್ ನೀಡಬೇಕು. ಈ ಪ್ರಕ್ರಿಯೆ ಪ್ರತಿ ವರ್ಷ ನಡೆಯಬೇಕು. ಯಾವುದಾದರೂ ವಿವಾದದಿಂದ ಹಿಂದಿನ ವರ್ಷಗಳಲ್ಲಿ, ವಿವಾದವೇರ್ಪಟ್ಟು ಬೋನಸ್ ಪಾವತಿಯಾಗದಿದ್ದರೆ, ಹಿಂದಿನ ವರ್ಷದ ಬೋನಸ್ ಸೇರಿಸಿ ಪಾವತಿಸಬಹುದು. ಬೋನಸ್ ನೀಡುವುದು. ಸಹಕಾರಿ ಲಾಭಗಳಿಸಿದಾಗ ಮಾತ್ರ. ಕೈಗಾರಿಕ ಕಾಯಿದೆಯಡಿ ಲಾಭ–ನಷ್ಟಕ್ಕೆ ಸಂಬಂಧ ಪಡದೆ. ಬೋನಸ್ ಪಾವತಿ ಬಗ್ಗೆಯ ನೀತಿ ಸಹಕಾರಿಗೆ ಅನ್ವಯಿಸದು ಏಕೆಂದರೆ, ನೌಕರರ ಸಂಖ್ಯೆ ಯಂತ್ರೋಪಕರಣಗಳಲ್ಲಿದ್ದ 10, ಅದಲ್ಲದೇ ಇದ್ದಲ್ಲಿ 20 ನೌಕರರು ಇದ್ದಾಗ ಮತ್ತು ಕಾರ್ಮಿಕಕಾಯಿದೆಯಡಿ ನೋಂದಾವಣೆಯಾಗಿದ್ದಾಗ ಮಾತ್ರ ಬೋನಸ್ ಪಾವತಿಗೆ ಅವಕಾಶವಿದೆ. ಆದರೆ ನಿಮ್ಮ ಸಹಕಾರಿಗಲ್ಲ.

**(3) ಪಿಗ್ಮಿ ಠೇವಣಿ ಸಂಗ್ರಹಕಾರರು :** ಅವರು ಸಹಕಾರಿಯ ನೌಕರರಲ್ಲ. ಅವರಿಗೆ ಯಾವುದೇ ಹಾಜರಾತಿ ಪುಸ್ತಕ ಇರುವುದಿಲ್ಲ. ಸಾಮಾನ್ಯ ನೀತಿಯಂತೆ ಅವರು ಸಂಗ್ರಹ ಮಾಡಿದ ಮೊತ್ತದ ಆಧಾರದ ಮೇಲೆ ಶೇ.2–3 ಪ್ರಮಾಣದ ಕಮಿಷನ್‌ಗೆ ಮಾತ್ರ ಅರ್ಹರು ಮತ್ತು ಆ ವ್ಯವಹಾರದಲ್ಲಿ ಅವ್ಯವಹಾರವಾದರೆ, ಅದಕ್ಕೆ ಆ ಸಂಗ್ರಹಕಾರರೇ ಜವಾಬ್ದಾರರಾಗುತ್ತಾರೆ ಮತ್ತು ನಷ್ಟವನ್ನು ತುಂಬಿ ಕೊಡಬೇಕು. ಅವರಿಗೆ ಯಾವುದೇ ರೀತಿ, ಬೇರೆ ನೌಕರರಿಗೆ ನೀಡುವ ಸಂಬಳ, ಭತ್ಯೆಗಳು ಅಥವಾ ರಜಾ ದಿನಗಳು ಅನ್ವಯಿಸುವುದಿಲ್ಲ. ಅವರು ಸಹಕಾರಿಯ ನೌಕರರಲ್ಲ. ಅವರಿಗೆ ಯಾವುದೇ ರೀತಿ ವೇತನ ನಿಗದಿ ಪಡಿಸತಕ್ಕದ್ದಲ್ಲ.

**(4) ಗ್ರಾಚ್ಯುಯಿಟಿ :** ಸಹಕಾರಿಗೆ ನೌಕರರೆ ಗ್ರಾಚ್ಯುಯಿಡಿ ಪಾವತಿ ಬಗ್ಗೆ ಸಹಕಾರಿಯ ಮಂಡಳಿ ನೀತಿ ರೂಪಿಸಿ ಪಾವತಿ ಮಾಡಲು ಅವಕಾಶ ಕಲ್ಪಿಸುವುದು. ಆದರೆ ಕೇಂದ್ರ ಸರ್ಕಾರ/ರಾಜ್ಯ ಸರ್ಕಾರ ತನ್ನ ನೌಕರರಿಗೆ ನೀಡುವ ಆರ್ಥಿಕ ಸೌಲತ್ತುಗಳು ಸಹಕಾರಿ ನೌಕರರಿಗೆ ಅನ್ವಯಿಸುವುದಿಲ್ಲ. ನಿಮ್ಮ ಸಹಕಾರಿಯ ಆರ್ಥಿಕ ಸಂಪನ್ಮೂಲದ ಆಧಾರದಲ್ಲಿ ಆಡಳಿತ ಮಂಡಳಿ ನಿಗದಿ ಪಡಿಸಬೇಕು. ಸರ್ಕಾರಗಳು ಲಾಭ ನಷ್ಟದ ಆಧಾರದಲ್ಲಿ ನಡೆಯುವುದಿಲ್ಲ. ಆದರೆ ಸಹಕಾರ ಸಂಸ್ಥೆಗಳು ಆರ್ಥಿಕ ಸಂಸ್ಥೆಗಳು, ಲಾಭ ನಷ್ಟದ ಆಧಾರದ ಮೇಲೆ ನಡೆಸಬೇಕು. ನೌಕರರಿಗೆ ಆರ್ಥಿಕ ಸೌಲತ್ತು ನೀಡಬೇಕಾದರೆ ಆರ್ಥಿಕ ಸ್ಥಿತಿ ಭದ್ರವಾಗಿರಬೇಕು. ಇಲ್ಲವಾದರೆ ನೌಕರಿಗಾಗಿ ಸಹಕಾರ ಸಂಸ್ಥೆ ಎಂಬ ಭಾವನೆ ಬೆಳೆಸಿಕೊಳ್ಳಬಾರದು. ನಿಮ್ಮ ಸಹಕಾರಿಯ ಸದಸ್ಯರು ಆರ್ಥಿಕವಾಗಿ ಬೆಳೆದು ಹೆಚ್ಚುವರಿ ಸಂಪನ್ಮೂಲ, ಸಹಕಾರಿಯಲ್ಲಿ ಇದ್ದರೆ, ಅಂತಹ ಪ್ರಸಂಗದಲ್ಲಿ ನೌಕರರಿಗೆ ಆರ್ಥಿಕ ಸೌಲತ್ತು ಕೇಳಬಹುದು. ಸದಸ್ಯರಿಗಾಗಿ ಸಹಕಾರಿ – ನೌಕರಿಗಾಗಿ ಸಹಕಾರಿಯಲ್ಲ ಎಂಬುದನ್ನು ತಿಳಿಯಿರಿ.

---

## ಸೌಹಾರ್ದ ಸಹಕಾರಿಗಳಿಗೆ ಸಹಕಾರ ರತ್ನ ಪ್ರಶಸ್ತಿ

**ಕಳೆದ ಮಾಹೆ ಡಿಸೆಂಬರ್ 2024 ರ ಸಂಚಿಕೆಯಲ್ಲಿ ಈಗಾಗಲೇ 4 ಸೌಹಾರ್ದ ಸಹಕಾರಿಗಳಿಗೆ ನೀಡಿದ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರ ಪೋಟೋ ಹಾಗೂ ವಿವರ ಪ್ರಕಟಿಸಲಾಗಿದೆ. ಉಳಿದ 6 ಜನರ ವಿವರಗಳನ್ನು ಪ್ರಸಕ್ತ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ.**

ಕರ್ನಾಟಕ ರಾಜ್ಯ ಸಹಕಾರ ಪ್ರತಿಷ್ಠಿತ ಸಹಕಾರ ರತ್ನ ಪ್ರಶಸ್ತಿ 2024 ಇದನ್ನು ಸಹಕಾರ ಸಪ್ತಾಹದ ಸಂದರ್ಭದಲ್ಲಿ ದಿನಾಂಕ 18.11.2024ರಂದು ಬಾಗಲಕೋಟೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಭಾಗವಹಿಸಿದ ಸಂದರ್ಭದಲ್ಲಿ ನಡೆದ ಸಪ್ತಾಹದ ಆಚರಣೆಯಲ್ಲಿ ಈ ಕೆಳಕಂಡ ಸೌಹಾರ್ದ ಸಹಕಾರಿಗಳಿಗೆ ಸಹಕಾರ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.



**ಶ್ರೀ ಡಿ. ಸುಧಾಕರ್**
ಮಾನ್ಯ ಸಚಿವರು, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ಮಾನ್ಯ ಅಧ್ಯಕ್ಷರು, ಹೊಯ್ಸಳ ಪತ್ತಿನ ಸೌಹಾರ್ದ ಸಹಕಾರಿ ನಿ., ಚಿತ್ರದುರ್ಗ ಜಿಲ್ಲೆ



**ಶ್ರೀ ಸೈಯದ್ ಮೆಹಬೂಬ್‌ಪಾಷ**
ಮಾನ್ಯ ಅಧ್ಯಕ್ಷರು, ತುಮಕೂರು ನವಚೇತನ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ನಿ., ಚೆಳ್ಳಕೆರೆ, ತುಮಕೂರು ಜಿಲ್ಲೆ



**ಶ್ರೀ ಆರ್ ಮಲ್ಲೇಶಪ್ಪ**
ಮಾನ್ಯ ನಿರ್ದೇಶಕರು, ಚಳ್ಳಕೆರೆ ರೇವಣಸಿದ್ದೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಚಿತ್ರುದುರ್ಗ ಜಿಲ್ಲೆ



**ಶ್ರೀ ನವೀನ್ ಭಂಡಾರಿ**
ಮಾನ್ಯ ಅಧ್ಯಕ್ಷರು, ಸುಂದರರಾಮ್ ಶೆಟ್ಟಿ ನಗರ ಪತ್ತಿನ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಜಿಲ್ಲೆ



**ಶ್ರೀ ಲಕ್ಷ್ಮಿ ನಾರಾಯಣ್**
ಮಾನ್ಯ ಅಧ್ಯಕ್ಷರು, ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ತುಮಕೂರು ಜಿಲ್ಲೆ



**ಶ್ರೀ ದೊಡ್ಡಪ್ಪ ದೇಸಾಯಿ**
ಮಾನ್ಯ ಅಧ್ಯಕ್ಷರು, ಶ್ರೀ ಹೇಮರೆಡ್ಡಿ ಮಲ್ಲಮ್ಮ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಜಿಲ್ಲೆ.

# ಸಕಾರಾತ್ಮಕ ದೃಷ್ಟಿಕೋನ

ಶ್ರೀ ಧೀರೇಂದ್ರ ನಾಗರಗಳ್ಳಿ, ಸಮಾಜ ಹಿತ ಹಾಗೂ ವ್ಯಕ್ತಿತ್ವ ವಿಕಸನ ಚಿಂತಕರು

'ಸಕಾರಾತ್ಮಕ ದೃಷ್ಟಿಕೋನ' ಎನ್ನುವ ಸಂಯುಕ್ತ ಶಬ್ದದಲ್ಲಿ ಎರಡು ಶಬ್ದಗಳಿವೆ ಒಂದು ಸಕಾರಾತ್ಮಕ ಇನ್ನೊಂದು ದೃಷ್ಟಿಕೋನ. ಸಕಾರಾತ್ಮಕ ವೆಂದರೆ ಆರೋಗ್ಯವಂತ ವಿಚಾರ ಎಂದು ಹೇಳಬಹುದು. ಇನ್ನೂ ದೃಷ್ಟಿಕೋನವೆನ್ನುವದನ್ನು ಆಲೋಚನ ಪರಿ ಎಂದು ಹೇಳಬಹುದು.ಒಟ್ಟಾಗಿ ಸಕಾರತ್ಮಕ ದಷ್ಟಿಕೋನವೆಂದರೆ ಆರೋಗ್ಯವಾಗಿ ವಿಚಾರ ಮಾಡುವುದು ಎಂದು ಅರ್ಥ! ನಾವು ಹೋಟೆಲ್ ಗಳಿಗೆ ಹೋದಾಗ ಅಲ್ಲಿ ದುಡ್ಡು ಕೊಟ್ಟು ತೆಗೆದುಕೊಳ್ಳುವ ಊಟ–ತಿಂಡಿಯನ್ನು ತಿಂದು ಹೊಟ್ಟೆ ತುಂಬಿತು ಎಂದುಕೊಳ್ಳುತ್ತೇವೆ.ಅದರೆ ವಾಸ್ತವದಲ್ಲಿ ಹೊಟ್ಟೆ ತುಂಬಿರುವುದಿಲ್ಲ.ಹೊಟ್ಟೆ ತುಂಬಿತು ಎಂದು ಹೇಳುತ್ತಾ ಒಂದು ಸಜ್ಞೆಯನ್ನು ಮೆದುಳಿಗೆ ಕಳುಹಿಸಿರುತ್ತೇವೆ.ಹಾಗಾಗಿ ಹೊಟ್ಟೆ ತುಂಬಿಲ್ಲದಿದ್ದರೂ ಸಹಾ ಹೊಟ್ಟೆ ತುಂಬಿದೆ ಎಂದು ಹೇಳುವಂತೆ ಮನಸ್ಸನ್ನು ಅಣಿ ಮಾಡಿರುತ್ತೇವೆ.ಈಗ ಸಕಾರಾತ್ಮಕ ದೃಷ್ಟಿಕೋನಕ್ಕೆ ಇದೇ ಋಜಿಅಡಿಥಿಯನ್ನು ವಿಸ್ತರಿಸಿದರೆ ನಾವು ಎನನ್ನು ನಮ್ಮ ಮೆದುಳಿಗೆ ಹೇಳುತ್ತೇವೆಯೊ ಅದೇ ನಮ್ಮ ಸುತ್ತಲೂ ಪ್ರಭಾವಲವಾಗಿ ಮಾರ್ಪಾಟಾಗುತ್ತದೆ.

ಸಕಾರಾತ್ಮಕ ದೃಷ್ಟಿಕೋನಕ್ಕೆ ಮೂಲ ಸಕಾರಾತ್ಮಕ ವಿಚಾರಗಳು.ಸರಿ ಸುಮಾರು ದಿನವೊಂದಕ್ಕೆ 50000 ಕ್ಕೂ ಅಧಿಕ ವಿಚಾರಗಳು ನಮ್ಮ ಮೆದುಳಿನಲ್ಲಿ ಹರಿದು ಹೋಗುತ್ತವೆ ಎನ್ನುವುದು ಮನಃಶಾಸ್ತ್ರಜ್ಞರ ಲೆಕ್ಕಾಚಾರ.ಈ 50000 ಕ್ಕೂ ಅಧಿಕ ವಿಚಾರಗಳು ಸಕಾರಾತ್ಮಕ ಹಾಗೂ ನಕಾರಾತ್ಮಕ ಎರಡೂ ತರಹದ ವಿಚಾರಗಳನ್ನೂ ಹೊಂದಿರುತ್ತವೆ.ಈ ವಿಚಾರಗಳೇ ನಮ್ಮ ಆರೋಗ್ಯವನ್ನು ಪ್ರತಿಬಿಂಬಿಸುತ್ತವೆ.ಅಂದರೆ ನಮ್ಮ ಆರೋಗ್ಯ ಮತ್ತು ಅನಾರೋಗ್ಯ ಎರಡಕ್ಕೂ ನಮ್ಮ ವಿಚಾರಗಳೆ ಮೂಲ.ನಮ್ಮ ಶಾರೀರಿಕ ಆನಾರೋಗ್ಯಕ್ಕೆ ಶೇಕಡ 70ರಷ್ಟು ನಮ್ಮಲ್ಲಿರುವ ಚಿಂತೆಗಳೇ ಕಾರಣ ಇನ್ನೂಳಿದ ಶೇಕಡ 30ರಷ್ಟು ತೊಂದರೆಗಳಿಗೆ ನಮ್ಮ ಶರೀರಕ್ಕೊದಗಿಬರುವ ರೋಗಗಗಳು ಕಾರಣ. ಈಗಾಗಲೇ ಸ್ಪಷ್ಟ ಪಡಿಸಿರುವಂತೆ ಸಕಾರಾತ್ಮಕ ದೃಷ್ಟಿಕೋನಕ್ಕೆ ಮೂಲ ಸಕಾರತ್ಮಕ ವಿಚಾರಗಳು. ಈ ಸಕಾರಾತ್ಮಕ ಆಲೋಚನೆಗಳೆ ನಮ್ಮ ಯಶಸ್ಸಿನ ಮೂಲ ಮಂತ್ರ.

## ಸಂಕುಚಿತವೆನ್ನುವ ಮನೋಭಾವದಿಂದ ವಿಶಾಲ ಮನೋಭಾವಕ್ಕೆ

ಈ ವಿಷಯ ಮನಸ್ಥಿತಿಗೆ ಸಂಬಂಧಿಸಿದ್ದು.ಈ ಮನಸ್ಥಿತಿಯಲ್ಲಿರುವವರು ತಮ್ಮ ಪುಟ್ಟ ಪ್ರಪಂಚದಲ್ಲೆ ಮುಳುಗಿ ಅದರಾಚೆಯ ಪ್ರಪಂಚದಲ್ಲಿರುವ ಬೇರೆಯವರ ಭಾವನೆಗಳನ್ನು ಅರ್ಥಮಾಡಿಕೊಳ್ಳದೆ ಇರುವ ಪೂರ್ವಗ್ರಹದಲ್ಲಿಯೇ ಇರುತ್ತಾರೆ. ಇದನ್ನೇ 'ಸಂಕುಚಿತ ಮನೋಭಾವ' ವೆನ್ನುತ್ತಾರೆ.ಈ ಮನಸ್ಥಿತಿಯವರು ಸದಾಕಾಲ ತಾವೆ ಅಱಡಿಜಡಿಥಿಱ ,ತಮ್ಮ ಅಭಿಪ್ರಾಯವೆ Corerct ಎನ್ನವಂತೆಯೆ ಬದುಕುತ್ತಿರುತ್ತಾರೆ.ಇದೇಷ್ಟೆ ಅಲ್ಲ ಈ ತರಹ ಮನಸ್ಥಿತಿಯನ್ನು ಹೊಂದಿರುವವರು ಬೇರೆಯವರ ಯಾವುದೆ ಅಭಿಪ್ರಾಯಗಳು ಭಾವನೆಗಳು ದೃಷ್ಟಿಕೋನಗಳು ಸರಿ ಎಂದು ಒಪ್ಪುವುದೇ ಇಲ್ಲ.

**ಸಂಕುಚಿತ ಮನೋಭಾವದವರ ಗುಣ–ಲಕ್ಷಣಗಳು :** ಸಹಜವಾಗಿ ಈ ತರಹದ ಮನಸ್ಥಿತಿ ಇರುವವರಲ್ಲಿ ಕೆಳಗಿನ ಲಕ್ಷಣಗಳನ್ನು ಕಾಣುತ್ತೇವೆ:

- ತಾವೆ Corerct ಮತ್ತು ತಮ್ಮ ಅಭಿಪ್ರಾಯವೆ Corerct ಎನ್ನುವುದು
- ಬೇರೆಯವರ ಯಾವುದೆ ಅಭಿಪ್ರಾಯಗಳು, ಭಾವನೆಗಳು, ದೃಷ್ಟಿಕೋನಗಳು ಸರಿ ಎಂದು ಒಪ್ಪದೇ ಇರುವುದು
- ಬೇರೆಯವರ ಅಭಿಪ್ರಾಯಗಳು ಭಾವನೆಗಳು ದೃಷ್ಟಿಕೋನಗಳು ತಮಗೆ. Corerct ಅನ್ನಿಸಿದಗ್ಯೂ ಅದರಲ್ಲಿ ಏನಾದರೊಂದು ತಪ್ಪು ಹುಡುಕುವುದು
- ಇನ್ನೊಬ್ಬರ ಸಾಧನಗಳು ಸಾಧನೆಯೇ ಅಲ್ಲ ಅನ್ನುವುದು
- ಯಾವುದೇ ಎದುರಾಳಿಯ ಬಗ್ಗೆ ಒಂದು ತರಹದ ದ್ವೇಷವನ್ನು ಹೊಂದಿರುವುದು

ಈ ತರಹದ ವ್ಯಕ್ತಿಗಳು ನೇರವಾದ ಅಪಾಯಕ್ಕೆ ಕಾರಣವಾಗದೆ ಹೋದರು ಪರೋಕ್ಷ ದಾಳಿಗಳಲ್ಲಿ ಸದಾ ಮುಳುಗಿರುತ್ತಾರೆ.ಆ ದಾಳಿಯು Negatvie comments ಆಗಿರಬಹುದು ಅಥವಾ ಧೃತಿಗೆಡಿಸುವುದಾಗಿರಬಹುದು.ಈ ತರಹದ ವ್ಯಕ್ತಿಗಳಿಂದ ಒಂದು ಹಂತದ ಅಂತರವನ್ನು ಕಾಪಾಡಿಕೊಳ್ಳುವುದೇ ಉತ್ತಮ.


## ಸೋಷಿಯಲ್ ಕೊಷೆಂಟ್

ನಾವು ಈಗಾಗಲೆ Intellgiene quotient(IQ) ಮತ್ತು Emotional quotient(EQ) ಏನು ಎನ್ನುವುದನ್ನು ಅರ್ಥ ಮಾಡಿಕೊಂಡಿದ್ದೇವೆ. Intellgiene quotient(IQ) ಎನ್ನುವುದು ಒಬ್ಬ ವ್ಯಕ್ತಿಯ ಬುದ್ಧಿಮತ್ತೆಯ ಮಾನದಂಡವಾದರೆ Emotional quotient(EQ) ಕಾಲ–ಕಾಲಕ್ಕೆ ನಮಗೊದಗಿ ಬರುವ ದುಖ–ಃ,,ಸಂಕಟ,ವೇದನೆಗಳನ್ನು ನಿರ್ವಹಿಸುತ್ತಲೆ ಅವಲ್ಲವನ್ನು ಸಕರಾತ್ಮಕವಾಗಿ ದುಡಿಸಿಕೊಂಡು ಒತ್ತಡದಿಂದ ಮುಕ್ತವಾಗುವುದು ಎಂದು ಹೇಳಬಹುದು. ಆದರೆ ಏನಿದು ಸೋಷಿಯಲ್ ಕೋಷೆಂಟ್(Social Quotient) (SQ)? ಇದು ಒಬ್ಬ ವ್ಯಕ್ತಿಯ ಸಮಾಜಿಕ ಕೌಶಲ್ಯದ ಬುದ್ಧಿಮತ್ತೆಯ ಮಾನದಂಡ. ಅಂದರೆ ವ್ಯಕ್ತಿಯು ತಾನು ಯಾವ ರೀತಿಯಲ್ಲಿ ತನ್ನ ಸಮಾಜಿಕ ಸಂಬಂಧಗಳನ್ನು ನಿಭಾಯಿಸಿತ್ತಾನೆ. ಇದನ್ನೆ ನಾವು ಸಾಮಾಜಿಕ ಜೀವನದಲ್ಲಿನ ಪರಿಸ್ಥಿತಿಯ ನಿಭಾಯಿಸುವುಕೆ ಎಂದು ಹೇಳಬಹುದು.

4ನೇ ಪುಟಕ್ಕೆ.....

# ಸಂಭ್ರಮದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮಂಡ್ಯ : ಪ್ರಮುಖ ವಿದ್ಯಾಮಾನಗಳು ಹಾಗೂ ನಿರ್ಣಯಗಳು.

ಸಂಗ್ರಹ : ಶ್ರೀ ಶಂಕರ ಎಸ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.



ದಿನಾಂಕ 20.12.2024 ರಂದು ಸಕ್ಕರೆ ನಾಡು ಮಂಡ್ಯದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹತ್ಯ ಸಮ್ಮೇಳನವನ್ನು ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಸಿದ್ಧರಾಮಯ್ಯ ಇವರು ಉದ್ಘಾಟನೆ ಮಾಡಿದರು.

ಈ ಸಂದರ್ಭದಲ್ಲಿ ಸಮ್ಮೇಳನಾಧ್ಯಕ್ಷರಾದ ಗೊ.ರು ಚನ್ನಬಸಪ್ಪ, ಕಸಾಪ ಅಧ್ಯಕ್ಷ ಮಹೇಶ ಜೋಶಿ, ಅದಿಚುಂಚನಗಿರಿ ಮಹಾಸಂಸ್ಥಾನ ಮಠ ಪೀಠಾಧ್ಯಕ್ಷ ಶ್ರೀ ನಿರ್ಮಾಲಾನಂದನಾಥ ಸ್ವಾಮೀಜಿ, ವಿಧಾನಸಭಾ ಸ್ಪೀಕರ್ ಯು.ಟಿ ಖಾದರ್, ಜಿಲ್ಲಾ ಉಸ್ತುವಾರಿ ಸಚಿವರೂ ಆದ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಎನ್. ಚಲುವರಾಯಸ್ವಾಮಿ, ಸಚಿವರಾದ ಶಿವರಾಜ್ ತಂಡಗಿ, ಎಸ್.ಸಿ ಮಹಾದೇವಪ್ಪ ಸೇರಿದಂತೆ ಸ್ಥಳೀಯ ಶಾಸಕರು, ಜಿಲ್ಲಾಧಿಕಾರಿ, ಪೋಲೀಸ್ ವರಿಷ್ಠಾಧಿಕಾರಿ ಮತ್ತು ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಈ ಬಾರಿಯ ಸಮ್ಮೇಳನದಲ್ಲಿ ಅಧ್ಯಕ್ಷರ ಮೆರವಣಿಗೆಗೆ ಅರಮನೆ ದರ್ಬಾರ್ ಸಿಂಹಾಸನ ಒಳಗೊಂಡ ಭವ್ಯ ರಥವನ್ನು ಸಿದ್ಧಗೊಳಿಸಲಾಗಿತ್ತು. ಸಮ್ಮೇಳನಾಧ್ಯಕ್ಷ ಗೊ.ರು. ಚನ್ನಬಸಪ್ಪ ಅವರು ಮೆರವಣಿಗೆಯ ಕೇಂದ್ರ ಬಿಂದು, ಭಾಗವಹಿಸುವ ಎಲ್ಲಾ ಕನ್ನಡಾಭಿಮಾಗಳಿಗೆ ಸಮ್ಮೇಳನಾಧ್ಯಕ್ಷರು ಕಾಣುವಂತೆ ರಥದ ಮಧ್ಯಭಾಗದಲ್ಲಿ ಕೆಂಪು ಮತ್ತು ಬಂಗಾರದ ಬಣ್ಣದ ಸಿಂಹಾಸನವನ್ನು ವಿನ್ಯಾಸ ಮಾಡಿದ್ದು. ಮೇಲೆ ಅಲಂಕೃತ ಛತ್ರಿಯನ್ನು ಅಳವಡಿಸಲಾಗಿದೆ. ಸಿಂಹಾಸನದ ಪಕ್ಕ ನವಿಲು ಮತ್ತು ಮುಂಭಾಗ ಸಿಂಹಗಳ ಮೂರ್ತಿಗಳನ್ನು ಜೋಡಿಸಲಾಗಿತ್ತು.

**ಲಾರಿ ಚಾಸಿ ಬಳಕೆ :** ಮೈಸೂರಿನಿಂದ ಲಾರಿ ಚಾಸಿ ತರಿಸಿ, ಅದಕ್ಕೆ ಫ್ರೇಮ್ ಅಳವಡಿಸಿ, ಫೈಬರ್, ಪ್ಲೈವುಡ್‌ಗಳನ್ನು ಜೋಡಿಸಿ ರಥ ನಿರ್ಮಿಸಲಾಗಿತ್ತು. ಕೆಂಪು, ಹಳಸಿ, ಬಂಗಾರದ ವರ್ಣಗಳಿಂದ ರಥಕ್ಕೆ ಮೆರುಗು ನೀಡಲಾಗಿತ್ತು. ರಥಧ ಸುತ್ತ ಹೊಯ್ಸಳ ಶೈಲಿಯ ಶಿಲ್ಪಕಲಾ ಮಾದರಿಯ ವಿನ್ಯಾಸ ಮಾಡಲಾಗಿತ್ತು.

ರಥದ ಮುಂಭಾಗದಲ್ಲಿ ಮಂಡ್ಯದ ಜೀವನದಿ 'ಕಾವೇರಿ' ಮಾತೆಯ ಅಳವಡಿಸಲಾಗಿತ್ತು. ರಥದ ಎಡಬದಿಯಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಭಾವಚಿತ್ರಗಳು, ಬಲಬದಿಯಲ್ಲಿ ಏಳು ತಾಲ್ಲೂಕುಗಳ ಪ್ರವಾಸಿ ತಾಣಗಳ ದೃಶ್ಯಗಳನ್ನು ಜೋಡಿಸಲಾಗಿದೆ ಹಿಂಭಾಗದಲ್ಲಿ ಭುವನೇಶ್ವರಿ ಪ್ರತಿಮೆ ರಾರಾಜಿಸುತ್ತಿತ್ತು.

**88 ಕಲಾ ಪ್ರಕಾರಗಳು :** ಮೆರವಣಿಗೆಯಲ್ಲಿ ಹಗಲುವೇಷ, ಮಹಿಳಾ ವೀರಗಾಸೆ, ಗೊರವರ ಕುಣಿತ, ಲಂಬಾಣಿ ನೃತ್ಯ, ಜಗ್ಗಲಿಗೆ ಮೇಳ, ಕಂಸಾಳೆ, ಕರಗ, ಚಿಲಿಪಿಲಿಗೊಂಬೆ, ಜೋಗತಿ ನೃತ್ಯ, ಹಾಲಕ್ಕಿ ಸುಗ್ಗಿಕುಣೀತ, ಕರಡಿ ಮಜಲು, ಕೋಲಾಟ, ಯಕ್ಷಗಾನ ವೇಷ ಸೇರಿದಂತೆ ಒಟ್ಟು 88 ಕಲಾಪ್ರಕಾರಗಳು ಮೇಳೈಸಿದವು.

ತಮಿಳುನಾಡಿನ ಕರಗಂ, ಮಧ್ಯಪ್ರದೇಶದ ಬುಡಕಟ್ಟು ನೃತ್ಯ, ಬಧಾಯಿ ಮತ್ತು ನೋರಾ, ಪಂಜಾಬ್‌ನ ಭಾಂಗ್ರಾ, ಒಡಿಶಾದ ಸಂಬಲ್ಪುರಿ ಮತ್ತು ಧಾಪ್ ಬುಡಕಟ್ಟು ನೃತ್ಯ ಕಲಾವಿದರ ಭಾಗವಹಿಸುತ್ತಿರುವುದು ಈ ಬಾರಿಯ ವಿಶೇಷ. ಜೊತೆಗೆ 10 ಸ್ತಬ್ಧಚಿತ್ರಗಳು, ಪೋಲೀಸ್ ಬ್ಯಾಂಡ್, ಸ್ಕೌಟ್ಸ್ ಗೈಡ್ಸ್, ಭಾರತ ಸೇವಾದಳ ಅಶ್ವದಳ, 5 ಟಾಂಗಾಗಳು ಸಾಗಿದವು.

ಕನ್ನಡ ಶಾಲೆಗಳ ಉಳಿವಿಗಾಗಿ ಗೋಕಾಕ್ ಮಾದರಿಯಲ್ಲಿಯೇ ರಾಜ್ಯದಲ್ಲಿ ಮತ್ತೊಂದು ಜನಾಂದೋಲನವೇ ನಡೆಯಬೇಕಿದೆ ಎಂಬ ಕಹಳೆಯನ್ನು ಮಂಡ್ಯದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮೊಳಗಿಸಿದೆ.

3 ದಿನ ನಡೆದ ನುಡಿಜಾತ್ರೆಯಲ್ಲಿ ನಿತ್ಯವೂ ಯಾವುದಾದರೊಂದು ಗೋಷ್ಠಿಯಲ್ಲಿ, ಮಳಿಗೆಗಳ ಹರಟೆಯಲ್ಲಿ, ಕನ್ನಡಿಗರ ಮುಖಾಮುಖಿ ಚರ್ಚೆಯಲ್ಲಿ ಬಹುವಾಗಿ ಕಾಡಿದ್ದು, ಪ್ರತಿಧ್ವನಿಸಿದ್ದು ಕನ್ನಡ ಮಾಧ್ಯಮ ಶಾಲೆಗಳ ಸಬಲೀಕರಣ ಕುರಿತು ಕಳಕಳಿಯ ಮಾತುಗಳೇ ಕೇಳಿಬಂದವು.

ಮೊದಲ ದಿನವೇ ಸರ್ವಾಧ್ಯಕ್ಷತೆಯ ಪೀಠದಿಂದ ಮಾತನಾಡಿದ ಜನಪರ ವಿದ್ವಾಂಸ ಗೊ.ರು. ಚನ್ನಬಸಪ್ಪ ಅವರು 10ನೇ ತರಗತಿವರೆಗೆ ಕನ್ನಡ ಮಾಧ್ಯಮವನ್ನೇ ಕಡ್ಡಾಯಗೊಳಿಸಿ ಎಂದು ಮುಖ್ಯಮಂತ್ರಿಯನ್ನು ಪಕ್ಕದಲ್ಲಿ ಕೂರಿಸಿಕೊಂಡೇ ಅಪ್ಪಣೆ ಕೊಡಿಸಿದರು. ನಂತರ ಎಲ್ಲೆಡೆ ಇಂಥಾ ಮಾತುಗಳೇ ಅನುರಣಿಸಿದವು. 3ನೇ ದಿನ ಈ ಕೆಳಗಿನ ನಿರ್ಣಯಗಳನ್ನು ತೆಗೆದಿಕೊಳ್ಳಲಾಯಿತು.

**ಪ್ರಮುಖ ನಿರ್ಣಯಗಳು :**

1. ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ-2022ರ ಎಲ್ಲ ಉಪಬಂಧಗಳು ಮತ್ತು ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ

ಅಧಿನಿಯಮವು ಜಾರಿಗೆ ಬರಬೇಕಿದ್ದು. ಕೊಡಲೇ ಅನುಷ್ಠಾನ ಆಗಬೇಕು. ಸ್ವಾಯತ್ತತೆ ಹೊಂದಿರುವ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾಯಿತ ಅಧ್ಯಕ್ಷರನ್ನು ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ 2022ರ ರಾಜ್ಯ ಮಟ್ಟದ ಸಮಿತಿಯ ಉಪಾಧ್ಯಕ್ಷರಾಗಿಸಲು ತಿದ್ದುಪಡಿ ಆಗಲಿ.

2. ರಾಜ್ಯದಲ್ಲಿರುವ ಎಲ್ಲ ಸರ್ಕಾರಿ ಕನ್ನಡ ಶಾಲೆಗಳಿಗೆ ಕಟ್ಟಡ, ವಾಚನಾಲಯ, ಆಟದ ಮೈದಾನ ಸೇರಿದಂತೆ ಇತರ ಮೂಲಸೌಕರ್ಯಗಳನ್ನು ಒದಗಿಸುವ ಮತ್ತು ಖಾಲಿ ಇರುವ ಶಿಕ್ಷಕರ ಹುದ್ದೆಗಳಿಗೆ ನೇಮಕಾತಿಯ ಕ್ರಮಕ್ಕೆ ಸರ್ಕಾರ ತ್ವರಿತ ಕ್ರಮ ಕೈಗೊಳ್ಳಬೇಕು. ಕನ್ನಡೇತರ ಶಾಲೆಗಳಿಗೆ ಕನ್ನಡ ಶಿಕ್ಷಕರನ್ನು ಕಡ್ಡಾಯವಾಗಿ ನೇಮಕ ಮಾಡಬೇಕು.
3. ಕನ್ನಡ ಅನ್ನದ ಭಾಷೆಯಾಗಲು ಕನ್ನಡಿಗರ ಉದ್ಯೋಗಕ್ಕೆ ತಡೆಯಾಗಿ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಸರ್ಕಾರ ಸಮರ್ಪಕವಾಗಿ ಎದುರಿಸಬೇಕು. ಸರೋಜಿನ ಮಹಿಷಿ ವರದಿ ಶಾಸನಬದ್ಧ ಅನುಷ್ಠಾನವಾಗಲಿ.
4. ದಾವಣಗೆರೆಯಲ್ಲಿ ನಡೆಯಬೇಕಿರುವ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಕಸಾಪ ಸಹಯೋಗದೊಂದಿಗೆ ಶೀಘ್ರ ನಡೆಯಲಿ.
5. ರಾಜ್ಯ ಸರ್ಕಾರವು ರಾಷ್ಟ್ರಕವಿಯನ್ನು ಅತೀ ಶೀಘ್ರದಲ್ಲಿ ಘೋಷಿಸಬೇಕು.
6. ಕನ್ನಡ ಮಾಧ್ಯಮ ಶಾಲೆಗಳನ್ನು ಸಬಲೀಕರಣಗೊಳಿಸಿ.

ಅತ್ಯಂತ ಸಂಭ್ರಮ ಹಾಗೂ ವಿಭ್ರಂಜಣೆಯಿಂದ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕನ್ನಡದ ಕಂಪು ಅನ್ನು ವಿಶ್ವದಾದ್ಯಂತ ಹರಡುವಂತಾಗಲಿ.

**ಕನ್ನಡವೇ ಸತ್ಯ – ಕನ್ನಡವೇ ನಿತ್ಯ.**

.....39ನೇ ಪುಟದಿಂದ

**ಈ ಕೆಳಗಿನ ಕೆಲವು ಉದಾಹರಣೆಗಳನ್ನು ಗಮನಿಸಿ:**

– ಆಫಿಸ್ನ ಒಂದು ಮುಖ್ಯವಾದ ಮೀಟಿಂಗ್ ನಲ್ಲಿ ನಾವು ಭಾಗವಹಿಸಿದ್ದೇವೆ, ಅಂತಹ ಮೀಟಿಂಗ್ ನಲ್ಲಿ ಯಾವು ಸಂದರ್ಭದಲ್ಲಿ ಮಾತಾಡಬೇಕು ಮತ್ತು ಯಾವ ಸಂದರ್ಭದಲ್ಲಿ ಸುಮ್ಮನಿರಬೇಕು ಎನ್ನುವುದೇ ಸೋಷಿಯಲ್ ಕೊಷೆಂಟ್

– ಮನೆ ಹತ್ತಿರದ ನೆರೆಹೊರೆಯವರಲ್ಲಿ ಜಟಾಪಟಿ ನಡೆದಾಗ ಯಾವ ರೀತಿ ಆ ಸಂದರ್ಭವನ್ನು ನಿಭಾಯಿಸುತ್ತೇವೆ ಎನ್ನುವುದೇ ಎನ್ನುವುದೇ ಸೋಷಿಯಲ್ ಕೊಷೆಂಟ್

– ಮೂರನೆಯವರ ಭಾವನೆಗಳನ್ನು ಅರ್ಥ ಮಾಡಿಕೊಂಡು ಪರಿಸ್ಥಿತಿಗನುಗುಣವಾಗಿ ವರ್ತಿಸುವುದೇ ಎನ್ನುವುದೇ ಸೋಷಿಯಲ್ ಕೊಷೆಂಟ್

ಸಹಜವಾಗಿ ಈ ಸೋಷಿಯಲ್ ಕೊಷೆಂಟ್ ಎನ್ನುವುದನ್ನು – Friendliness with a purpose ಎಂದು ಕರೆಯುತ್ತಾರೆ.ತುಂಬಾ ಉತ್ತಮವಾದ ಸೋಷಿಯಲ್ ಕೊಷೆಂಟ್ ಅಳವಡಿಸಿಕೊಂಡರೆ ಅಥವಾ ಕಾಲನಂತರದಲ್ಲಿ ವೃದ್ಧಿಸಿಕೊಂಡರೆ ಉತ್ತಮ ಸಂಬಂಧಗಳನ್ನು ಬೆಳೆಸಲು, ತಂಡದಲ್ಲಿ ಕೆಲಸ ಮಾಡುವಾಗ ಒತ್ತಡವನ್ನು ನಿಭಾಯಿಸಲು, ಘರ್ಷಣೆಗಳನ್ನು ಶಮನಗೊಳಿಸಲು ಸಹಕಾರಿಯಾಗುತ್ತದೆ.

## ಒಂದು ಕೆಲಸವು ಅಭ್ಯಾಸವಾಗಿ ಮಾರ್ಪಾಡಗಲು

ನಸುಕಿನಲ್ಲಿ ಎದ್ದು Work out ಗೆ ಓಡುವುದೆ ಆಗಿರಲಿ ಅಥವಾ ನಸುಕಿನಲ್ಲಿ ಎದ್ದು ಅಭ್ಯಾಸಕ್ಕೆ ಕುಳಿತುಕೊಳ್ಳುವುದಾಗಿರಲಿ ಅಥವಾ ಇಂತಹ ಇನ್ನು ಯಾವುದೆ ಕೆಲಸಗಳೆ ಆಗಿರಲಿ ಅವೆಲ್ಲವನ್ನೂ ಮುಂದುವರೆಸುವುದು ಸುಲಭದಿ ಆಗಿ ಬರುವುದಿಲ್ಲ.ಹೀಗೆ ಈ ತರಹದ ಇನ್ನೂ ಹತ್ತಾರು ಕೆಲಸಗಳಿಗೆ ನಮ್ಮ ಮನಸ್ಸು ಅಣಿಯಾಗುವುದೆ ಇಲ್ಲ. ಮನಸ್ಸು ಅಣಿಯಾದರೂ ಸಹ ನಾವು ಕೆಲಸವನ್ನು ಕೇವಲ ಕೆಲವೆ ದಿನಗಳಲ್ಲಿ ಮೊಟಕುಗೊಳಿಸಿರುತ್ತೇವೆ.ಮೇಲಿನ ಉದಾಹರಣೆಗಳನ್ನೆ ತೆಗೆದುಕೊಂಡು ನೋಡುವುದಾದರೆ, ಕೆಲವು ದಿನಗಳನ್ನು ಶ್ರದ್ಧೆಯಿಂದ ಮಾಡಿ ಮುಗಿಸಿರುತ್ತೇವೆ. ಆದರೆ ನಂತರದ ದಿನಗಳಲ್ಲಿ ಯಾವುದೊ ಒಂದು ಕಾರಣವನ್ನು (ಕಾರಣವಾಗದ ಕಾರಣ) ಕೊಟ್ಟು ಕೆಲಸವನ್ನು ಮುಂದುವರೆಸುವುದಿಲ್ಲ. ನಾವು ಕೆಲಸವನ್ನು ಪ್ರಾರಂಭಿಸಿರುತ್ತೇವೆ ಒಂದೆರೆಡು ದಿನಗಳನ್ನು ಮುಗಿಸಿರುತ್ತೇವೆ. ಆದರೆ ಆ ಕೆಲಸವು ಅಭ್ಯಾಸವಾಗಿ ಮಾರ್ಪಾಡಾಗಲು ಮುಂದಿನ ಕೆಲಸವು ದಿನಗಳು ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ವಿಪರ್ಯಾಸವೆಂದರೆ ಆ ಸಮಯದಲ್ಲಿಯೆ ನಾವು ಕೈಚೆಲ್ಲಿ ಕುಳಿತಿರುತ್ತೇವೆ. ಅದೆ ಸಮಯವೆ ಕೆಲಸವು ಸರಿಯಾಗಿ ಅಭ್ಯಾಸವಾಗಿ ಬದಲಾಗುವ ಸಮಯ.ಹೌದು, ಕೆಲಸವು ಅಭ್ಯಾಸವಾದ ಬಳಿಕ Routine ಆಗುತ್ತದೆ ಮತ್ತು ಅಲ್ಲಿ ಇಷ್ಟಾನಿಷ್ಟಗಳಿಗೆ ಜಾಗವಿರುವುದಿಲ್ಲ.ನಂತರದ ದಿನಗಳಲ್ಲಿ ಪದೆ–ಪದೆ ಪುನಾರವರ್ತನೆಯಂತೆ ಮಾಡಿದ ಕೆಲಸವನ್ನು ಮತ್ತೆ–ಮತ್ತೆ ಮಾಡುವುದರಿಂದ 'ಕಲಿಕೆಯು ಸ್ಥಿರವಾಗಿರುತ್ತದೆ'.

ಒಂದು ಸಣ್ಣ '21/90 Rule' ಎನ್ನುವ ತಂತ್ರವನ್ನು ಅನುಸರಿಸಿದರೆ ಕೆಲಸವು ಅಭ್ಯಾಸವಾಗಿ ಬದಲಾಗುತ್ತದೆ.ಅಷ್ಟೆ ಅಲ್ಲದೆ ಆ ಅಭ್ಯಾಸವು ಖಾಯಂ ಆಗಿ ಉಳಿಯುತ್ತದೆ. ಯಾವುದೆ ಕೆಲಸವನ್ನೆ ಆಗಲಿ ಬಿಟ್ಟು ಬಿಡದಂತೆ 21 ದಿನಗಳ ವರೆಗೆ ಮುಂದುವರೆಸಿದರೆ ಕೆಲಸವು ರೂಢಿಯಾಗುತ್ತದೆ .ಅದೆ ರೀತಿ 90 ದಿನಗಳ ವರೆಗೂ ಮುಂದುವರೆಸಿದ್ದೆ ಆದರೆ ಖಾಯಂ ಆಗಿ ಉಳಿದಿರುತ್ತದೆ.

ಮುಗಿಸುವುದಕ್ಕೂ ಮೊದಲು, ಯಾವುದೆ ಕೆಲಸವಾಗಿರಲಿ ಅದನ್ನು 21 ದಿನಗಳನ್ನು ಬಿಟ್ಟು ಬಿಡದೆ ಮಾಡುವುದರಿಂದ ಅಭ್ಯಾಸವಾಗುತ್ತದೆ ಹಾಗೆಯೆ 90 ದಿನಗಳವರೆಗೂ ಮುಂದುವರೆಸಿದರೆ ಖಾಯಂ ಆಗಿ ಉಳಿದುಬಿಡುತ್ತದೆ.

71ನೇ ಅಖಿಲ ಭಾರತ ಸಹಕಾರ ಸಪ್ತಾಹ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಪ್ರಬಂಧ

# ಸಹಕಾರ ಸಚಿವಾಲಯದ ನೂತನ ಪ್ರಯತ್ನಗಳ ಮೂಲಕ ಸಹಕಾರ ಚಳುವಳಿಯನ್ನು ಬಲಪಡಿಸುವುದು

– ಶ್ರೀ ಮಹೇಶ ಕಿಳ್ಳಿಕ್ಯಾತರ, ಶಾಖಾ ವ್ಯವಸ್ಥಾಪಕರು, ವಿಕಾಸ ಸೌಹಾರ್ದ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಹುಬ್ಬಳ್ಳಿ ಶಾಖೆ.

**ಪೀಠಿಕೆ :** ವಸುಧೈವ ಕುಟುಂಬಕಂ ಸಿದ್ಧಾಂತದ ಮೇಲೆ ಬದುಕಿರುವ ಭಾರತ ದೇಶಕ್ಕೆ ಸಹಕಾರ ಎಂಬುದು ರಕ್ತಗತವಾಗಿ ಬಂದ ಮಾನವತಾವಾದದ ಶ್ರೇಷ್ಠ ಗುಣವಾಗಿದೆ. ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ಸಹಕಾರ ತತ್ವವು ಇನ್ನಿಲ್ಲದಂತೆ ತನ್ನ ಪ್ರಭಾವವನ್ನು ಎಲ್ಲ ವರ್ಗಗಳ ಮೇಲೂ ಬೀರಿದೆ. ಇತ್ತೀಚೆಗೆ ಕೇಂದ್ರ ಸರ್ಕಾರವು ಸಹಕಾರ ಚಳುವಳಿಯನ್ನು ಬಲಪಡಿಸಲು, ಅಮೂಲಾಗ್ರ ಬದಲಾವಣೆಗಳನ್ನು, ಸುಧಾರಣೆಗಳನ್ನು ತರಲು ಪ್ರತ್ಯೇಕ ಆಡಳಿತಾತ್ಮಕ, ಕಾನೂನಾತ್ಮಕ ಮತ್ತು ಕಾರ್ಯವೈಖರಿಯ ನೀತಿ ಚೌಕಟ್ಟನ್ನು ಒದಗಿಸಲು ಪ್ರತ್ಯೇಕವಾದ ಸಹಕಾರ ಸಚಿವಾಲಯವನ್ನು ದಿನಾಂಕ 6 ಜುಲೈ 2021 ರಂದು ಪ್ರಾರಂಭಿಸಿದೆ. ಕೂಡಿ ಬಾಳುವ, ಕುಟುಂಬ ವ್ಯವಸ್ಥೆಯನ್ನು ಹೊಂದಿರುವ ಭಾರತೀಯರಿಗೆ ಸಹಬಾಳ್ವೆಯ ಸೂತ್ರಗಳಲ್ಲಿ ನಮ್ಮ ಸಹಕಾರಿ ಕ್ಷೇತ್ರವೂ ಒಂದೆಂದು ಹೇಳಬಹುದು. ಇಷ್ಟೆಲ್ಲ ಗಣನೀಯ ಪ್ರಮಾಣದ ಅಭಿವೃದ್ಧಿಶೀಲ ಗುಣಗಳಿದ್ದರೂ ಸಹಕಾರ ಕ್ಷೇತ್ರ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಕೈಯಲ್ಲಿ ಸಿಲುಕಿ ಸ್ವಜನಪಕ್ಷಪಾತ, ಅತಿಯಾದ ಲೋಭ, ಮೋಸ, ವಂಚನೆ ಮತ್ತು ಆಡಳಿತ ದುರುಪಯೋಗದಿಂದ ಸಮಾಜದ ಕಟ್ಟ ಕಡೆಯ ವ್ಯಕ್ತಿಗೆ ಇದರ ಲಾಭ ದೊರೆಯುತ್ತಿಲ್ಲವೆಂಬುದನ್ನು ಮನಗಂಡ ಕೇಂದ್ರ ಸರ್ಕಾರ ಎಲ್ಲರನ್ನೂ ಒಳಗೊಂಡ ಮತ್ತು ಜಾತಿಭೇದ, ವರ್ಗಭೇದವಿಲ್ಲದ ಸಹಕಾರ ಸಂಘಗಳು ಮನುಕುಲದ ಒಳಿತಿಗಾಗಿ ಹುಟ್ಟಿಬರಲಿ ಎಂಬ ಆಶಯದಿಂದ ಹಾಗೂ ಅವ್ಯವಹಾರಗಳನ್ನು ತಡೆದು ಮುಗ್ಧರಿಗಾಗುತ್ತಿರುವ ಅನ್ಯಾಯವನ್ನು ತಡೆಯಲು, ಕೆಲವು ಸಹಕಾರ ಸಂಘಗಳ ಅಕ್ರಮಗಳಿಗೆ ನಿಯಂತ್ರಣ ಹೇರಲು ಧೀಟ್ಟ ನಿಲುವಿನಿಂದ ಸಹಕಾರ ಸಚಿವಾಲಯವನ್ನು ಜಾರಿಗೆ ತಂದಿದೆ.

ಕೇಂದ್ರ ಸರ್ಕಾರವು ಇಲ್ಲಿಯವರೆಗೂ ಕೃಷಿ ಇಲಾಖೆಯ ಆಧೀನದಲ್ಲಿದ್ದ ಸಹಕಾರ ಕ್ಷೇತ್ರವನ್ನು ಪ್ರತ್ಯೇಕಗೊಳಿಸಿ 'ಸಹಕಾರ್ ಸೆ ಸಮೃದ್ಧಿ' ಎಂಬ ಘೋಷವಾಕ್ಯದೊಂದಿಗೆಸಹಕಾರ ಸಚಿವಾಲಯವನ್ನು ಪ್ರಾರಂಭಿಸಿದೆ.ಇದು ದೇಶದ ಎಲ್ಲ ವರ್ಗಗಳಿಗೆ ಉತ್ತಮ ಜೀವನ ಕಲ್ಪಿಸಲು ಮತ್ತು ಗುಣಮಟ್ಟದ ಬದುಕು ಪ್ರತಿನಿಧಿಸಲು ಸಹಕಾರಿಯಾಗುವಂತೆ ಉನ್ನತ ಮಟ್ಟದ ಸಮಿತಿಗಳನ್ನು ರಚಿಸಿ ಸಹಕಾರಿ ಕ್ಷೇತ್ರದಲ್ಲಿ ಗಮನಾರ್ಹ ಬದಲಾವಣೆಗಳನ್ನು, ಸುಧಾರಣೆಗಳನ್ನು ತರುವ ಕಾರ್ಯ ಕೈಗೊಂಡಿದೆ.

ಸಹಕಾರ ಸಚಿವಾಲಯವು ದೇಶದ ಸಹಕಾರ ಕ್ಷೇತ್ರದ ಸ್ಥಿತಿಗತಿಗಳನ್ನು ಅರಿತು ಸಹಕಾರಿ ಸಂಸ್ಥೆಗಳನ್ನು ಆರ್ಥಿಕ, ಸಾಮಾಜಿಕವಾಗಿ ಬಲಪಡಿಸಲು ಮತ್ತು ಸಮಗ್ರತೆಗೆ ಉತ್ತೇಜನ ನೀಡಲು, ಸಹಕಾರ ಸಂಘಗಳ ವ್ಯವಹಾರವನ್ನು ಇನ್ನೂ ತಳ ಸಮುದಾಯಗಳ ವರೆಗೆ ತಲುಪಿಸಲು, ಸಹಕಾರಿಗಳ ಆರ್ಥಿಕ ಚಟುವಟಿಕೆಗಳನ್ನು ವೃದ್ಧಿಸಲು, ಪರ್ಯಾಯ ಮಾರ್ಗೋಪಾಯಗಳ ಮೂಲಕ ಆದಾಯ ಹೆಚ್ಚಿಸಲು, ವ್ಯವಹಾರವನ್ನು ಸರಳೀಕರಣಗೊಳಿಸಲು, ಆಡಳಿತದಲ್ಲಿ ಆಧುನೀಕರಣ ತರಲು, ತಂತ್ರಜ್ಞಾನದ ಬಳಕೆಯಿಂದ ಸಹಕಾರಿಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಾತ್ಮಕವಾಗಿ ಬೆಳೆಯಲು, ಹಣಕಾಸು ಒಳಗೊಳ್ಳುವಿಕೆ, ಹಣಕಾಸಿನ ಸಮರ್ಪಕ ಬಳಕೆ, ಲಾಭದ ಪರಿಕಲ್ಪನೆ, ಹೀಗೆ ನೂರಾರು ಉದ್ದೇಶಗಳನ್ನು ಈಡೇರಿಸಲು ಸಹಕಾರಿ ಆಧಾರಿತ ಆರ್ಥಿಕ ಅಭಿವೃದ್ಧಿ (Cooperative Based Economic Development-CBED) ಸಾಧಿಸಲು ಅನೇಕ ಕಾರ್ಯತಂತ್ರಗಳನ್ನು, ಯೋಜನೆಗಳನ್ನು ಪ್ರಾರಂಭಿಸಿದೆ.

1904 ರಿಂದ ಇಲ್ಲಿಯವರೆಗೂ ಸಹಕಾರ ಕ್ಷೇತ್ರವು ಸಾಕಷ್ಟು ಅಭಿವೃದ್ಧಿ ಸಾಧಿಸಿದ್ದರೂ ಅನೇಕ ಏಳು–ಬೀಳುಗಳಿಗೆ ಸಾಕ್ಷಿಯಾಗಿದೆ. ಇಂದು ಭಾರತದಲ್ಲಿ ಸಹಕಾರ ಕ್ಷೇತ್ರದ ಸಾಧನೆ ಮತ್ತು ಬೆಳವಣಿಗೆ ಎಲ್ಲರೂ ಬೆರಗುಗೊಳಿಸುವಷ್ಟರ ಮಟ್ಟಿಗೆ ಬೆಳೆದು ನಿಂತಿದೆ.

ಕೇಂದ್ರ ಸಹಕಾರ ಸಚಿವಾಲಯವು ಅಸ್ತಿತ್ವಕ್ಕೆ ಬಂದ ನಂತರ ಸಾಕಷ್ಟು ಬದಲಾವಣೆಗಳನ್ನು, ಸುಧಾರಣೆಗಳನ್ನು ನಾವು ಕಾಣಬಹುದು. ಸಹಕಾರ ಸಚಿವಾಲಯವು ಸೆಂಟ್ರಲ್ ರಜಿಸ್ಟ್ರಾರ್ ಆಫ್ ಕೋ ಆಪರೇಟಿವ್ ಸೊಸೈಟೀಜ್ (CRCS) ಎಂಬ ದಾಖಲಾತಿ ಸಂಸ್ಥೆಯನ್ನು ಸ್ಥಾಪಿಸಿದೆ. ಇದು ದೇಶದ ಎಲ್ಲ ಸಹಕಾರ ಸಂಘಗಳ ನೋಂದಣೀಕರಣ ಮತ್ತು ದಾಖಲೀಕರಣ ಮಾಡುವ ಮಹತ್ಕಾರ್ಯವನ್ನು ವಹಿಸಿಕೊಂಡಿದೆ.

ಮುಂದುವರೆದು, ಕೇಂದ್ರ ಸಹಕಾರಿ ಸಚಿವಾಲಯವು ಭಾರತದಲ್ಲಿ ಸಹಕಾರ ಚಳುವಳಿಯ ಬಲವರ್ಧನೆಗೆ ಅನೇಕ ಯೋಜನೆಗಳನ್ನು, ಕಾರ್ಯತಂತ್ರಗಳನ್ನು, ನೀತಿ–ನಿಯಮಗಳನ್ನು, ರೂಪುರೇಷೆಗಳನ್ನು ಸಿದ್ಧಗೊಳಿಸಿದ್ದು ಅವನ್ನು ಸಂಕ್ಷಿಪ್ತವಾಗಿ ನೋಡಬೇಕೆಂದರೆ :

1. ಪ್ರಾಥಮಿಕ ಸಹಕಾರಿ ಸಂಘಗಳ ಗಣಕೀಕರಣ: ಕೇಂದ್ರಿಯ ಸಹಕಾರ ಸಚಿವಾಲಯದ ಅತ್ಯಂತ ಮಹತ್ವದ ಕಾರ್ಯವೆಂದರೆ ದೇಶದ ಎಲ್ಲ ಪ್ರಾಥಮಿಕ ಸಹಕಾರ ಸಂಘಗಳ ಗಣಕೀಕರಣ ಮಾಡುವುದಾಗಿದೆ. ಇಲ್ಲಿಯವರೆಗೂ ಒಂದೇ ರಾಷ್ಟ್ರೀಯ ಸಾಫ್ಟವೇರ್ ವ್ಯವಸ್ಥೆಯಡಿ ಒಟ್ಟೂ 63000 ಸಂಘಗಳನ್ನು ನಬಾರ್ಡ್ ನೊಂದಿಗೆ ಲಿಂಕ್ ಮಾಡಲಾಗಿದೆ. ಈ ಕಾರ್ಯಕ್ಕಾಗಿ ನಬಾರ್ಡ ಸಂಸ್ಥೆಯು ರಾಷ್ಟ್ರೀಯ ಸಮಗ್ರ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದೆ.
2. ಎಲ್ಲ ಪ್ರಾಥಮಿಕ ಸಹಕಾರ ಸಂಘಗಳಿಗೆ 'ಮಾದರಿ ಬೈಲಾ' (ಮಾಡೆಲ್ ಬೈಲಾ) ಅಭಿವೃದ್ಧಿ ಪಡಿಸಿ ಪೂರೈಸಲಾಗಿದೆ.
3. ಎಲ್ಲ ಪ್ರಾಥಮಿಕ ಸಹಕಾರಿ ಸಂಘಗಳು ಇನ್ನು ಮುಂದೆ ಸಿಎಸ್‌ಸಿ (CSC) ಸೇವೆಗಳನ್ನು ನೀಡುವುದರ ಮೂಲಕ ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳಬಹುದು.
4. ಎಲ್ಲ ಸಹಕಾರ ಸಂಘಗಳ ಮಾಹಿತಿಯನ್ನು ಒಂದೇ ಕಡೆ ಸಂಗ್ರಹಿಸಿಡಲು ರಾಷ್ಟ್ರೀಯ ಸಹಕಾರಿ ಡೆಟಾಬೇಸ್ (NCD) ಅನ್ನು

ಅಭಿವೃದ್ಧಿಪಡಿಸಲಾಗಿದೆ.

5. ಬಹುರಾಜ್ಯ ಸಹಕಾರಿ ಸಂಘಗಳ ಕಾಯಿದೆ–2002 ನ್ನು ತಿದ್ದುಪಡಿ ಮಾಡಿ ಇನ್ನೂ ಹೆಚ್ಚಿನ ಅವಕಾಶವನ್ನು, ಸ್ಪರ್ಧಾತ್ಮಕತೆಯನ್ನು ನೀಡಲಾಗಿದೆ.
6. ರಾಷ್ಟ್ರೀಯ ಸಹಕಾರ ನೀತಿಯ ರಚನೆಗೆ ಯೋಜನೆ ಹಾಕಿಕೊಳ್ಳಲಾಗಿದೆ.
7. ರೂ ಒಂದರಿಂದ ಹತ್ತು ಕೋಟಿವರೆಗೆ ಆದಾಯ ಹೊಂದಿರುವ ಸಹಕಾರ ಸಂಘಗಳ ಮೇಲಿನ ಸರ್ಚಾರ್ಜ್ ಅನ್ನು 12 ರಿಂದ 7 ಕ್ಕೆ ಇಳಿಸಲಾಗಿದೆ.
8. ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ (NCDC) ವು ಹಲವಾರು ಸಹಕಾರ ಉಪಕ್ರಮಗಳನ್ನು ಜಾರಿಗೆ ತಂದಿದೆ. ಅವುಗಳಲ್ಲಿ 'ಸ್ವಯಮ್ ಶಕ್ತಿ ಸಹಕಾರ್', 'ಡೈರಿ ಸಹಕಾರ್', 'ಧೀರ್ಘಾವಧಿ ಕೃಷಿಕ ಸಹಕಾರ್' ಮತ್ತು 'ನೀಲ್ ಸಹಕಾರ್' ಪ್ರಮುಖವಾಗಿವೆ.
9. ಪ್ರಾಥಮಿಕ ಸಹಕಾರ ಸಂಘಗಳು ಜಿಇಎಮ್ ಪೋರ್ಟಲ್ ನಲ್ಲಿ ನೋಂದಣಿ ಮಾಡಿಕೊಂಡು ಖರೀದಿ ಮತ್ತು ಮಾರಾಟ ಮಾಡಬಹುದಾಗಿದೆ.
10. ಸಹಕಾರ ಸಂಘಗಳಿಗೆ ಸಿಜಿಟಿಎಮ್ಎಸ್ಇ (CGTMSE) ಸ್ಕೀಮ್ ಅನ್ವಯ ಮಾಡಲಾಗಿದೆ.
11. ಸಹಕಾರ ಸಂಘಗಳಿಗೆ ರೂ. 20,000/– ಇದ್ದ ನಗದು ವ್ಯವಹಾರ ಮಿತಿಯನ್ನು ರೂ. 2,00,000/– ವರೆಗೆ ಏರಿಸಲಾಗಿದೆ.
12. ಮಿನಿಮಮ್ ಆಲ್ಟರ್ನೇಟಿವ್ ಟ್ಯಾಕ್ಸ್ (MAT) ಕಡಿತ: ಸಹಕಾರ ಸಂಘಗಳಿಗೆ ಅನ್ವಯವಾಗುವ MAT– ಮಿನಿಮಮ್ ಆಲ್ಟರ್ನೇಟಿವ್ ಟ್ಯಾಕ್ಸ್ ಮಿತಿಯನ್ನು ಶೇ. 18.50 ರಿಂದ ಶೇ 15 ಕ್ಕೆ ಇಳಿಸಲಾಗಿದೆ.
13. ಆದಾಯ ತೆರಿಗೆಯ ಸೆಕ್ಷನ್ 269ಎಸ್ಟಿ (269ST) ಯಿಂದ ಸಹಕಾರಿ ಸಂಘಗಳಿಗೆ ಮುಕ್ತಿ ನೀಡಲಾಗಿದೆ.
14. ಆದಾಯ ತೆರಿಗೆಯನ್ನು ಹೊಸ ಸಹಕಾರಿ (31.03.2024 ರ ವರೆಗೆ ವ್ಯವಹರಿಸುವ ಸಹಕಾರಿಗಳು) ಸಂಘಗಳಿಗೆ ಶೇ 30+ಕ್ಕಿಂತ ಹೆಚ್ಚು ತೆರಿಗೆ ವಿನಾಯ್ತಿ ನೀಡಲಾಗಿದೆ.
15. ಪ್ರತಿ ಗ್ರಾಮ ಪಂಚಾಯತ್ ಸರಹದ್ದಿನಲ್ಲಿ ಒಂದು ವಿವಿದೋದ್ದೇಶ ಸಹಕಾರಿ ಸಂಘ ತೆರೆಯಲುಯೋಜನೆ ಹಾಕಿಕೊಳ್ಳಲಾಗಿದೆ. ಮುಂದಿನ ಐದು ವರ್ಷಗಳಲ್ಲಿ ಇಂಥ ಎರಡು ಲಕ್ಷ ಸಂಘಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ.
16. ರಾಷ್ಟ್ರೀಯ ಸಹಕಾರ ವಿಶ್ವವಿದ್ಯಾಲಯ ಸ್ಥಾಪನೆಗೆ ಯೋಜನೆ ರೂಪಿಸಲಾಗಿದೆ.
17. ಪ್ರತಿ ಪ್ರಾಥಮಿಕ ಸಹಕಾರ ಸಂಘಗಳ ಆಧೀನದಲ್ಲಿ ಸಹಕಾರ ದಾಸ್ತಾನು ಮಳಿಗೆ ಸ್ಥಾಪಿಸುವ ಮೂಲಕ ಜಗತ್ತಿನ ಅತಿ ದೊಡ್ಡದಾದ ಸಹಕಾರ ದಾಸ್ತಾನು ಮಳಿಗೆ ಸ್ಥಾಪಿಸುವ ಯೋಜನೆ ರೂಪಿಸಲಾಗಿದೆ.
18. ಸಹಕಾರಿ ಸಂಘಗಳು ಇನ್ನು FPO ಗಳನ್ನು ಸ್ಥಾಪಿಸಲು ಅವಕಾಶ ಮಾಡಿಕೊಡಲಾಗಿದೆ.
19. ಸಹಕಾರ ಸಂಘಗಳ ನಗದು ವ್ಯವಹಾರ ನಡೆಸುವುದನ್ನು (ಟಿಡಿಎಸ್ ರಹಿತ) ಒಂದು ಕೋಟಿಯಿಂದ ಮೂರು ಕೋಟಿಗೆ ಹೆಚ್ಚಿಸಲಾಗಿದೆ (ಒಂದು ವರ್ಷಕ್ಕೆ).
20. ಕಬ್ಬು ಸಹಕಾರಿಗಳಿಗೆ ರೈತರಿಗೆ ನೀಡುವ ಹೆಚ್ಚುವರಿ ಬೆಲೆಯ ಮೇಲೆ ನೀಡಬೇಕಿರುವ ಹೆಚ್ಚುವರಿ ಆದಾಯ ತೆರಿಗೆಯನ್ನು ತೆಗೆದು ಹಾಕಲಾಗಿದೆ.
21. ಕಬ್ಬಿನ ಸಹಕಾರಿಗಳಿಗೆ ಧೀರ್ಘಕಾಲದ ಅಂದರೆ 2016–17 ಕ್ಕಿಂತ ಪೂರ್ವದ ರೈತರ ಬಾಕಿ ಪಾವತಿಯನ್ನು ಖರ್ಚುಗಳೆಂದು ಪರಿಗಣಿಸಿ ಆದಾಯ ತೆರಿಗೆಯಲ್ಲಿ ಲಾಭವನ್ನು ಪಡೆಯಬಹುದಾಗಿದೆ. ಈ ಲಾಭವು ಅಂದಾಜು 10,000 ಕೋಟಿಯಷ್ಟು ಆಗಲಿದೆ.
22. ಭಾರತೀಯ ಸಹಕಾರ ಬೀಜ್ ನಿಗಮ ಎಂಬ ಅಪೆಕ್ಸ್ ಸಂಸ್ಥೆಯ ಸ್ಥಾಪನೆಗೆ ಯೋಜನೆ ರೂಪಿಸಲಾಗಿದೆ.
23. ರಾಷ್ಟ್ರೀಯ ಆರ್ಗ್ಯಾನಿಕ್ ಸಹಕಾರ ನಿಗಮ ಸ್ಥಾಪನೆಗೆ ಯೋಜನೆ ರೂಪಿಸಲಾಗಿದೆ.
24. ಗುಣಮಟ್ಟದ ಸರಕುಗಳನ್ನು ರಫ್ತು ಮಾಡುವ ಸಹಕಾರಿಗಳಿಗೆ ಸಹಾಯ ಮಾಡಲು ರಾಷ್ಟ್ರೀಯ ಸಹಕಾರ ರಫ್ತು ನಿಗಮವನ್ನು ಸ್ಥಾಪಿಸುವ ಯೋಜನೆ ರೂಪಿಸಲಾಗಿದೆ.
25. ಸಹಕಾರ ಸಚಿವಾಲಯದ ವೆಬ್ ಸೈಟ್ http://cooperation.gov.inನ್ನು ಅಭಿವೃದ್ಧಿಪಡಿಸಲಾಗಿದೆ.

ಹೀಗೆ ನೂತನ ಕೇಂದ್ರ ಸಹಕಾರ ಸಚಿವಾಲಯವು ಕ್ರಾಂತಿಕಾರಕ ನಿರ್ಣಯಗಳನ್ನು ಕೈಗೊಂಡಿದೆ. ಇಂದು ಪ್ರತಿ ದಿನಕ್ಕೆ ಸುಮಾರು 2000 ದಷ್ಟು ದೂರುಗಳು ಮತ್ತು ಸುಮಾರು 1000 ದಷ್ಟು ಮನವಿಗಳು ಸಹಕಾರ ಸಚಿವಾಲಯದ ಬಾಗಿಲು ತಟ್ಟುತ್ತಿವೆ. ಅವನ್ನೆಲ್ಲಕ್ಕೂ ನಿಗದಿತ ಸಮಯದಲ್ಲೆ ಪರಿಹಾರ ನೀಡುತ್ತ ಬರುತ್ತಿರುವ ಸಹಕಾರ ಸಚಿವಾಲಯವು ಕೇವಲ ಎರಡು ವರ್ಷಕ್ಕಿಂತಲೂ ಕಡಿಮೆ ಅವಧಿಯಲ್ಲಿ ಐತಿಹಾಸಿಕವಾದ ಕಾರ್ಯಸಾಧನೆಯನ್ನು ಮಾಡಿದೆ. ಸಹಕಾರ ಕ್ಷೇತ್ರಕ್ಕೆ ಅವಶ್ಯವಿರುವ ಸಂಪನ್ಮೂಲಗಳ ಕ್ರೋಢಿಕರಣ, ಮೂಲ ಸೌಕರ್ಯಗಳ ಅಭಿವೃದ್ಧಿ, ತಂತ್ರಜ್ಞಾನದ ಬಳಕೆ, ಏಕರೂಪದ ಬೈಲಾ, ದಕ್ಷತೆಯಿಂದ ಕೂಡಿರುವ ಕಾರ್ಯಯೋಜನೆ, ಅಪೇಕ್ಸ್ ಸಂಸ್ಥೆಗಳ ಮೂಲಕ ಉತ್ತೇಜನ ಮತ್ತು ನಿಯಂತ್ರಣ, ಗಣಕೀಕರಣ, ಡಿಜಿಟಲೀಕರಣ, ಮಾನವ ಸಂಪನ್ಮೂಲಗಳ ಅಭಿವೃದ್ಧಿ, ತರಬೇತಿ ಮತ್ತು ಸರಿಯಾದ ಬಳಕೆ, ಲಾಭ ನಷ್ಟದ ಅಧ್ಯಯನ, ಮಾರುಕಟ್ಟೆಯ ತಂತ್ರಗಳು ಹೀಗೆ ಇನ್ನೂ ಹಲವಾರು ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅಧ್ಯಯನ, ಸಂಶೋಧನೆ, ಚರ್ಚೆ, ಚಿಂತನೆ ಸಹಕಾರ ಸಚಿವಾಲಯದಲ್ಲಿ ನಡೆಯುತ್ತಿದೆ.

ಕೊನೆಯದಾಗಿ, ಸಹಕಾರ ಸಚಿವಾಲಯದ ಸ್ಥಾಪನೆಯು ಭಾರತದಲ್ಲಿ ಸಹಕಾರ ಕ್ಷೇತ್ರಕ್ಕೆ ಹೊಸ ದಿಕ್ಕನ್ನೆ ಸೃಷ್ಟಿಸುವುದರೊಂದಿಗೆ ಇದೊಂದು ಎರಡನೇಯ ಸಹಕಾರ ಚಳುವಳಿ ಎಂದು ಬಣ್ಣಿಸಬಹುದು. ದೇಶದ ಎಲ್ಲ ಸಹಕಾರಿ ಸಂಸ್ಥೆಗಳು ಸಹಕಾರ ಸಚಿವಾಲಯದ ಕಾರ್ಯತಂತ್ರಗಳನ್ನು, ಯೋಜನೆಗಳನ್ನು, ನೀತಿ ನಿಯಮಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡರೆ ಈಡೀ ಜಗತ್ತಿಗೇ ನಮ್ಮ ಸಹಕಾರಿ ಕ್ಷೇತ್ರ ಮಾದರಿಯಾಗಿ ಬೆಳೆಯುವಲ್ಲಿ ಯಾವುದೇ ಸಂಶಯವಿಲ್ಲ.

